Sri A. G. RAMACHANDRA RAO.—No. I beg to submit that the Select Committee may be directed to submit the report within a week's time.

Mr. SPEAKER.—The question is :

"That the Bill be referred to a Select Committee consisting of the following members :—

Janab J. Mohamed Imam
Sriyuths—
H. S. Rudrappa
H. C. Linga Reddy
K. G. Thimme Gowda
M. Linganna
D. Devaraj Urs
Srimathi B. L. Subbamma
Sriyuths—
B. Hutche Gowda
A. Bheemappa Naik
H. K. Veeranna Gowdh
Mulka Govinda Reddy
M. Shankar Linge Gowdh

with instructions to report within a week."

The motion was adopted.

Mr. SPEAKER.—The Hon'ble Minister for Law and Education will be a member and also the Chairman of the Select Committee.

BUDGET FOR 1952-53—GENERAL DISCUSSION—(*Concluded*).

FIRST STAGE—(*Concluded*).

(Several Hon'ble Members were found standing to speak.)

Mr. SPEAKER.—We have only two hours before us and there are as many as 22 Members standing. I do not know how to allot time.

ಜನಾಬ್ ಜೆ. ಮಹಮದ್ ಇಮಾಂರವರು (ಜಗಳೂರು).—ಟ್ರೆಜರಿ ಬೆಂಚಿನ ಸದಸ್ಯರುಗಳ ಅಭಿಪ್ರಾಯ ನಮಗಾಗಲೇ ಗೊತ್ತೇ ಇದೆ. ಅವರೆಲ್ಲರೂ ಬಡ್ಜೆಟ್ಟನ್ನು ಸ್ವಾಗತಿಸುತ್ತಾರೆಂಬುದು ತಿಳಿದೇ ಇದೆ. ಆದ್ದರಿಂದ ಬೇರೆ ಅಭಿಪ್ರಾಯವನ್ನು ಕೊಡುವ ಈ ಕಡೆಯವರಿಗೆ ಹೆಚ್ಚಿಗೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Mr. SPEAKER.—I think two or three Hon'ble Members on the right may take the opportunity not exceeding 10 minutes each. Now, Sri R. Ananthararaman may speak.

ಶ್ರೀ ಆರ್. ಅನಂತರಾಮನ್‌ರವರು (ಚಾಮರಾಜಪೇಟೆ).—ಅಧ್ಯಕ್ಷರೇ, ಈ ಹಣಕಾಸಿನ ಆಯವ್ಯಯದ ಮೇಲೆ ಭಾಷಣಮಾಡುತ್ತಾ ಸಭಾನಾಯಕರೂ, ವಿರೋಧಪಕ್ಷದ ಮುಖಂಡರೂ ಮತ್ತು ಇತರ ಅನೇಕ ಸ್ನೇಹಿತರೂ ಎಲ್ಲ ವಿಚಾರಗಳನ್ನೂ ತಿಳಿಯಪಡಿಸಿದ್ದಾರೆ. ಆದ್ದರಿಂದ ಆ ವಿಷಯದಲ್ಲಿ ಹೆಚ್ಚಿಗೆ ಹೇಳದೆ ಒಂದೆರಡು ಮಾತುಗಳಲ್ಲಿ ಹೇಳಿ ಮುಗಿಸುತ್ತೇನೆ.

ಈ ಬಡ್ಜೆಟ್ಟನ್ನು ನಾನು ಬಹಳ ವಿನಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದನ್ನು ಸಭೆಯಮುಂದಿಡುತ್ತಾ ನಮ್ಮ ಮುಖಂಡರಾದ ಶ್ರೀಮಾನ್ ಹನುಮಂತಯ್ಯನವರು ಭಾಷಣ ಮಾಡಿದ್ದರಲ್ಲಿ ಒಂದು ಮಹತ್ವವಿದೆ; ಏನೆಂದರೆ, ವಯಸ್ಕರ ಮತದಾನ ಪದ್ಧತಿಯ ಮೇಲೆ ಆರಿಸಿ ಬಂದ ಈ ಸಭೆಯ ಸದಸ್ಯರ ಮುಖಂಡರಾಗಿ ಅವರು ಭಾಷಣಮಾಡಿದ್ದಾರೆ. ಆ ಬಗ್ಗೆ ನನ್ನ ಸ್ನೇಹಿತರೆಲ್ಲರೂ ಅನೇಕ ಒಳ್ಳೆಯ ಮಾತುಗಳನ್ನಾಡಿದ್ದಾರೆ. ಒಂದು ವೈಶಿಷ್ಟ್ಯ ಇದರಲ್ಲಿ ವಾಸ್ತವವಾಗಿ ಕಂಡುಬರುತ್ತದೆ. ಹಿಂದಿನ ಅನೇಕ ಬಡ್ಜೆಟ್ಟುಗಳನ್ನು ಓದುವ ಮತ್ತು ಕೇಳುವ ಅವಕಾಶ ನನಗಿತ್ತು. ಅದರಲ್ಲಿ ನಾನು ನೋಡಿರುವಂತೆ ಸಾಮಾನ್ಯ ಜನರಿಗೆ ಆ ಅಂಕಿ ಅಂಶಗಳಾವವೂ ತಿಳಿಯುವಹಾಗೆಯೇ ಇರುತ್ತಿರಲಿಲ್ಲ. ಆದರೆ ಈ ಬಡ್ಜೆಟ್ಟನ್ನು ನೋಡುವುದಾದರೆ ಯಾವೊಬ್ಬ ಸಾಮಾನ್ಯ ಮನುಷ್ಯನಿಗೂ ಕೂಲಿಗಾರರಿಗೂ ಸಹ ಗೊತ್ತಾಗುವ ಹಾಗೆ ಅಂಕಿ ಅಂಶಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅದೂ ವಾಸ್ತವವಾದ ಅಂಕಿ ಅಂಶಗಳನ್ನು ಜನಸಮುದಾಯದ ಮುಂದಿಟ್ಟು ನಮ್ಮಲ್ಲಿ 1 ಕೋಟಿ 1 ಲಕ್ಷ ರೂಪಾಯಿಗಳ ಖೋತಾ ಇದೆಯೆಂದು ತಿಳಿಯಪಡಿಸಿದ್ದಾರೆ. ಇದೇ ಒಂದು ವೈಶಿಷ್ಟ್ಯ.

ಇನ್ನು ನಮ್ಮ ಸಂಸ್ಥಾನದ ವ್ಯವಸಾಯಾಭಿವೃದ್ಧಿಯ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸಾಧಾರಣವಾಗಿ ನಮ್ಮ ಸಂಸ್ಥಾನದಲ್ಲಿ 81·2 ಲಕ್ಷ ಎಕರೆಗಳಷ್ಟು ಭೂಮಿ ಹಿಡುವಳಿಯಲ್ಲಿದೆ. ಅದರಪೈಕಿ 63·7 ಲಕ್ಷ ಎಕರೆಗಳು ವ್ಯವಸಾಯಕ್ಕೆ ಯೋಗ್ಯವಾಗಿವೆ. ಉಳಿವ ಸುಮಾರು 19·1 ಲಕ್ಷ ಎಕರೆಗಳು ಬಂಜರು ಬಿದ್ದಿದೆ. ಈ ಬಂಜರು ಭೂಮಿಯನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಬೇಕೆಂದು 1951ನೆಯ ಇಸವಿಯಲ್ಲಿ Cultivation of Fallow Lands Act ಎಂದು ಒಂದು ಕಾನೂನನ್ನು ಜಾರಿಗೆ ತಂದರು. ಆದರೂ ಈ ಕಾನೂನನ್ನು ಸರಿಯಾಗಿ ಕಾರ್ಯತಃ ಜಾರಿಮಾಡದೆ ಇರುವುದು ಬಹಳ ವಿಷಾದಕರ. ಏಕೆಂದರೆ, ನೂರಾರು ಎಕರೆ ಭೂಮಿ ಇರುವವರು ದೊಡ್ಡ ದೊಡ್ಡ ಜಮೀನ್ದಾರರು ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ವಾಸಮಾಡುತ್ತಿದ್ದು ಅವರು ಜಮೀನುಗಳನ್ನು ವ್ಯವಸಾಯಮಾಡಿಸದೆ ಪಾಳುಬಿಟ್ಟಿರುವುದು ಅನೇಕವಾಗಿವೆ. ಅಂಥ ಜಮೀನುಗಳನ್ನು ಕಿತ್ತುಕೊಂಡು ವ್ಯವಸಾಯಮಾಡತಕ್ಕಂಥ ಬೇರೆ ಜನರಿಗೇಕೆ ಕೊಡಲಿಲ್ಲ? ಮಂತ್ರಿವರ್ಯರು ಈಗಲಾದರೂ ಆದಷ್ಟು ಬೇಗನೆ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಂಡು ಅಂಥ ಜಮೀನುಗಳನ್ನು ಕಿತ್ತುಕೊಂಡು ಬೇರೆಯವರಿಗೆ ಹಂಚಬೇಕೆಂದು ಹೇಳುತ್ತೇನೆ.

ಆ ಮೇಲೆ ಭೂಸುಧಾರಣೆಯ ವಿಷಯದಲ್ಲಿ ಈ ಮಂತ್ರಿಮಂಡಳ ಕ್ರಾಂತಿಕಾರಕವಾದ ಭೂ ಸುಧಾರಣೆಗಳನ್ನು ಮಾಡುತ್ತಾರೆಂದು ನಂಬಿದ್ದೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು 'ಇನಾಂ ರದ್ದಿಯಾತಿ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ತರುತ್ತೇವೆ, ಅದ

ರಲ್ಲಿ ಅನೇಕ ಹೆಚ್ಚಿನ ಸುಧಾರಣೆಗಳನ್ನು ತರುತ್ತೇವೆ' ಎಂದು ಸೂಚಿಸಿದರು. ಈ ವಿಚಾರದಲ್ಲಿ ಆದಷ್ಟು ಬೇಗನೆ ಸುಧಾರಣೆ ತರುವುದರ ಆವಶ್ಯಕತೆಯಿದೆ. ಇಲ್ಲದಿದ್ದರೆ ಮುಂದೆ ದೇಶದಲ್ಲಿ ಆಹಾರ ಪರಿಸ್ಥಿತಿ ಬಹಳ ಕಷ್ಟಕ್ಕೆ ಬರುತ್ತದೆ. ರೈತ ತನ್ನದೇ ಭೂಮಿಯಾದರೆ ಚೆನ್ನಾಗಿ ವ್ಯವಸಾಯಮಾಡುತ್ತಾನೆಯೇ ಹೊರತು ಇನ್ನೊಬ್ಬರ ಜಮೀನಿಗೇಕೆ ಗೊಬ್ಬರ ಹಾಕಿ ಉತ್ತಮಪಡಿಸಲಿ ಎಂದು ಆಲಸ್ಯದಿಂದ ಚೆನ್ನಾಗಿ ಕೆಲಸಮಾಡುವುದಿಲ್ಲ. ಈ ಕಾರಣ ಭೂಸುಧಾರಣೆಯಾಗಬೇಕಾದ್ದು ಅವಶ್ಯಕ.

ನಾಲ್ಕನೆಯದಾಗಿ, ಈಗ ನಮ್ಮ ಸಂಸ್ಥಾನದಲ್ಲಿ 63·7 ಲಕ್ಷ ಎಕರೆಗಳಷ್ಟು ಜಮೀನುಗಳು ವ್ಯವಸಾಯಕ್ಕೆ ಯೋಗ್ಯವಾಗಿರುವುದರಲ್ಲಿ 7 ಲಕ್ಷ ಎಕರೆಗಳು ತರಿ ಜಮೀನಾಗಿವೆ; 26 ಲಕ್ಷ ಎಕರೆಗಳು ಖುಷ್ಕಿಯಾಗಿವೆ. ಇವುಗಳಿಂದ 9.5 ಲಕ್ಷ ಟನ್ ದವಸಧಾನ್ಯಗಳು ಬೆಳೆಯಾಗುತ್ತಿವೆ. ಸಾಮಾನ್ಯವಾಗಿ ಎಲ್ಲಾ ಜನರಿಗೂ 12 ಔನ್ಸ್‌ನಂತೆಯೂ ಶ್ರಮಜೀವಿಗಳಿಗೆ 16 ಔನ್ಸ್‌ಗಳಂತೆಯೂ ದವಸ ಕೊಡಬೇಕೆಂದು ಲೆಕ್ಕಹಾಕಿಕೊಂಡರೆ ನಮಗೆ ಒಂದು ವರ್ಷಕ್ಕೆ 12.5 ಲಕ್ಷ ಟನ್ ದವಸ ಬೇಕಾಗುತ್ತದೆ. ಅಂದರೆ 3 ಲಕ್ಷ ಟನ್ ದವಸ ನಮಗೆ ಕಡಮೆ ಬೀಳುತ್ತದೆ. ಇದಕ್ಕಾಗಿ ಹಿಂದಿನ ಸರ್ಕಾರದವರು 'ಗ್ರೋ ಮೋರ್ ಫುಡ್' ಯೋಜನೆಯೊಂದನ್ನು ಹಾಕಿಕೊಂಡು ಅದಕ್ಕಾಗಿ 2,18,00,000 ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇಂಡಿಯಾಸರ್ಕಾರದವರೂ ಇವಕ್ಕೆ ಸಹಾಯಮಾಡಿದ್ದಾರೆ. ನಮ್ಮ ಸರ್ಕಾರದವರೂ ಕೈಲಾದಮಟ್ಟಿಗೆ ಸಹಾಯಮಾಡಿದ್ದಾರೆ. ಸುಮಾರು 3,300 ಮೇಜರ್ ಕೆರೆಗಳನ್ನು ರಿಪೇರಿಮಾಡಿದ್ದಾರೆ; 9 ರಿಸರ್ವಾಯರ್‌ಗಳನ್ನು ಸರಿಮಾಡಿಸಿದ್ದಾರೆ; ಮತ್ತು 330 ಕೆರೆಗಳ ಹೂಳು ತೆಗೆಯಿಸಿದ್ದಾರೆ. ಇದರಿಂದಾಗಿ ಒಟ್ಟು 59,000 ಎಕರೆಗಳನ್ನು ವ್ಯವಸಾಯಮಾಡುವುದಕ್ಕೆ ಸಾಧ್ಯವಾಗಿದೆ. ಗ್ರೋ ಮೋರ್' ಫುಡ್ ಕ್ಯಾಂಪೇನಿನ ಒಂದು ಕಾರ್ಯಕ್ರಮದಂತೆ 1,69,000 ಎಕರೆಗಳನ್ನು ಜನರಿಗೆ ಹಂಚಿಕೆಮಾಡಿದ್ದಾರೆ ಇಷ್ಟೆಲ್ಲಾ ಮಾಡಿದ್ದರೂ ಎಷ್ಟು ಹೆಚ್ಚಿಗೆ ಬೆಳೆದಿದ್ದೇವೆಂದು ನೋಡಿದರೆ ಕೇವಲ 8,000 ಟನ್‌ಗಳು ಮಾತ್ರ. ಇನ್ನೂ ಹೆಚ್ಚಿಗೆ ಬೆಳೆದುಕೊಳ್ಳಬೇಕಾದದ್ದು ಎರಡು ಲಕ್ಷ ಟನ್‌ಗಳಷ್ಟಿದೆ. ಇದಕ್ಕೆ ಕಾರಣಗಳು ಅನೇಕವಾಗಿವೆ. ಮಳೆ ಸರಿಯಾಗಿ ಬೀಳಲಿಲ್ಲ. ಹೆಚ್ಚಿಗೆ ಆಹಾರ ಬೆಳೆಯುವುದಕ್ಕೆ ಜಮೀನು ಕೊಟ್ಟರೂ, ಅದೆಲ್ಲಾ ಸಾಮಾನ್ಯವಾಗಿ ಸಾಹುಕಾರರಿಗೆ ಬಹುಮಟ್ಟಿಗೆ ಸೇರಿತು. ಅವರುಗಳು ತಾವೇ ಕೆಲಸಮಾಡುವುದಕ್ಕಾಗದೆ ಜಮೀನುಗಳನ್ನು ಬಂಜರು ಬಿಟ್ಟಿದ್ದಾರೆ. ಹೀಗಾಗಿ ಹೆಚ್ಚಿಗೆ ಜಮೀನುಗಳನ್ನು ಕೊಟ್ಟರೂ ಪ್ರಯೋಜನವಾಗಲಿಲ್ಲ. ಜೊತೆಗೆ ಕಂಟ್ರೋಲ್ ಬೇರೆ ಇದ್ದುದರಿಂದ ರೈತರನೇಕರು ತಾವೇಕೆ ಕಷ್ಟಪಟ್ಟು ದವಸಧಾನ್ಯಗಳನ್ನು ಬೆಳೆದು ಸರ್ಕಾರದವರಿಗೆ ಕೊಡಬೇಕು ಎಂದಾಲೋಚಿಸಿ ಕಡಲೇಕಾಯಿ ಮುಂತಾದ ವ್ಯಾಪಾರದ ದಿನಸಿಗಳನ್ನು ಬೆಳೆಯುವುದಕ್ಕೆ ಆರಂಭಮಾಡಿದರು, ಹೀಗಾಗಿ ಸಂಸ್ಥಾನವು ಆಹಾರವಿಲ್ಲದೆ ಕುಗ್ರಾಮಾವಸ್ಥೆಗೆ ಬರಲು ಅವಕಾಶವಾಯಿತು. ಇನ್ನಾದರೂ ಕಂಟ್ರೋಲ್ ತೆಗೆದಮೇಲೆ, ಇತರ ಪದಾರ್ಥಗಳ ಬೆಳೆಯೂ ಬಿದ್ದಿರುವ ಈ ಸಂದರ್ಭದಲ್ಲಿ, ಹೆಚ್ಚಿಗೆ ದವಸಧಾನ್ಯಗಳನ್ನು ಬೆಳೆಸುವುದಕ್ಕೆ ಅನುಕೂಲವಾದ ಅವಕಾಶವಿದೆ. ಅಲ್ಲದೆ ಈ ಸಾರಿ ಸರ್ಕಾರದವರು 65 ಲಕ್ಷ ರೂಪಾಯಿಗಳನ್ನೊದಗಿಸಿ ದೊಡ್ಡ ಕೆರೆಗಳನ್ನೂ ರಿಸರ್ವಾಯರುಗಳನ್ನೂ ಕಟ್ಟುವುದಕ್ಕೂ ಹೆಚ್ಚು ಆಹಾರಾಭಿವೃದ್ಧಿಗೂ ಒದಗಿಸಿದ್ದಾರೆ. ಹೆಚ್ಚಿಗೆಕೊಡುವುದಕ್ಕೆ ಸಾಧ್ಯವಿಲ್ಲದಿರುವ ಈ ಸಮಯದಲ್ಲಿ ಇಷ್ಟು ಹಣವನ್ನೊದಗಿಸಿರುವುದಕ್ಕಾಗಿ ಅವರನ್ನು ಎಷ್ಟು ಹೊಗಳಿದರೂ ತೀರದು.

ಹಿಂದೆ ಅಂತೂ ಹೆಚ್ಚಿಗೆ ಬೆಳೆಯುವುದಕ್ಕಾಗಲಿಲ್ಲ. ಈಗಲಾದರೂ ಕ್ರಾಂತಿಕಾರಕ ಭೂಸುಧಾರಣೆಯಾಗಬೇಕು ಮತ್ತು ಹೆಚ್ಚಿಗೆ ಆಹಾರ ಬೆಳೆಯಬೇಕು. ಒಂದು ವರ್ಷದಲ್ಲಲ್ಲದಿದ್ದರೂ ಈ ಐದು ವರ್ಷಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರದಲ್ಲಿರುವಾಗಲೇ ಈ ನಮ್ಮ ದೇಶದ ಕುಗ್ರಾಮಸ್ಥಿತಿ ತೊಲಗುವಂತೆ ಕೆಲಸ ಮಾಡಬೇಕೆಂಬುದೇ ನನ್ನ ಪ್ರಾರ್ಥನೆ. ನಮಗೆ ಎಲ್ಲ ಸಮಸ್ಯೆಗಳಿಗಿಂತಲೂ ಮುಖ್ಯವಾದದ್ದು ಆಹಾರಸಮಸ್ಯೆ. ಪ್ರಪಂಚದ ಎಲ್ಲಾ ಕಡೆಯೂ ಈ ಕಷ್ಟವಿದೆ. ಆದ್ದರಿಂದ ನಮ್ಮ ಮೈಸೂರು ಸರ್ಕಾರದವರು ಹೆಚ್ಚಿಗೆ ಆಸಕ್ತಿ ವಹಿಸಿ ವ್ಯವಸಾಯವನ್ನು ಮುಂದುವರಿಸಬೇಕೆಂದು ಹೇಳುತ್ತೇನೆ,

ಆಮೇಲೆ, ಬೆಂಗಳೂರಿನ ಟ್ರಸ್ಟ್ ಬೋರ್ಡಿನ ವಿಚಾರದಲ್ಲಿ ಒಂದು ಮಾತು. ಟ್ರಸ್ಟ್ ಬೋರ್ಡಿನವರು ಬೆಂಗಳೂರಿನ ಸುತ್ತಮುತ್ತಲೂ ಅನೇಕ ಸೈಟುಗಳನ್ನು ಮಾಡಿದ್ದಾರೆ. ಎಷ್ಟೋ ಅರಿಕೆಗಳನ್ನು ಕೊಟ್ಟರೂ 'ನಮ್ಮ ಸಿಟಿ ಮಧ್ಯೆ ಅನೇಕ ಕೊಳಕು ಪ್ರದೇಶಗಳಿವೆ, ಅವುಗಳನ್ನೆಲ್ಲಾ ಚೊಕ್ಕಟಮಾಡಿಸಿ ಸೈಟುಗಳನ್ನು ಮಾಡಿ ಜನರಿಗೆ ಕೊಡಿ' ಎಂದರೂ ಅವರು ಅತ್ತಕಡೆ ಗಮನಕೊಡಲಿಲ್ಲ. ಅದಕ್ಕೆ ಬದಲಾಗಿ ಬೆಂಗಳೂರಿನ ಹೊರಗಡೆ ರೈತರ ಜಮೀನುಗಳನ್ನು ಅಕ್ವೈರು ಮಾಡಿಕೊಂಡು ಸೈಟುಗಳನ್ನು ಮಾಡುತ್ತಿದ್ದಾರೆ. ಈ ವಿಚಾರವನ್ನು ನಾನು ಮಂತ್ರಿವರ್ಯರ ಗಮನಕ್ಕೂ ತಂದಿದ್ದೇನೆ. ಆ ರೈತರುಗಳು ಸರ್ಕಾರದವರು ತಮ್ಮ ಭೂಮಿಯನ್ನು ಕಿತ್ತುಕೊಂಡು ತಮ್ಮನ್ನೆಲ್ಲಾ ಬಡವರಾಗಿ ನಿರ್ಗತಿಕರಾಗಿ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ನಮ್ಮ ಬೆಂಗಳೂರು ಸಿಟಿಯಲ್ಲಿ 46 ಕೊಳಕು ಪ್ರದೇಶಗಳಿವೆಯೆಂದು ನಾನೇ ತಿಳಿಸಿದ್ದೇನೆ. ಅವುಗಳನ್ನೆಲ್ಲಾ ಶುಚಿಮಾಡಿದ್ದರೆ ಎಷ್ಟೋ ಚೆನ್ನಾಗಿತ್ತು. ಇನ್ನು ಮುಂದಾದರೂ ಈ ವಿಚಾರದಲ್ಲಿ ಕಾರ್ಯಕ್ರಮವನ್ನು ಕೈಕೊಳ್ಳುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ ಇನ್ನೊಂದು ವಿಚಾರವೇನೆಂದರೆ, ಹಾಲಿನ ಸಮಸ್ಯೆ. ಬೆಂಗಳೂರು ನಗರಕ್ಕೆ ಸುಮಾರು ದಿನಕ್ಕೆ 26 ಸಾವಿರ ಸೇರು ಹಾಲು ಬೇಕಾಗುತ್ತದೆ. ಇದನ್ನು ಸುಮಾರು 50 ಮೈಲಿ ದೂರದಿಂದ ಕೂಡ ತಂದು ಸರಬರಾಯಿ ಮಾಡುತ್ತಾರೆ. ಹಳ್ಳಿಯವರು ತಮ್ಮ ಮಕ್ಕಳ ಬಾಯಿಗೆ ಕುಕ್ಕೆ ಕಟ್ಟಿ ಹಾಲನ್ನು ಬಸ್ಸುಗಳ ಮೇಲೆ, ರೈಲಿನಲ್ಲಿ ಇಲ್ಲಿಗೆ ತಂದು ಹಾಕುತ್ತಾರೆ. ಹಳ್ಳಿಗಳಲ್ಲಿ ಮಕ್ಕಳು ಒಂದು ಔನ್ಸ್ ಹಾಲನ್ನು ಕೂಡ ಕಾಣುವ ಹಾಗಿಲ್ಲ. ಬೆಂಗಳೂರಿನಲ್ಲಿ ಧನಿಕರು ಹಣವನ್ನು ಕೊಟ್ಟು ತೆಗೆದುಕೊಳ್ಳುತ್ತಾರೆ. ಇದಕ್ಕೆ ಸರ್ಕಾರದವರು ಮುಖ್ಯವಾಗಿ ಗಮನ ಕೊಡಬೇಕು. ಈ ಸಂಬಂಧವಾಗಿ ಒಂದು ಸಮಿತಿಯನ್ನು ಕೂಡ ಮಾಡಿದ್ದಾರೆ. ಅವರು ಈ ಸಮಸ್ಯೆಯನ್ನು ಯೋಚನೆಮಾಡುತ್ತಿದ್ದಾರೆ. ಬೆಂಗಳೂರು ಕಾರ್ಪೊರೇಷನವರು, ಒಂದು ಡೈರಿ ಮಾಡುವುದಾದರೆ 60 ಸಾವಿರ ರೂಪಾಯಿ ಸಾಲ ಕೊಡುವುದಾಗಿ ತೀರ್ಮಾನಿಸಿ, ಸರ್ಕಾರದವರನ್ನು ಪ್ರಾರ್ಥನೆ ಮಾಡಿದ್ದರು. ಇದುವರೆಗೆ ಸರ್ಕಾರದವರು ಅದನ್ನು ಆಲೋಚನೆಮಾಡಿಲ್ಲ. ಹಾಲಿನಸಮಸ್ಯೆ ಬಹಳ ಮುಖ್ಯವಾದುದು. ನಮಗೆ ತಿಳಿದಿರುವಂತೆ ಆ ಸಮಿತಿಯವರು ತಮ್ಮ ವರದಿಯಲ್ಲಿ 'ಹೋಟಲುಗಳವರೆಲ್ಲರೂ ಹಾಲಿನ ಪುಡಿಯನ್ನುಪಯೋಗಿಸಬೇಕು; ಇತರರು

(ಶ್ರೀ ಆರ್. ಅನಂತರಾಮನ್‌ರವರು.)

ಮಕ್ಕಳಿಗೆ ಒಳ್ಳೆಯ ಹಾಲು ಕೊಡಬೇಕು ' ಎಂದು ಸಲಹೆ ಮಾಡಿರುವಂತೆ ಕಾಣುತ್ತದೆ.

Sri H. SIDDAVEERAPPA.—The Report is under the active consideration of the Government.

ಶ್ರೀ ಆರ್. ಅನಂತರಾಮನ್‌ರವರು.—ಹಾಲಿನ ಸಮಸ್ಯೆಯನ್ನು ತಕ್ಷಣ ಪರಿಹಾರ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ಶ್ರೀಮಾನ್ ಮರಿಯಪ್ಪನವರು ಮಂತ್ರಿಗಳಾಗಿದ್ದಾಗ ಬೊಂಬಾಯಿಗೆ ಹೋಗಿ ಅಲ್ಲಿ ಸರ್ಕಾರದವರು ಹಾಲಿನ ಸರಬರಾಯಿಗೆ ಎಷ್ಟು ಉತ್ತೇಜನ ಕೊಡುತ್ತಿದ್ದಾರೆಂಬುದನ್ನು ಚೆನ್ನಾಗಿ ತಿಳಿದುಕೊಂಡು ಬಂದಿದ್ದರು. ಈ ವರ್ಷ ನಮ್ಮ ಸರ್ಕಾರದಲ್ಲಿ ಹಣ ಬಹಳ ಕಡಮೆಯಾಗಿದೆ. ಆದಕಾರಣ ಮುಂದಿನ ವರ್ಷವಾದರೂ ಇದಕ್ಕೆ ತಕ್ಕ ಏರ್ಪಾಡುಮಾಡಬೇಕು. ಹೆಸರುಘಟ್ಟ ಫಾರಂನಲ್ಲಿ ಸಾವಿರಾರು ಎಮ್ಮೆಗಳನ್ನು ಇಟ್ಟು ಬೆಂಗಳೂರಿಗೆ ಹಾಲಿನ ಸರಬರಾಯಿ ಮಾಡಬಹುದು.

Mr. SPEAKER.—I think the Hon'ble Member need not speak elaborately on this point in view of the Hon'ble Minister's statement that it is under the active consideration of Government.

ಶ್ರೀ ಆರ್. ಅನಂತರಾಮನ್‌ರವರು.—ಬೇಗ ಈ ಹಾಲಿನ ಸಮಸ್ಯೆಯನ್ನು ಪರಿಹಾರ ಮಾಡುತ್ತಾರೆಂದು ನಂಬಿ ಈ ಬಡ್ಜೆಟ್ಟನ್ನು ಸ್ವಾಗತಿಸುತ್ತೇನೆ.

ಶ್ರೀ ಬಿ. ರಾಚಯ್ಯನವರು (ಯಳಂದೂರು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, 1952-53ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿಯನ್ನು ವಿಮರ್ಶೆಮಾಡಬೇಕಾದರೆ, ಇದನ್ನು ಸ್ವಾಗತಿಸಬೇಕಾದರೆ ಅಥವಾ ಟೀಕೆ ಟಿಪ್ಪಣಿಗಳನ್ನು ಮಾಡಬೇಕಾದರೆ, ಇದರಲ್ಲಿರುವ ನ್ಯೂನತೆಗಳನ್ನು ಎತ್ತಿ ತೋರಿಸಿ ಸರಿಪಡಿಸಬೇಕಾದರೆ, ಇದು ಕೇವಲ ಅಂದಾಜಿನ ಪಟ್ಟಿ " ಆಕ್ಚ್ಯುಯಲ್ಸ್ ಅಲ್ಲ" ಎಂಬುದನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿದೆ. ಈ ಅಂದಾಜು ಪಟ್ಟಿಯಲ್ಲಿರುವ ರೀತಿಯಲ್ಲಿ ನಮ್ಮ ವರಮಾನವನ್ನು ಹೆಚ್ಚಿಸುವುದು, ಖರ್ಚು ಕಡಮೆಮಾಡುವುದು ಎಂಬುದನ್ನು ಗಮನಿಸಬೇಕಾಗಿದೆ. ವರಮಾನವನ್ನು ಹೆಚ್ಚಿಸುವ ವಿಷಯದಲ್ಲಿ ಸಂಸ್ಥಾನದಲ್ಲಿ ಈ ಅಂದಾಜು ಪಟ್ಟಿಯಲ್ಲಿ ಹಾಕಿರುವ ರೀತಿಯಲ್ಲಿ ಹೇಗೆ ವರಮಾನ ಕಡಮೆ ಬರುತ್ತದೆಂಬುದನ್ನು ಸೂಚಿಸುತ್ತೇನೆ.

ಕ್ಷಾಮ ಪರಿಸ್ಥಿತಿಯಿರುವುದು ತುಮಕೂರು, ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಮಾತ್ರವಲ್ಲ; ಮೈಸೂರು ಜಿಲ್ಲೆಯಲ್ಲಿಯೂ ಮಳೆ ಹೋಗಿ ಬೆಳೆಯಿಲ್ಲದೆ ಕ್ಷಾಮಪರಿಸ್ಥಿತಿ ತಲೆದೋರುವ ಕಾಲ ಬಂದಿದೆ. ಈ ಪರಿಸ್ಥಿತಿಯಲ್ಲಿ ಅಲ್ಲಿಯೂ ಕಂದಾಯದ ರಿಯಾಯಿತಿ ಕೊಡಬೇಕಾದ ಆವಶ್ಯಕತೆ ಒದಗಬಹುದು. ಈ ದೃಷ್ಟಿಯಿಂದ ಭೂಕಂದಾಯದಲ್ಲಿ ಎಷ್ಟು ಮಟ್ಟಿನ ಖೋತಾ ಬರಬಹುದೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಎರಡನೆಯದಾಗಿ, ಈ ವರ್ಷ ಇನ್ನೂ ಹೊಸ ಡಿಮ್ಯಾಂಡ್ ಬಂದಿಲ್ಲ ; ಅದು ಬಂದಾಗ ರೆಮಿಷನ್ ಕೊಡಬೇಕಾಗುತ್ತದೆ. ಅದನ್ನು ಇಲ್ಲಿ ತೋರಿಸಿಲ್ಲ, ಅದಕ್ಕೆ ಗಮನ ಕೊಟ್ಟಿಲ್ಲವೆಂದು ಕಾಣುತ್ತದೆ. ಇದರಿಂದ ಬಡ್ಜೆಟ್ಟಿನಲ್ಲಿ ಹೆಚ್ಚು ಖೋತಾ ಬರಬಹುದೆಂದು ಭಾವಿಸಲಾಗುತ್ತದೆ. ಖರ್ಚು ಕಡಿಮೆಮಾಡಬೇಕು, ಇದರಿಂದ ನಮ್ಮ ಆಯವ್ಯಯವನ್ನು ಸರಿಪಡಿಸಬೇಕು ಎಂಬುದು ಇನ್ನೊಂದು ಪ್ರಶ್ನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಪಟ್ಟಿಯನ್ನು ಮಂಡಿಸುವಾಗ ನಮ್ಮೆಲ್ಲರ ಸಹಾಯ, ಸಹಕಾರ, ಸಹಾನುಭೂತಿಗಳನ್ನು ಕೇಳಿದ್ದಾರೆ. ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆದರೆ ಅವರು ಯಾವ ಸಂದರ್ಭದಲ್ಲಿ ಅಧಿಕಾರವನ್ನು ವಹಿಸಿಕೊಂಡರು, ಆಗ ದೇಶ ಯಾವ ಸ್ಥಿತಿಯಲ್ಲಿತ್ತು, ಕಾಂಗ್ರೆಸ್‌ಪಕ್ಷ ಸರ್ಕಾರವನ್ನು ವಹಿಸಿಕೊಂಡ ಮೇಲೆ ಈಗ ಯಾವ ಸ್ಥಿತಿಗೆ ಬಂದಿದೆ ಎಂಬುದನ್ನು ನಾವು ಗಮನಿಸಬೇಕು. ಈ ಬಡ್ಜೆಟ್ಟನ್ನು ನಾನು ನೋಡಿದ್ದೇನೆ. 4½ ಕೋಟಿ ರೂಪಾಯಿಗಳು ಖೋತಾ ಬರುವುದನ್ನು ಒಂದು ಕೋಟಿ ರೂಪಾಯಿಗೆ ಇಳಿಸಿ ಸರ್ಕಾರದ ಆದಾಯವನ್ನು ತೋರಿಸಿದ್ದಾರೆ. ಇದಕ್ಕೆ ಮೆಚ್ಚಿಗೆ ಕೊಡಬೇಕು. ಆದರೆ ನಿಜವಾಗಿ ದುಷ್ಪರಿಣಾಮವೇನಿದೆಯೆಂದರೆ, ಈ ಬಡ್ಜೆಟ್ಟಿನಲ್ಲಿ ವಾಸ್ತವವಾದ ವಿಚಾರವನ್ನು ಸರಿಯಾಗಿ ತೋರಿಸದೆ ಮರೆಮಾಚಿದ್ದಾರೆಂದು ಹೇಳಬೇಕಾಗಿದೆ. ಈಗ 101·72 ಲಕ್ಷ ರೂಪಾಯಿ ಖೋತಾ ಬಂದಿದೆಯೆಂದು ಹೇಳಿದ್ದಾರೆ. ಆದರೆ ಕೂಲಂಕಷವಾಗಿ ನೋಡಿದರೆ 49·04 ಲಕ್ಷ ರೂಪಾಯಿಗಳನ್ನು ಷುಗರ್‌ಕೇನ್ ಸೆಸ್ ಫಂಡ್ ಮತ್ತು ಇತರ ಫಂಡುಗಳಿಂದ ತೆಗೆದುಕೊಂಡಿದ್ದಾರೆ. ಇದಕ್ಕೆ ಖರ್ಚು ತೋರಿಸಿದ್ದಾರೆ. ಈ ಕಾರಣದಿಂದ ಒಂದೂವರೆ ಕೋಟಿ ರೂಪಾಯಿ ನಿವ್ವಳ ಖೋತಾ ಬಂದಿದೆ. ಇದನ್ನು ಮರೆಮಾಚಿದ್ದಾರೆ. ಅಗಸನ ಮಾತು ಕೇಳಿ ರಾಮ ಹೆಂಡತಿಯನ್ನು ಕಾಡಿಗೆ ಕಳುಹಿಸಿದ ಹಾಗಿದೆ, ಇದು. ಏಕೆಂದರೆ.

Sri A. BHEEMAPPA NAIK.—If he has understood let him answer.

Janab J. MOHAMED IMAM.—They do not allow time to my friend to explain himself, Sir.

ಶ್ರೀ ಬಿ. ರಾಚಯ್ಯನವರು. ನಾನು ಬಡ್ಜೆಟ್ಟನ್ನು ಚೆನ್ನಾಗಿ ನೋಡಿದ್ದೇನೆ. ಹಿಂದಿನ ಮಂತ್ರಿವರ್ಯರು ಹೊಸ ತೆರಿಗೆಯನ್ನು ವಿಧಿಸದಿದ್ದರೆ ಆಯವ್ಯಯವನ್ನು ಸರಿತೂಗಿಸುವುದಕ್ಕೆ ಸಾಧ್ಯವಿಲ್ಲ ಎಂದು ಸೂಚನೆ ಕೊಟ್ಟಿದ್ದರು. ಈಗ ಮುಖ್ಯ ಮಂತ್ರಿಗಳು ' ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸರಿತೂಗಿಸಬೇಕಾದರೆ ಆವಶ್ಯಕತೆ ಬಿದ್ದರೆ ತೆರಿಗೆಯನ್ನು ಹಾಕಲೇಬೇಕಾಗುತ್ತದೆ; ನಮ್ಮ ಸಂಸ್ಥಾನದಲ್ಲಿ ತರೀ ಕಂದಾಯವನ್ನು ಹೊರದೇಶಗಳಲ್ಲಿ ಹಾಕಿರುವ ರೀತಿಯಲ್ಲಿ ಹಾಕಿಲ್ಲ; ಇಲ್ಲಿ ಬಹಳ ಕಡಮೆ ' ಎಂದು ಹೇಳಿದರು. ಸಾಧಾರಣವಾಗಿ ರೈತರ ಮೇಲೆ ತೆರಿಗೆ ಹಾಕುವಾಗ ಹೊರದೇಶಗಳಿಗೆ ಹೋಲಿಸುತ್ತಾರೆ. ಆದರೆ ಹೊರದೇಶಗಳಲ್ಲಿ ರೈತರಿಗೆ ಏನು ಸೌಲಭ್ಯಗಳನ್ನೊದಗಿಸುತ್ತಾರೆಂಬುದನ್ನು ' ನೋಡುವುದಿಲ್ಲ. ಇದು ರೈತರ ದೌರ್ಭಾಗ್ಯ. ವರಮಾನವನ್ನು ಹೆಚ್ಚಿಸುವುದರಲ್ಲಿ, ರಿಟ್ರೆಂಚ್‌ಮೆಂಟ'ಮಾಡ ವುದರಲ್ಲಿ 30 ಲಕ್ಷ ಉಳಿತಾಯ ತೋರಿಸಿದ್ದಾರೆ. ಈ ರಿಟ್ರೆಂಚ್‌ಮೆಂಟ್ ಎಂಬುದು ಕೆಳದರ್ಜೆ ನೌಕರರಿಗೆ ಜಾಸ್ತಿ ಸಂಕಟವನ್ನುಂಟುಮಾಡಿದೆ. ಅವರ ಜೀವನಕ್ಕೆ ತೊಂದರೆ ಬಂದಿದೆ. ಮೊದಲಿನಿಂದಲೂ ಇದನ್ನೇ ನಂಬಿಕೊಂಡಿದ್ದವರಿಗೆ ತೊಂದರೆಯಾಗಿದೆ. ಇದಕ್ಕೆ ಬದಲು ಮಂತ್ರಿಮಂಡಲದಲ್ಲಿ ಸಂಖ್ಯೆಯನ್ನು ಹೆಚ್ಚುಮಾಡದೆ ಕಡಮೆ ಮಾಡಿ. ನಿಷ್ಪ್ರಯೋಜಕವಾದ ವಿಧಾನಪರಿಷತ್ತನ್ನು ಜಾಗ್ರತೆ ತೆಗೆಯಿರಿ. ಡಿ.ಐ.ಜಿ. ಹುದ್ದೆ ಮೊದಲು ಇರ

ಲಿಲ್ಲ, ಹೊಸದಾಗಿ ಮಾಡಿದಿರಿ. ಡಿ. ಡಿ. ಪಿ. ಐ. ಗಳು, ಸಬ್‌ಡಿವಿಜನ್ ಆಫೀಸರುಗಳು ಇವರೆಲ್ಲರೂ ಹೆಚ್ಚಿಗೆ ಕಾರ್ಯಭಾರವಿಲ್ಲದೆ ಪೋಸ್ಟ್ ಆಫೀಸ್ ಕೆಲಸ ಮಾಡುತ್ತಾರೆ. ಆದಕಾರಣ ಸರ್ಕಾರದ ಆದಾಯವನ್ನು ಹೆಚ್ಚಿಸಬೇಕಾದರೆ ಈ ಹುದ್ದೆಗಳನ್ನು ತೆಗೆದುಹಾಕಿದರೆ ಬೇಕಾದಷ್ಟು ವರಮಾನ ಬರುತ್ತದೆ.

ವಯಸ್ಕರ ವಿದ್ಯಾಭ್ಯಾಸದ ಇಲಾಖೆ ಎಂದು ಒಂದು ಇಲಾಖೆ ಇದೆ. ಇದಕ್ಕೆ 5 ಲಕ್ಷ ರೂಪಾಯಿ ಒದಗಿಸಿದ್ದಾರೆ. ಪ್ರೈಮರಿ ಸ್ಕೂಲುಗಳಲ್ಲಿ ಓದುವವರನ್ನೇ ಇವರು ತಮ್ಮಲ್ಲಿ ಓದುವವರೆನ್ನುತ್ತಾರೆ; ಸ್ಲೇಟು ಪುಸ್ತಕಗಳನ್ನು ಮಾರಿಕೊಳ್ಳುತ್ತಾರೆ; ಸೀಮೆಎಣ್ಣೆಯನ್ನು ಸ್ವಂತ ಉಪಯೋಗಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಇಂತಹ ನೀತಿಯುಳ್ಳ ಒಂದು ಇಲಾಖೆ, ಈ ವಯಸ್ಕರ ವಿದ್ಯಾಭ್ಯಾಸದ ಇಲಾಖೆ........

ಶ್ರೀ ಕೆ. ಹನುಮಂತಯ್ಯನವರು (ಮುಖ್ಯ ಮಂತ್ರಿಗಳು).—ನಾನು ಸರ್ಕಾರದ ಖರ್ಚು ಆ ರೀತಿ ದುರ್ವ್ಯಯವಾಗಬಾರದೆಂಬ ನೀತಿಯನ್ನೊಪ್ಪುತ್ತೇನೆ. ಅವರು ಹೇಳುವರೀತಿ ಎಲ್ಲಾಗಿದೆ ಎಂಬುದನ್ನು ಅವರು ರುಜುವಾತುಮಾಡಿಕೊಟ್ಟರೆ, ಅದಕ್ಕೆ ತಕ್ಕ ಶಿಕ್ಷೆಯನ್ನು ಮಾಡುವುದಕ್ಕೆ ನಾನು ಸಿದ್ಧ. ಆದುದರಿಂದ ದಯೆಯಿಟ್ಟು ಎಲ್ಲಿ ಆರೀತಿ ನಡೆದಿದೆ ಎನ್ನುವುದನ್ನು ರುಜುವಾತು ಸಮೇತ ತೋರಿಸಿ ಕೊಡಬೇಕೆಂದು ನಾನು ಅವರನ್ನು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯನವರು.—ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳೆಂದು ಏರ್ಪಡಿಸಿರುವುದು ಆಯಾ ಸ್ಥಳದಲ್ಲಿರುವ ಧನಿಕರಿಗೆ ಅನುಕೂಲವಾಗಿದೆ. ಅವರಿಗೆ ಮತ್ತು ಆ ಸೊಸೈಟಿಯ ಡೈರೆಕ್ಟರುಗಳಿಗೆ ಲಾಭ. ನಿಜವಾಗಿ ಇದರ ಫಲ ಯಾರಿಗೆ ಸಲ್ಲಬೇಕೋ ಅವರಿಗೆ ತಕ್ಕಷ್ಟು ಪ್ರಮಾಣದಲ್ಲಿ ಸಲ್ಲುತ್ತಿಲ್ಲ. ಅನೇಕರು ಡೈರೆಕ್ಟರುಗಳು ತಮ್ಮ ಉಪಯೋಗಕ್ಕೆಂದು ಹೇಳಿ ಬ್ಲಾಕ್‌ಮಾರ್ಕೆಟ್ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ ಮತ್ತು ಹಿಂದಿನ ಅಸೆಂಬ್ಲಿಯಲ್ಲಿಯೂ ಇದರ ವಿಚಾರವಾಗಿ ಕೆಲವು ಪ್ರಶ್ನೆಗಳು ಬಂದಿವೆ ಎಂದು ಓದಿದ್ದೇನೆ.

Sri K. HANUMANTHAIYA.—I repeat the same request. Sir, it is a wellknown convention in Parliament that wild allegations should not be made against Government officers who have no means of defending themselves on the floor of the House. It is unfair and unchivalrous to make reckless and wild allegations merely because the Members have got liberty to speak. If they are serious about the charge and sincere about the economy of expenditure, I request them to furnish information to me and if the Government do not take action, they are to blame. It will be cowardice to make reckless allegations without any obligation to substantiate them.

Janab J. MOHAMED IMAM.—There is the question of policy. If we take all the previous speeches and all the remarks made......

Sri K. HANUMANTHAIYA.—I am not guided by the tradition established by Janab Imam. I am guided by what is fair and what is just to people who work and who have no means of defending themselves on the floor of the House. This is the ruling given in Parliament and it is a wellknown principle. If he quotes his precedent I straightaway reject it.

Janab J. MOHAMED IMAM.—I am not quoting my precedent; nor am I guided by what the Chief Minister says or by what he lays down as a rule to be followed by the Members of the House. We are always guided by usage and by traditions and precedents and we are also guided by the precedents and traditions set up when the Congress party itself was in the Opposition. It is a general practice here to point out the defects existing in any department on a general scale. Supposing when I say that the Registration Department is not working satisfactorily and that there is corruption prevailing in the Department or if I say that corruption is prevailing in the Police Department, certainly it is not an allegation made against any particular officer or particular individual but it is perfectly open for any Member to say that any particular Department is not working satisfactorily and their administration is to the prejudice of the country. I submit there is nothing wrong for a member to point out defects existing in any particular department and I am sorry the Chief Minister has taken a serious view. Unless latitude is given, no member can bring to the notice of the Government such irregularities. Secondly, he says that concrete instances may be given. Some of us may be in a position to quote instances but it is not obligatory. If I say that there are defects and drawbacks existing in a certain department, it is the duty of the members of the Government—and they are paid for it—to go and investigate and find out if it is correct or not. It is certainly not appropriate and not conducive to the good working of the department if you say that we should only come forward with specific instances. Do they say with confidence that the

(JANAB J. MOHAMED IMAM.)

departments—the Police, the Public Works, etc.—are all efficient and honest? Are they taking up that responsibility? Such latitude is always given to the Members. And my friend quoted the instance of Parliament, but so far as I know, Members bring to the notice of the Government the defects and weaknesses existing and there is certainly nothing wrong and I see no reason why the Chief Minister should take such strong exception to the Members speaking in that way. If there is anything irrelevant or anything mischievous or defamatory concerning the conduct of a Member, then the Chief Minister may bring it to the notice of the Chair and it is left to the Chair to pull up the Member in any individual instance; but to pass a general rule is certainly irrelevant so far as the proceedings of the House are concerned.

Mr. SPEAKER.—No doubt, the Hon'ble Members have a right to criticise the Administration, including its officers, but they must have a basis for doing so. The Leader of the House has only taken objection to vague allegations. Apart from that, in Logic, whereas a particular may be true, the general is doubtful. Therefore the Members, bearing in mind that they have a right to criticise the Administration subject to certain limitations and restrictions, must also have in mind concrete instances before they make allegations or cast aspersions against officers and when the Leader of the House calls for such information it is the duty of such Members to furnish that information so as to enable the Government to verify facts and take suitable action.

ಶ್ರೀ ಬಿ. ರಾಚಯ್ಯನವರು.—ಈಗ 2—3 ದಿನಗಳ ಹಿಂದೆ ಕೆಲವು ಪ್ರಶ್ನೆಗಳಿಗೆ ಸರ್ಕಾರದವರು ಒದಗಿಸಿದ ಉತ್ತರವನ್ನು ನೋಡಿದರೆ, ಗ್ರೋಮೋರ್‌ಫುಡ್ ಬಾಬಿಗೆ ನಾವು ಎಷ್ಟು ದುಡ್ಡನ್ನು ಖರ್ಚುಮಾಡಿದ್ದೆವೋ ಮತ್ತು ಹಾಗೆ ಮಾಡಿರುವ ಖರ್ಚಿಗೆ ನಾವು ಎಷ್ಟು ಪ್ರತಿಫಲವನ್ನು ನಿರೀಕ್ಷಿಸಿದ್ದೆವೋ ಅಷ್ಟು ಪ್ರತಿಫಲ ದೇಶಕ್ಕೆ ಒದಗಲಿಲ್ಲವೆಂಬ ಅಂಶವನ್ನು ನಾನೀಗ ತಮ್ಮ ಗಮನಕ್ಕೆ ತರಲು ಈ ವಿಚಾರಗಳನ್ನೆಲ್ಲಾ ಹೇಳಿದೆನೇ ವಿನಾ ಮತ್ತೇನೂ ಇಲ್ಲ. ತಾವೇನೋ ಈ ಜಿ. ಎಂ. ಎಫ್. ಯೋಜನೆಗೆ ವಿಶೇಷವಾಗಿ ಹಣವನ್ನು ಹಾಕಿದ್ದೀರಿ. ಇದರಿಂದ ರೈತರಿಗೆ ಗೊಬ್ಬರ, ಬೀಜದ ಕಾಳು ಇತ್ಯಾದಿ ಸಹಾಯದೊರೆತು ಜನರಿಗೆ ಅನುಕೂಲವಾಗಿ ತನ್ಮೂಲಕ ದೇಶಕ್ಕೆ ಒಳ್ಳೆಯದಾಗಲಿ ಎಂಬ ಘನೋದ್ದೇಶದಿಂದಲೇ ತಾವು ಇದನ್ನು ಮಾಡಿದ್ದೀರಿ. ಆದರೆ ಈ ನಿಧಿಯ ಸಹಾಯ ನೇರವಾಗಿ ಯಾವ ವರ್ಗಕ್ಕೆ, ಯಾರು ನಿಜವಾಗಿ ರೈತಾಪಿ ಕಸಬಿನಲ್ಲಿ ತೊಡಗಿದ್ದಾರೋ ಅಂಥವರಿಗೆ, ಅರ್ಹರಾದವರಿಗೆ, ಸಲ್ಲಬೇಕಾಗಿತ್ತೋ ಅಂಥವರಿಗೆ ಸಲ್ಲಲಿಲ್ಲ. ನಿಜ, ತಾವೇನೋ ಔಷಧಿ ಕೊಟ್ಟಿರಿ; ಆದರೆ ಖಾಯಿಲೆ ಮಾತ್ರ ಗುಣವಾಗಲಿಲ್ಲ. ಈ ರೀತಿಯಾಗಿ ತಾವು ಇರಿಗೇಷನ್ ಬಾಬಿಗೆ ಒದಗಿಸಲಾಗಿದ್ದ ಮೊಬಲಗಿನಿಂದ ನಾಲೆ ಇತ್ಯಾದಿಗಳನ್ನು ರಿಪೇರಿ ಮಾಡುವ ಬದಲು, ನಾಲಾ ಪಕ್ಕದಲ್ಲಿ ರಸ್ತೆ ಮಾಡಿಸುವುದಕ್ಕೂ ಮತ್ತು, ನಾಲಾ ಪಕ್ಕದಲ್ಲಿರತಕ್ಕ ಗಿಡಗಳನ್ನು ಕಡಿಯಲಿಕ್ಕೂ ಈ ಮೊಬಲಗನ್ನು ಉಪಯೋಗಿಸಿದ್ದಾರೆ. ಹೀಗಾಗಿ ನಮ್ಮ ಕಡೆ ಅನೇಕ ಕೆರೆಗಳ ರಿಪೇರಿ ಕೆಲಸ, ಉದಾಹರಣೆಗೆ, ಯಳಂದೂರು ಕೆರೆ, ದೊಡ್ಡಾಲಪೇಟೆ ಕೆರೆ, ಕನ್ನೇಗಾಲದ ಕೆರೆ, ಕೆಸ್ತೂರುಕೆರೆ ಇತ್ಯಾದಿ ಅನೇಕ ಕೆರೆಗಳ ಕೆಲಸ ನಿಂತುಹೋಗಿದೆ. ಆದರೆ ನಿಜವಾದ ರೈತರು ಯಾರೋ, ಯಾರು ನಿಜವಾಗಿ ಈ ವೃತ್ತಿಯಲ್ಲಿ ಶ್ರಮವಹಿಸಿ ದುಡಿಯುತ್ತಾ ದೇಶಕ್ಕೆ ಹೆಚ್ಚು ಆಹಾರ ಬೆಳೆದು ಒದಗಿಸುತ್ತಿದ್ದಾರೋ ಅಂಥವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ನಾನು ತಮ್ಮಲ್ಲಿ ಈ ವಿಷಯಗಳನ್ನೆಲ್ಲಾ ಮನವಿಮಾಡಿಕೊಳ್ಳಬೇಕಾಯಿತು. ಆದರೆ ಹಾಲಿ ಈಗ ನಡೆಯುತ್ತಿರುವ ರೀತಿಯಲ್ಲಿ ರೈತನ ಏಳಿಗೆಗೆ ಸಾಕಷ್ಟು ಅವಕಾಶವನ್ನು ತಾವು ಕಲ್ಪಿಸಿರುವುದಿಲ್ಲ. ಆದರೆ ಏನೋ ಅಲ್ಪಸ್ವಲ್ಪ ಇತ್ತೀಚೆಗೆ, ರೈತನು ಬೆಳದ ದವಸ ಧಾನ್ಯಗಳಿಗೆ ಧಾರಣೆ ಹೆಚ್ಚಿದ್ದರೆ, ಅದಕ್ಕಾಗಲೆ ಮುನ್ನುಗ್ಗಿ ಅವುಗಳನ್ನು ತಗ್ಗಿಸಬೇಕೆಂದು ಹಲವರು ಒತ್ತಾಯಪಡಿಸುತ್ತಿದ್ದಾರೆ. ಆದರೆ ಸರ್ಕಾರದವರು, ಹಿಂದೆಲ್ಲಾ ರೈತನು ಬೆಳೆದ ಧಾನ್ಯಗಳ ಬೆಲೆ ಬಿದ್ದುಹೋಗಿದ್ದಾಗ್ಗೆ, ಆ ರೈತನನ್ನು ಸಂರಕ್ಷಣೆ ಮಾಡುವಂಥ ಯೋಜನೆಗಳನ್ನೇನೂ ಮಾಡಿರಲಿಲ್ಲ. ಆದರೆ ಈಗ ಅದನ್ನು ಮಾಡಬೇಕಾದ ಕಾಲ ಬಂದಿದೆ. ಅಂದ ಮೇಲೆ ರೈತನಿಗೆ ಇನ್ನೆಲ್ಲಿದೆ ಉತ್ತೇಜನ?

ಇನ್ನು ಕೊನೆಯದಾಗಿ ನಿಮ್ನವರ್ಗದವರ ವಿಚಾರವಾಗಿ ಒಂದು ಮಾತನ್ನು ಹೇಳಲಿಚ್ಛೆಪಡುತ್ತೇನೆ. ಈಗ ನಿಮ್ನವರ್ಗದ ಕ್ಷೇಮಾಭಿವೃದ್ಧಿ ವಿಚಾರಗಳ ಆಡಳಿತವನ್ನೆಲ್ಲಾ ಮಾನ್ಯ ಮುಖ್ಯ ಮಂತ್ರಿಗಳೇ ವಹಿಸಿಕೊಂಡಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಸಂಸ್ಥಾನದಲ್ಲಿ ನಮ್ಮ ಜನಸಂಖ್ಯೆ 17 ಲಕ್ಷಕ್ಕೆ ಮೇಲ್ಪಟ್ಟಿದ್ದರೂ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ನಮಗೊಂದು ಪ್ರಾತಿನಿಧ್ಯ ದೊರೆತಿಲ್ಲ. ಪಬ್ಲಿಕ್‌ಸರ್ವಿಸ್ ಕಮಿಷನ್ನಿನ ಕಾರ್ಯದರ್ಶಿಗಳೂ ಸಹ ಒಬ್ಬ ಖಾಸಗೀ ಮನುಷ್ಯರೇ ಇರಬೇಕೆಂದಿದೆ. ಆದರೆ ಅದನ್ನಿನ್ನೂ ತಾವು ಆಚರಣೆಗೆ ತಂದಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಹಾಲಿ ತಾವು ನೇಮಕಮಾಡಿರತಕ್ಕ ಮೂರು ಜನಗಳ ಪೈಕಿ, ಒಬ್ಬರು ನಿಮ್ನವರ್ಗದವರಿಗೆ ಪ್ರಾತಿನಿಧ್ಯ ಕೊಡಬೇಕು. ಈಗ ತಾವು ಪಟ್ಟಿಮಾಡಿರತಕ್ಕ ಐ. ಎ. ಎಸ್. ಮತ್ತು ಐ. ಪಿ. ಎಸ್.ಗಳಲ್ಲಿ ಒಬ್ಬರಾದರೂ ನಮ್ಮ ನಿಮ್ನ ಪಂಗಡದವರಿಗೆ ತಾವು ಅನುಕೂಲಮಾಡಿಕೊಟ್ಟಿಲ್ಲ. ಆದುದರಿಂದ ತಾವು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಪಟ್ಟಿ ಮಾಡುವ ಕಾಲಕ್ಕಾದರೂ ತಪ್ಪದೆ ನಿಮ್ನವರ್ಗದವರಿಗೂ ಉತ್ತಮ ಕ್ಯಾಂಪಿನಲ್ಲಿ ಅದರಲ್ಲಿ ಸೇರಿಸುವಂತೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ನಿಮ್ನವರ್ಗದ ಹಾಸ್ಟಲುಗಳ ವಿಚಾರವಾಗಿ ಅನೇಕ ಮಾನ್ಯ ಸದಸ್ಯರುಗಳು ಆ ವಿಧವಾದ ವ್ಯತ್ಯಾಸ ಅಥವಾ ತಾರತಮ್ಯವಾದ ಯಾವ ವಿಚಾರಕ್ಕೂ ಉತ್ತೇಜನ ಕೊಡಬಾರದೆಂದು ವಾದ ಮಾಡಿದ್ದಾರೆ. ನಿಜ; ನಾನೂ ಸಹ ಅಂಥ ವ್ಯತ್ಯಾಸಗಳು ಹೋಗಬೇಕೆಂದು ಹೇಳುವವರ ಪೈಕಿ ಒಬ್ಬ. ಆದರೆ ಅದಕ್ಕೂ ಕಾಲ ಬರಬೇಕು. ಒಬ್ಬ ವಿಮಾನದಲ್ಲಿ ಹೋಗುತ್ತಿದ್ದಾನೆ, ಒಬ್ಬ ಮೋಟಾರ್ ಕಾರಿನಲ್ಲಿ ಹೋಗುತ್ತಿದ್ದಾನೆ, ಮತ್ತೊಬ್ಬ ಎತ್ತಿನ ಗಾಡಿಯಲ್ಲಿ ಹೋಗುತ್ತಿದ್ದಾನೆ. ಇವರೆಲ್ಲರೂ ಒಂದೇ ಸಮನಾಗಿ ಮುಂದುವರಿಯಬೇಕೆಂದರೆ ಅಥವಾ ಒಂದೇ ವೇಗದಲ್ಲಿ ಪ್ರಯಾಣಮಾಡಬೇಕೆಂದು ಹೇಳಿದರೆ ಅದು ಹೇಗೆ ಸಾಧ್ಯ? ಹೀಗೆ ಎಲ್ಲರೂ ಒಂದೇ, ಎಲ್ಲರೂ ಏಕೀಭವಿಸಿ ನಡೆಯಬೇಕು, ಈ ತಾರತಮ್ಯ ಭಾವನೆಗಳೂ ವ್ಯತ್ಯಾಸಗಳೂ ಇರಬಾರದೆಂಬುವವರಲ್ಲಿ ನಾನೂ ಒಬ್ಬನಾಗಿದ್ದರೂ ಸದ್ಯಕ್ಕೆ ಇದು ಸಾಧ್ಯವಿಲ್ಲ. ಆದುದರಿಂದಲೇ ರಾಜ್ಯಾಂಗದಲ್ಲೇ ಇದಕ್ಕಾಗಿ ಒಂದು ಪ್ರಾವಿಸೋ ಸೇರಿಸಿದ್ದಾರೆ. ಈ ಸಂದರ್ಭದಲ್ಲಿ

1-30 P.M.

ಈ ಜನರ ಮಕ್ಕಳು ವ್ಯಾಸಂಗಮಾಡಬೇಕು ಮುಂದುವರಿಯಬೇಕು ಎಂದು ಹೇಳುತ್ತಿರುವಾಗ ನಿಮ್ನವರ್ಗದವರಿಗೆ ಕುಂದುಕೊರತೆಗಳು ಇದ್ದೇ ಇವೆಯೆಂಬುದು ಸ್ಪಷ್ಟವಾಗಿದೆ. ಅವುಗಳಿಗೆ ಪರಿಹಾರ ದೊರೆಯಬೇಕು. ಆದ್ದರಿಂದ ಅವರಿಗೆ ತಕ್ಕಷ್ಟು ಹಾಸ್ಟಲುಗಳನ್ನು ಏರ್ಪಡಿಸಿ ಸೂಕ್ತವಾದ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಮೈಸೂರಿನಲ್ಲಿ ಹಿಂದೆ Central Adikarnataka Institute ಸ್ಕೂಲು ಬಂದಿತ್ತು. ಅಲ್ಲಿ ಕಸೂತಿ ಕೆಲಸವನ್ನು ಹೇಳಿಕೊಡುತ್ತಿದ್ದರು. ಈಗಲೂ ಕಸೂತಿ ಕೆಲಸ ಮುಂತಾದ್ದನ್ನು ಕಲಿಸಲು ಪುನರ್‌ವ್ಯವಸ್ಥೆ ಮಾಡಬೇಕು ಎಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

* ಶ್ರೀ ಟಿ. ಮರಿಯಪ್ಪನವರು (ಮೈಸೂರು ಸಿಟಿ–ಉತ್ತರ ತಾಲ್ಲೂಕು).—ಮಾನ್ಯ ಅಧ್ಯಕ್ಷರೆ, ಈ ಬಡ್ಜೆಟ್ ಚರ್ಚೆಯಲ್ಲಿ ನಾನು ಭಾಗವಹಿಸುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ತಮ್ಮನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ನಾನು ಸಂಕ್ಷೇಪವಾಗಿ ಕೆಲವು ವಿನಾಕಾರಣವಾದ ಟೀಕೆಗಳಿಗೆ ಉತ್ತರ ಕೊಡಬೇಕೆಂದಿದ್ದೇನೆ. 1947ನೆಯ ಇಸವಿಯಿಂದಲೂ ದೇಶದ ಆಪದ್ಧನ ಖರ್ಚಾಗಿದೆಯೆಂದು ಮುಖ್ಯವಾಗಿ ಒಂದು ಟೀಕೆ ಬರುತ್ತಿದೆ. ನನ್ನ ಮಾನ್ಯ ಮಿತ್ರರಾದ ಜನಾಬ್ ಇಮಾಂರವರು ಪ್ರತಿ ಬಡ್ಜೆಟ್ ಭಾಷಣದಲ್ಲೂ ಇತರ ಅಧಿವೇಶನಗಳಲ್ಲೂ ಈ ಅಂಶವನ್ನು ಒತ್ತಿ ಒತ್ತಿ ಹೇಳುತ್ತಿದ್ದಾರೆ. ಚುನಾವಣೆ ಕಾಲದಲ್ಲಿ ಇದನ್ನು ಅವರ ಚುನಾವಣಾ ಕ್ಷೇತ್ರದಲ್ಲೇ ಅಲ್ಲ ದೇಶದ ಎಲ್ಲಾ ಕಡೆಗಳಲ್ಲೂ ಪ್ರಚಾರಮಾಡಿ ಜನರನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟರು. ಒಂದಲ್ಲ, ಎರಡಲ್ಲ, ಅನೇಕ ವಿಧಗಳಲ್ಲಿ ದೇಶದ ಮೂಲೆ ಮೂಲೆಗಳಿಗೆ ಹೋಗಿ ಅದನ್ನು ವಿವಿಧ ರೀತಿಯಲ್ಲಿ ಬಾಯಲ್ಲಿ ಹೇಳಿ ಪ್ರಚಾರಮಾಡಿದರು. ಆದರೆ ಅಚ್ಚುಹಾಕಿಸಿ ಪ್ರಚಾರಮಾಡಲಿಲ್ಲ. ಅದಕ್ಕೆ ಪ್ರಜೆ ಸರಿಯಾಗಿ ಉತ್ತರ ಕೊಟ್ಟಿದೆ. $4\frac{1}{2}$ ವರ್ಷಗಳ ಆಡಳಿತದ ಆಖೈರಿನಲ್ಲಾದ ಮಹಾಚುನಾವಣೆಯಲ್ಲಿ, ವಯಸ್ಕರ ಮತದಾನ ಪದ್ಧತಿಯ ಮೇಲೆ ಆದ ಚುನಾವಣೆಯಲ್ಲಿ, ಸಂಪೂರ್ಣ ಸ್ವಾತಂತ್ರ್ಯ ಬಂದಮೇಲೆ ಆ ವಾತಾವರಣದಲ್ಲಿ ನಡೆದ ಚುನಾವಣೆಯಲ್ಲಿ—ನಮ್ಮ ಮಿತ್ರರು ಕೋಪಮಾಡದೇ ಇದ್ದರೆ ಒಂದು ಪದ ಉಪಯೋಗಿಸುತ್ತೇನೆ—ಆಪಾದನೆ ಪ್ರಕರಣವು ಲಂಗು ಲಗಾಮಿಲ್ಲದೆ ನಡೆಯಿತು. ಇಷ್ಟಕ್ಕೂ ಪ್ರಜೆ ಸರಿಯಾದ ಉತ್ತರ ಕೊಟ್ಟ ಮೇಲೆ ಅದನ್ನು ಅಲ್ಲಿಗೇ ಬಿಡುವುದು ಉತ್ತಮ. ಈಗ ಅದರ ಫಲಿತಾಂಶವಾಗಿ 74 ಜನರನ್ನು ಕಾಂಗ್ರೆಸ್ ಸಂಸ್ಥೆಯಿಂದ ಚುನಾಯಿಸಿ ಕಳುಹಿಸಿದ್ದಾರೆ. ಆದ್ದರಿಂದ ತಾವು 1947ನೆಯ ಇಸವಿಯಿಂದ ಹೇಳಿದ ಒಂದು ಆರೋಪಕ್ಕೆ, ಚುನಾವಣೆಯಲ್ಲಿ ಮಾಡಿದ ಟೀಕೆಗೆ ಬೆಲೆ ಬರಲಿಲ್ಲ. ಅದು ಜನರ ಮನಸ್ಸಿಗೆ ರುಚಿಸಲಿಲ್ಲ. ಅದಕ್ಕೆ ಬುಡವಿಲ್ಲ, ನಿರಾಧಾರವಾದುದು. ಅದು ವಿನಾಕಾರಣವಾಗಿ ಮಾಡಿದುದು ಎಂದು ಹೇಳಬೇಕಾಗುತ್ತದೆ. ಇದುವರೆಗೆ ಅದನ್ನು ತಿಳಿದು ಅವರ ನೀತಿಯನ್ನು ಬದಲಾಯಿಸಿದ್ದರೆ ಚೆನ್ನಾಗಿತ್ತು. ಈಗಲಾದರೂ ಹೊಸ ವಾತಾವರಣದಲ್ಲಿ ಕೆಲಸಕಾರ್ಯ ಮಾಡೋಣ. ಎಲ್ಲ ಪಕ್ಷದವರೂ ಸೇರಿ ವಿಶ್ವಾಸವಿಟ್ಟು ಸಹಕಾರ ನೀಡಿ ದೇಶವನ್ನು ಮುಂದುವರಿಸಲು ತಕ್ಕ ರಾಜ್ಯ ಕಟ್ಟಬೇಕಾಗಿದೆ. ಸುಮಾರು 175 ವರ್ಷಗಳಕಾಲ ಪರಕೀಯರ ಆಡಳಿತಕ್ಕೆ ಸಿಕ್ಕಿ ತೀರ ಕಂಗೆಟ್ಟು ಅವರ ಕೈಯಿಂದ ಬಿಡಿಸಿಕೊಂಡು ಈಗ ರಾಜ್ಯ ಕಟ್ಟುತ್ತಲಿದೆ. ಆದ್ದರಿಂದ ಬರೀ ನೆಗೆಟಿವ್ ಆಟಿಟ್ಯೂಡ್ ಯಾರೂ ಇಟ್ಟುಕೊಳ್ಳಬಾರದು ; ಪಾಸಿಟಿವ್ ಆಟಿಟ್ಯೂಡ್ ಇಟ್ಟುಕೊಂಡು ಸಹಕರಿಸಿ ರಚನಾತ್ಮಕವಾದ ಟೀಕೆಮಾಡಿ ಕನ್‌ಸ್ಟ್ರಕ್ಟಿವ್ ಪ್ರಪೋಸಲ್ ಕೊಡಬೇಕು ಎಂದು ತಿಳಿಸಬೇಕಾಗಿದೆ. ಈ ಧ್ಯೇಯವನ್ನು ಇದುವರೆಗೆ ಅನುಸರಿಸಿದ್ದರೆ ಬಹಳ ಚೆನ್ನಾಗಿತ್ತು. ಆಪದ್ಧನ ಕರಗಿಹೋಯಿತೆಂದು ಹೇಳಿದರು. ಆದರೆ ಮದರಾಸಿನ ಹಣಕಾಸಿನ ಸಚಿವರು ಈ ವಿಚಾರದಲ್ಲಿ "There is no virtue in merely keeping reserves in tact" ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ದೇಶವನ್ನು ಕಟ್ಟುವುದಕ್ಕೆ, ಅಭಿವೃದ್ಧಿ ಕಾರ್ಯಗಳಿಗೆ ಈ ಆಪದ್ಧನವನ್ನು ಉಪಯೋಗಿಸದಿದ್ದರೆ ಆ ಹಣ ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ. ಒಬ್ಬ ಲೋಭಿ ಮನುಷ್ಯನಲ್ಲಿರುವ ಹಣದಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಪ್ರಜೆಗಳು ತಮಗೆ ಯಾರಲ್ಲಿ ಪ್ರೇಮವಿದೆಯೋ, ಯಾರು ಅರ್ಹರೆಂದು ತಮಗೆ ನಂಬಿಕೆಯಿದೆಯೋ ಅವರನ್ನು ಚುನಾಯಿಸಿ ಬಾಕಿಯುವರಿಗೆ ಉತ್ತರ ಕೊಟ್ಟರು. ಅದರ ಮೇಲೆ ಯಾರೂ ಏನೂ ಹೇಳಬೇಕಾಗಿಲ್ಲ. ಆದ್ದರಿಂದ ಆ ವಿಚಾರದಲ್ಲಿ ಮಾತನಾಡುವುದರಲ್ಲಿ ಪ್ರಯೋಜನವಿಲ್ಲ. ಇರುವ ವಾತಾವರಣವನ್ನು ತಿಳಿಸಿದ ಮೇಲೆ ಪ್ರಜೆ ಒಪ್ಪಿದ್ದಾರೆ.

ಎರಡನೆಯದಾಗಿ 1951ನೆಯ ಇಸವಿ ಸೆನ್ಸಸ್ ಅಂಕಿಅಂಶಗಳನ್ನು ನೋಡೋಣ ದನಗಳ ಸೆನ್ಸಸ್ ಸಹ ಆಯಿತು. ಅವೆರಡನ್ನೂ ಮನಃಪೂರ್ವಕವಾಗಿ ನೋಡಿದರೆ, ಅದರಿಂದ ಮನಸ್ಸಿಗೆ ಬರುವ ಅಭಿಪ್ರಾಯವನ್ನಿಟ್ಟುಕೊಂಡು ಪರಿಶೀಲಿಸಿದರೆ—ಬೇರೆ ಭಾವನೆಯಿಂದ ಅದನ್ನು ಓದಿದರೆ ಪ್ರಯೋಜನವಿಲ್ಲ—ನಿಜವಾದ ವಿಷಯ ಗ್ರಹಿಸಿದರೆ, ಹತ್ತು ವರ್ಷಗಳ ಅಂಕಿ ಅಂಶವನ್ನು ಬಿಟ್ಟು 5 ವರ್ಷದ ಅಂಕಿಗಳನ್ನು ನೋಡಿದರೂ, 1947ರಿಂದ ಅಭಿವೃದ್ಧಿಕಾರ್ಯ ಮತ್ತು ಜನಸಂಖ್ಯೆ ಜಾಸ್ತಿಯಾಗಿದೆಯೆಂಬುದು ಗೊತ್ತಾಗುತ್ತದೆ. ಜನರಲ್ಲಿ ಒಗ್ಗಟ್ಟಿಲ್ಲದಿದ್ದರೆ ಪ್ರಯೋಜನವಾಗುತ್ತಿರಲಿಲ್ಲ. ಆ ಮೇಲೆ ಎರಡನೆಯದು ದನಗಳ ಸೆನ್ಸಸ್. I would like to commend the report to every Hon'ble Member of the House. ದನಗಳ ಸೆನ್ಸಸ್

*Asterisk indicates that speech has not been revised by the concerned Member.

(ಶ್ರೀ ಟಿ. ಮರಿಯಪ್ಪನವರು.)

ಪ್ರಕಾರ ಹಸುಗಳ ಸಂಖ್ಯೆ ಮತ್ತು ಹೋರಿಗಳ ಸಂಖ್ಯೆ ಜಾಸ್ತಿಯಾಗಿದೆ. ಆದ್ದರಿಂದ ದೇಶದಲ್ಲಿ ಸರ್ಕಾರದವರು ಕೈಕೊಂಡ ಕಾರ್ಯಕ್ರಮಗಳ ಫಲವಾಗಿ ಅಭಿವೃದ್ಧಿಯಾಗಿದೆಯೇ ಹೊರತು ಮತ್ತೆಬೇರೆ ಅಲ್ಲ ಎಂಬುದು ಈ ಎರಡು ಸೆನ್ಸಸ್ ವರದಿಗಳಿಂದ ಅರ್ಥವಾಗುತ್ತದೆ. ಸುಮ್ಮನೆ ಏನು ಬೇಕಾದರೂ ಹೇಳಬಹುದು. ಟೀಕೆ ಮಾಡುವುದು ಬಹಳ ಸುಲಭ. ಆದರೆ ಮಾಡಿತೋರಿಸುವುದು ಬಹಳ ಕಷ್ಟ. ಪರಕೀಯರಿದ್ದಾಗ 25 ವರ್ಷಗಳವರೆಗೆ ಒಂದೇ ಸಮನಾಗಿ ಟೀಕೆ ಮಾಡಿ ಈ ವಾತಾವರಣದಲ್ಲಿದ್ದೇವೆ. ಈಗ ಹಾಗೆಯೇ ಮುಂದುವರಿದರೆ ಬಹಳ ಕಷ್ಟ. ಈಗತಾನೆ ಜನಾಬ್ ಇಮಾಂರವರು ಕಾಂಗ್ರೆಸ್ಸು ಎದುರುಪಕ್ಷದಲ್ಲಿದ್ದಾಗ ಬಹಳ ಟೀಕೆಮಾಡಿದರು ಎಂದು ಹೇಳಿದರು. ಆದರೆ ವೈರ್ಲ್ಡ್ ಅಲಿಗೇಷನ್ ಏನೂ ಮಾಡಿಲ್ಲ. ಬಹಳ ರಚನಾತ್ಮಕವಾಗಿ ಮಾಡಿದ್ದೇವೆ. ಪರಕೀಯರ ಬಾಲ ಹಿಡಿದುಕೊಂಡು ಹೋಗುವುದು ಸರಿಯಲ್ಲ ಎಂದು ಅನೇಕವಾಗಿ ಹೇಳಿದ್ದೆವು. ಈಗ ನಾವು ಒಂದು ಹೊಸ ವಾತಾವರಣದಲ್ಲಿದ್ದೇವೆ, ವಿಚಾರಮಯ ವಾತಾವರಣದಲ್ಲಿದ್ದೇವೆ. ನಮ್ಮ ದೇಶಕ್ಕೆ ನಾವೇ ಯಜಮಾನರು. ಉಭಯತ್ರರೂ ಒಗ್ಗಟ್ಟಾಗಿ ಎದ್ದಿರುವ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಈಗ ನಮ್ಮ ಮುಂದಿರುವ ಸಮಸ್ಯೆಗಳು 5 ವರ್ಷ ಅಥವಾ ಹತ್ತು ವರ್ಷಗಳಲ್ಲಿ ಮುಗಿಯುವಂತಿಲ್ಲ. 25 ವರ್ಷಗಳು ಕಷ್ಟಪಟ್ಟರೆ ಮುಗಿಯಬಹುದು. ಆದ್ದರಿಂದ ದಯವಿಟ್ಟು ನೆಗೆಟಿವ್ ಆಟಿಟ್ಯೂಡ್ ಬೇಡ, ಡಿಸ್ಟ್ರಕ್ಟಿವ್ ಆಟಿಟ್ಯೂಡ್ ಬೇಡ, ರಚನಾತ್ಮಕವಾಗಿ ಸಮಸ್ಯೆಗಳನ್ನು ಎದುರಿಸೋಣ ಎಂದು ತಿಳಿಸಬೇಕಾಗಿದೆ.

ಇದೇ ರೀತಿಯಲ್ಲಿ ಆಪದ್ಧನ ಖರ್ಚಾಗಿರುವುದು ದೇಶದ ಅಭಿವೃದ್ಧಿಕಾರ್ಯಗಳಿಗೆ, ಆಹಾರದ ಸಬ್ಸಿಡಿಗೆ ಬಹಳ ಖರ್ಚಾಗಿದೆ ಎಂದು ಹೇಳಿದರು.

ಫುಡ್ ಸಬ್ಸಿಡಿ ಕೊಡಬೇಕಾದ್ದು ಅಗತ್ಯವಾಗಿ ಕಂಡುಬಂತು ; ಅದೂ ಸಹ ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಮೊದಲು 1943ನೇ ಇಸವಿಯಲ್ಲಿ ಇದು ಪ್ರಾರಂಭವಾಯಿತು. ತಾವು ಆಗ ಸರ್ಕಾರದ ಮಂತ್ರಿಗಳಾಗಿದ್ದಿರಿ. ಆದ್ದರಿಂದ 1943ನೇ ಇಸವಿಯಲ್ಲಿ ಪ್ರಾರಂಭವಾದ ಫುಡ್ ಸಬ್ಸಿಡಿ ವಿಧಿ ಇಲ್ಲದೆ ತೆಗೆಯಬೇಕಾಗಿ ಬಂದು ಈಗಿನ ಸ್ಥಿತಿಗನುಗುಣವಾಗಿ ನಿಲ್ಲಿಸಬೇಕಾಯಿತು.

ಎರಡನೆಯದಾಗಿ ಡಿಫಿಸಿಟ್ ಬಡ್ಜೆಟ್ ವಿಚಾರದಲ್ಲಿ ಟೀಕೆಮಾಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಡಿಫಿಸಿಟ್ ಬಡ್ಜೆಟ್ ಆಗಿದೆ. ಮದರಾಸಿನಲ್ಲಿ ಡಿಫಿಸಿಟ್ ಬಡ್ಜೆಟ್ ಆಗಿದೆ. ಯು.ಪಿ. ನಲ್ಲೂ ಸಹ ಇಂಟಿರಿಂ ಬಡ್ಜೆಟ್ ತಯಾರಿಸಿದ್ದು ಅದೂ ಸಹ ಡಿಫಿಸಿಟ್ ಆಗಿದೆ. ಡಿಫಿಸಿಟ್ ಬಡ್ಜೆಟ್ ಮಾಡುವಾಗ ಧೈರ್ಯ; ದೂರಾಲೋಚನೆಯಿಂದ ಮಾಡಬೇಕಾಗುತ್ತದೆ. ಅಂಥವರು ಎಕನಾಮಿಕ್ಸ್‌ನಲ್ಲಿ ಸ್ವಲ್ಪ ನುರಿತವರಾಗಿರಬೇಕು. ಆದ್ದರಿಂದ ಆ ವಿಚಾರ ಹೆಚ್ಚಿಗೆ ಹೇಳುವುದಿಲ್ಲ.

ಫಂಡ್ಸ್ ಡ್ರಾ ಮಾಡುವ ವಿಚಾರ ಎತ್ತಿದ್ದಾರೆ. ನನಗಂತೂ ಆಶ್ಚರ್ಯ. ಅನೇಕ ವರ್ಷಗಳಿಂದ ಇಮಾಂರವರೂ ನಾನೂ ಇಬ್ಬರೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರಾಗಿದ್ದೆವು. 1931–32ರಿಂದ ತೆಗೆದುಕೊಳ್ಳಿ ಉದ್ದಕ್ಕೂ ಫಂಡ್ಸ್‌ನಿಂದ ಹಣ ಡ್ರಾಮಾಡಿದ್ದಾರೆ. ಮೈಸೂರಿನಲ್ಲಿ ಯಾವತ್ತೂ ಡಿಫಿಸಿಟ್ ಬಡ್ಜೆಟ್ ಇಲ್ಲ ಎಂದು ಹೇಳಿದ್ದಾರೆ; ನನಗಂತೂ ಆಶ್ಚರ್ಯ. ಮೈಸೂರಿನಲ್ಲಿ ತಮಗೆ ಗೊತ್ತಿರುವ ಹಾಗೆ ಅನೇಕ ಸಾರಿ ರಿಟ್ರೆಂಚ್‌ಮೆಂಟ್ ಆಗಿದೆ. ರಾಘವೇಂದ್ರರಾಯರು ಕೊಟ್ಟ ಈ ವರದಿ ಮೂರನೆಯದು. ದೇಶದಲ್ಲಿ ಆಯಾಯಾ ಕಾಲಕ್ಕನುಗುಣವಾಗಿ ರಿಟ್ರೆಂಚ್‌ಮೆಂಟ್‌ಮಾಡಬೇಕಾಗುತ್ತಿದೆ. ಸಿಬ್ಬಂದಿ ಜಾಸ್ತಿ ತೆಗೆದುಕೊಳ್ಳಬೇಕಾಗುತ್ತದೆ, ಹಣ ಹೆಚ್ಚು ಖರ್ಚುಮಾಡಬೇಕಾಗುತ್ತದೆ. ಆಯಾಯಾ ಸನ್ನಿವೇಶಕ್ಕೆ ತಕ್ಕಂತೆ ಬಡ್ಜೆಟ್ಟನ್ನು ಮಾಡಬೇಕೇ ಹೊರತು ಥಿಯರಿಟಿಕಲ್ ಆಗಿ 10 ರೂಪಾಯಿ ಇದ್ದರೆ ರೂ. 9-15-3 ಕಾಸೇ ಖರ್ಚುಮಾಡಬೇಕೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಮತ್ತೆ ಕೆಲವರು ಎಷ್ಟು ದೂರ ಹೋಗಿದ್ದಾರೆ ಎಂದರೆ ನ್ಯಾಷನಲೈಸೇಷನ್ ಹೆಚ್ಚುಮಾಡಬೇಕು, ಇದರಿಂದ ದೇಶದ ಅಭಿವೃದ್ಧಿಯಾಗುತ್ತದೆ, ಇಲ್ಲದೆ ಇದ್ದರೆ ಇಲ್ಲ—ಎಂದು ಹೇಳುವ ಮಹಾಶಯರೂ ಇದ್ದಾರೆ. ಆ ವಿಚಾರ ಅಷ್ಟಕ್ಕೇ ಬಿಡುತ್ತೇನೆ. ನ್ಯಾಷನಲ್ ಅಸೆಟ್ಟು ಎಷ್ಟುಮಟ್ಟಿಗೆ ಸ್ಟೆಪ್ ಅಪ್ ಆಗಿದೆ ಎಂಬುದಕ್ಕೆ ಜನಾಬ್ ಇಮಾಂರವರು ಅಂಕಿಅಂಶಗಳನ್ನು ನೋಡಬೇಕು

Sri M. CHICKALINGIAH.—Sir, the time allotted is over.

Mr. SPEAKER.—I have given him special permission.

ಶ್ರೀ ಟಿ. ಮರಿಯಪ್ಪನವರು.—ಎರಡು ಉದಾಹರಣೆ ಕೊಡುತ್ತೇನೆ. ವೈದ್ಯಕೀಯ ಸಂಸ್ಥೆಗಳು ಎಷ್ಟು ಜಾಸ್ತಿಯಾಗಿವೆ ಎಂಬುದನ್ನು ಅವರೇ ನೋಡಲಿ. ಅವರ ಕಾಲದಲ್ಲಿ ಎಷ್ಟಿತ್ತು ಈಗ ಎಷ್ಟಿದೆ? ಅದೇ ವೆಟರಿನರಿ ಇನ್‌ಸ್ಟಿಟ್ಯೂಟ್ಸ್ ನೋಡಿ; 263 ಇವೆ. ಇಂಡಿಯಾದೇಶದಲ್ಲಿ ಯಾವ ಪ್ರದೇಶದಲ್ಲೂ 25 ಸಾವಿರ ದನಗಳಿಗೆ ಒಂದು ಇನ್‌ಸ್ಟಿಟ್ಯೂಟು ಇಲ್ಲ. ಹೀಗೆಯೇ ಮೆಡಿಕಲ್ ಇನ್‌ಸ್ಟಿಟ್ಯೂಷನ್‌ಗಳು ಎಷ್ಟಿವೆ ಎಂಬುದಕ್ಕೆ ಹಣಕಾಸಿನ ಮಂತ್ರಿಗಳ ಭಾಷಣ ಓದಿದರೆ ಗೊತ್ತಾಗುತ್ತದೆ. ಇಂಡಿಯಾ ದೇಶದ ಇತರ ಭಾಗಗಳಿಗಿಂತ ನಮ್ಮದೇಶದಲ್ಲಿ ಜಾಸ್ತಿ ಇವೆ. ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಷನ್‌ಗಳು ಇವೆ. ಅವುಗಳಿಂದ ಜನರ ಆರೋಗ್ಯ ಜಾಸ್ತಿಯಾಗಿಲ್ಲವೇ, ಸುಧಾರಿಸಿಲ್ಲವೇ? ಇರ್ವಿನ್ ಕೆನಾಲ್ ಏರಿಯಾದಲ್ಲಿ ಮಲೇರಿಯಾ ಹಾವಳಿಯಿಂದ ಒಂದು ನೊಣಕೂಡ ಉಳಿಯದೆ ಸತ್ತುಹೋಗುತ್ತಾ ಇತ್ತು. ಅಂಥಾ ಕಡೆ ಈಗ ಎಷ್ಟೋ ಜನ ಆಹಾರ ಬೆಳೆದು ಜಮೀನು ವ್ಯವಸಾಯ ಮಾಡುತ್ತಿದ್ದಾರೆ. ಜಿ.ಎಂ.ಎಫ್. ವಿಚಾರ ಹೇಳಿದರು, ಇನ್ನುಮೇಲೆ ಅದರ ಹೆಸರು ಬದಲಾಯಿಸುತ್ತಾರೆ. ಶ್ರೀಮಾನ್ ವಿ. ಟಿ. ಕೃಷ್ಣಮಾಚಾರಿಯವರು ಅದಕ್ಕೆ ರೂರಲ್ ಇಂಪ್ರುವ್‌ಮೆಂಟ್ ಸ್ಕೀಂ ಎಂಬುದಾಗಿ ಬೇರೆ ಹೆಸರು ಕೊಡಿ ಎಂಬುದಾಗಿ ಶಿಫಾರಸು ಮಾಡಿದ್ದಾರೆ. ವಸ್ತುಸ್ಥಿತಿಯನ್ನು ನಿಜವಾಗಿಯೂ ತಿಳಿದುಕೊಳ್ಳಬೇಕು. ಜಿ.ಎಂ.ಎಫ್. ಸ್ಕೀಂ ಪ್ರಕಾರ ಶೇಕಡ 75 ರಷ್ಟು ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದೆವು. ಶ್ರೀ ಮಾನ್ ರಾಚಯ್ಯನವರು ಒಂದು ವಿಚಾರ ಹೇಳಿದರು. ನಾನು ಹೇಳುತ್ತೇನೆ, ಯಳಂದೂರು ತಾಲ್ಲೂಕಿನಲ್ಲ ಬಹಿರಂಗಸಭೆ ಸೇರಿದ್ದಾಗ 10 ಸಾವಿರ ಜನ ಸೇರಿದ್ದ ಆ ಸಭೆಯಲ್ಲಿ 50ವರ್ಷದಿಂದ ನಡೆಯದೇ ಇದ್ದ ನೀರಾವರಿ ಕಾಮಗಾರಿಗಳು ಈಗ ನಡೆದಿವೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಅಲ್ಲಿ ಹೊನ್ನಿನ ಹೊಳೆ ಹೋಗುತ್ತಾಇದೆ. ಅದು ನಿಜವಾಗಿಯೂ ಚಿನ್ನವನ್ನು ತರುತ್ತಾಇದೆ. ಅನೇಕ ವರ್ಷಗಳಿಂದ ಫೀಡರ್ ಚಾನಲ್‌ಗೆ ಇಂಪ್ರೂವ್‌ಮೆಂಟ್ ಇಲ್ಲದೆ ಅದು ಯಾವ ಕಾಲದಲ್ಲಿಯೂ ತುಂಬುತ್ತಾ ಇರಲಿಲ್ಲ. 6 ತಿಂಗಳಿನಲ್ಲಿ 1 ಲಕ್ಷ 20 ಸಾವಿರ ರೂಪಾಯಿ ಖರ್ಚುಮಾಡಿ ಒಂದು ಫೀಡರ್ ಚಾನಲ್ ರಿಪೇರಿಮಾಡಿಸಿದೆವು ಅವರು ನನ್ನ ಜೊತೆಯಲ್ಲಿ ಬರಲಿ, ಕರೆದುಕೊಂಡು ಹೋಗುತ್ತೇನೆ.

ಯಾವ ತಾಲ್ಲೂಕಿಗೆ ಹೋದರೂ 'ಸ್ವಾಮಿ, ಯಾವತ್ತೂ ನಮಗೆ ಇಷ್ಟು ಸೌಕರ್ಯ ಆಗಿರಲಿಲ್ಲ; ಶಿಕಗಿರಿ ಅಂತ ಬಿಟ್ಟು ಬಿಟ್ಟಿದ್ದರು ; ಈ ಸರ್ಕಾರ ಕಣ್ಣು ಬಿಟ್ಟು ಹೊನ್ನ ಹೊಳೆಯಿಂದ ಮದರಾಸು ಕಡೆಗೆ ಹೋಗತಕ್ಕ ನೀರನ್ನು ತಡೆಗಟ್ಟಿ ನಮ್ಮ ಜನಗಳು ಉಪಯೋಗಿಸಲು ಅವಕಾಶ ಮಾಡಿದ್ದೀರಿ; ಬತ್ತ ಬೆಳೆಯಲು ಅನುಕೂಲವಾಗಿದೆ' ಎಂದು ಪ್ರತಿಯೊಂದು ಹೋಬಳಿಗಳವರೂ ಯಳಂದೂರು ತಾಲ್ಲೂಕಿನಲ್ಲೂ ಚಾಮರಾಜ ನಗರ ತಾಲ್ಲೂಕಿನಲ್ಲೂ ಹೇಳಿದ್ದಾರೆ. ಇದೇ ರೀತಿ ವಿದ್ಯುಚ್ಛಕ್ತಿ ಇಲ್ಲದೇ ಅನೇಕ ಕಡೆ ಜನರು ನರಳುತ್ತಾ ಇದ್ದರು; ಅರಿಕೆಗಳನ್ನು ಕೊಡುತ್ತಾ ಇದ್ದರು. ಅವರು ಅರಿಕೆ ಮಾಡಿದ ಮೂರು ತಿಂಗಳೊಳಗೆ ಪವರ್ ಸಪ್ಲೈ ಮಾಡಿದ್ದೇವೆ. ಆದರೆ ಒಂದೇ ಸಲಕ್ಕೆ ಕೆರೆ ಕಟ್ಟೆ ಆಗಬೇಕು, ಹೂಳು ತೆಗೆಯಬೇಕು, ವಿದ್ಯುಚ್ಛಕ್ತಿ ಕೊಡಬೇಕು, ಕಾರ್ಖಾನೆಗಳನ್ನು ತೆಗೆಯಬೇಕು, ಕೈಗಾರಿಕೋದ್ಯಮಗಳನ್ನು ನಡೆಸಬೇಕು, ಎಂದರೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಜಿ.ಎಂ.ಎಫ್ ಸ್ಕೀಂ ಪ್ರಕಾರ ಮುಕ್ಕಾಲುಪಾಲು ಭಾಗ ಹಣ ನೀರಾವರಿ ಕಾಮಗಾರಿಗಳಿಗೆ ಖರ್ಚು ಮಾಡಿದ್ದೇವೆ. 1949-50 ರಲ್ಲಿ 1 ಕೋಟಿ 7 ಲಕ್ಷರೂಪಾಯಿಗಳನ್ನು ನೀರಾವರಿ ಕಾಮಗಾರಿಗಳಿಗಾಗಿ ಖರ್ಚು ಮಾಡಿದ್ದೇವೆ. ಅದನ್ನು ತಾವು ನೋಡಬೇಕು. ಯಾವಾಗಲೂ 35 ಲಕ್ಷರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚು ಮಾಡುತ್ತಾ ಇರಲಿಲ್ಲ. 1949-50ರಲ್ಲಿ 1 ಕೋಟಿ, 1950-51ರಲ್ಲಿ $1\frac{1}{2}$ ಕೋಟಿ ರೂಪಾಯಿ, 1951-52ರಲ್ಲಿ 1 ಕೋಟಿ 80 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕೆರೆ ಅಣೆಕಟ್ಟು ಇವುಗಳಿಂದ ಪ್ರತಿಫಲಬರಬೇಕಾದರೆ ರೈತರು ವ್ಯವಸಾಯ ಮಾಡಬೇಕು, ಬೆಳೆ ಬೆಳೆಯಬೇಕು. ಅನಂತರ ಪ್ರತಿಫಲ ಬರುತ್ತದೆ. ಆದ್ದರಿಂದ ಅಸೆಟ್ಸ್ ಸ್ಟೆಪ್ ಅಪ್ ಮಾಡುವುದರಲ್ಲೂ ಕೂಡ ದೂರಾಲೋಚನೆಯಿಂದ ಶಾಶ್ವತವಾದ ಕಾರ್ಯಗಳನ್ನು ಮಾಡಬೇಕೆಂಬ ಆಲೋಚನೆಯನ್ನಿಟ್ಟುಕೊಂಡು ಮಾಡಿದ್ದೇವೆ. ನೀರಾವರಿ ಕಾಮಗಾರಿಗಳಿಗೆ ಖರ್ಚುಮಾಡಿರುವುದನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಂಡು, ಸಬ್‌ಸಿಡಿ ಕೊಡುತ್ತೇವೆ, ಸಾಲಕೊಡುತ್ತೇವೆ, ಮಾಡಿರುವ ಕಾರ್ಯ ಚೆನ್ನಾಗಿದೆ ಎಂದು ಹೇಳಿದರು ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

Janab J. MOHAMED IMAM.—On a point of information. Are we hearing the Budget speech or the administration report of the past Government?

Sri T. MARIAPPA.—I am not prepared to give way.

Janab J. MOHAMED IMAM.—I rise to a point of order. I submit that what my friend says is not relevant to the Budget speech or connected with the Budget. What he has been saying is a recount of the administration during his regime, which is quite inappropriate. So I submit that it is not relevant to the Budget discussion. We are not here to hear what was done during his time.

Mr. SPEAKER.—The point is, some of the Members of the Opposition Party have raised all sorts of questions and they have criticised the Government severely as though nothing was done in the past. Sri M. Shankar Linge Gowda was also stating that very little money has been spent for irrigation. Sri Mariappa perhaps is referring to question No. 383 and answer and it is quite relevant. The Hon'ble Member must have patience and listen to him.

Janab J. MOHAMED IMAM.—We have abundance of patience.

Mr. SPEAKER.—The Hon'ble Member may go on.

ಶ್ರೀ ಟಿ. ಮರಿಯಪ್ಪನವರು.—ಅಧ್ಯಕ್ಷರಿಗೆ ತುಂಬ ಋಣಿಯಾಗಿದ್ದೇನೆ. ಅಲ್ಲದೆ, 1949ರಲ್ಲಿ ನೀರಾವರಿ ಕಾಮಗಾರಿಗಳ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆ ಇಟ್ಟುಕೊಂಡು ಕೆಲಸ ಪ್ರಾರಂಭ ಮಾಡಿದೆವು. ಅವರ ತಾಲ್ಲೂಕಿನ ಮೂರು ಕೆರೆಗಳ ಕೆಲಸ ಪ್ರಾರಂಭಮಾಡಿ ಈಗ ಅದು ಮುಗಿಯುವ ಸ್ಥಿತಿಯಲ್ಲಿದೆ. ಇದೇ ರೀತಿ ವಾಣಿವಿಲಾಸ ಸಾಗರದ ಕೆಳಗೆ ಇದ್ದ ನೀರಿನ ಕಷ್ಟ ದೇವರೊಬ್ಬನಿಗೇ ಪ್ರೀತಿ. 10 ಸಾವಿರ ಎಕರೆ ಸಾಗು ಆಗಬೇಕಾದ ಕಡೆ 5 ಸಾವಿರ ಎಕರೆ ಆಗುತ್ತಾ ಇರಲಿಲ್ಲ. ಶ್ರೀಮಾನ್ ಭೀಮಪ್ಪನಾಯಕರೂ ಇದ್ದಾರೆ; ಅವರೂ ಅದೇ ಡಿಸ್ಟ್ರಿಕ್ಟಿನ ಪ್ರತಿನಿಧಿಗಳು ; 16 ಪಿಕ್ ಅಪ್ಸ್ ಹಾಕಿಸಿ ವಾಟರ್ ಸಪ್ಲೈ ಕಂಟ್ರೋಲ್ ಮಾಡಿದೆವು. ಹೀಗೆಯೇ ಕೋಲಾರದ ಪ್ರತಿನಿಧಿಗಳು ಇದ್ದಾರೆ, ಅದು ಡ್ರೈ-ಏರಿಯಾ ಮಳೆಬರುವುದೇ ಕಷ್ಟ. ಬಂದ ನೀರನ್ನು ಶೇಖರಿಸಬೇಕೆಂದು ಅಲ್ಲಿ ಮಾಡಿರುವಷ್ಟು ಕೆರೆ ಕಾಮಗಾರಿಯನ್ನು ಮೈಸೂರು ದೇಶದ ಮತ್ತಾವ ಭಾಗದಲ್ಲೂ ಮಾಡಿಲ್ಲ. ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ಎಂಬುದು ಕೋಲಾರ ಡಿಸ್ಟ್ರಿಕ್ಟಿನಲ್ಲಿ ಪ್ರಸಿದ್ಧಿಯಾಯಿತು. ನೀರಾವರಿ ಕಾಮಗಾರಿಗಳು ಮುಂದಿನ ದೇಶದ ಭವಿಷ್ಯಕ್ಕೆ ಬಹಳ ಅಗತ್ಯವಾದವು. ಆ ಕಾರ್ಯ ಮಾಡದೇ ಹೋಗಿದ್ದರೆ ಕರ್ತವ್ಯಭ್ರಷ್ಟರಾಗುತ್ತಾ ಇದ್ದೆವು. ಮಾಡಬೇಕಾದ ಕರ್ತವ್ಯ ಮಾಡಿದ್ದಕ್ಕೆ ಈ ಟೀಕೆಯೇ! ಮೈಸೂರು ದೇಶದಲ್ಲಿ 25 ಸೇತುವೆಗಳನ್ನು ಪೂರ್ತಿಯಾಗಿ ಮಾಡಿದೆವು. ಹಾಸನ ಡಿಸ್ಟ್ರಿಕ್ಟಿನವರಲ್ಲಿ ವಿನಯದಿಂದ ಕೇಳುತ್ತೇನೆ : 4-5 ವರ್ಷಗಳ ಹಿಂದೆ ಪ್ರಾರಂಭಿಸಿದ ಸೇತುವೆ 6 ತಿಂಗಳಿನಲ್ಲಿ ಪೂರ್ತಿ ಆಗಲಿಲ್ಲವೇ? ಹೇಮಾವತಿ ನದಿ ದೊಡ್ಡಪ್ರವಾಹ ಬರತಕ್ಕ ನದಿ; ಅಡಿಪಾಯ ತೆಗೆಯಬೇಕಾದರೆ ಬಹಳ ಕಷ್ಟ. ಹೀಗೆಯೇ ಲೋಕಪಾವನಿ ಬ್ರಿಡ್ಜನ್ನು 5-6 ತಿಂಗಳಿನಲ್ಲೇ ಕಟ್ಟಿದ್ದೇವೆ. ಅದನ್ನು ಬಹಳ ದಕ್ಷತೆಯಿಂದ ಮಾಡಿದ್ದೇವೆ. ಬಹಳ ಮಿತರಣೆಯಿಂದ ಹಣ ಖರ್ಚು ಮಾಡಿದ್ದೇವೆ! ಇವೆಲ್ಲಾ ನ್ಯಾಷನಲ್ ಅಸೆಟ್ಸ್. ಆದರೆ ಜನಾಬ್ ಇಮಾಂ ರವರು ಬರುವಕಡೆ ಸೇತುವೆ ಕೆರೆ ಕಟ್ಟಿಲ್ಲ ಎಂದು ಹೇಳಿ ಕಟ್ಟಿರುವ ಕಡೆಯೂ ನೋಡದೆ ಸೀದಾ ಬೆಂಗಳೂರಿಗೆ ಬಂದು ಹೀಗೆ ಹೇಳುವುದರಿಂದ ಏನೂ ಫಲವಿಲ್ಲ. ಆದ್ದರಿಂದ ಅಂಕಿ ಅಂಶಗಳನ್ನು ಓದಿ ತಿಳಿದು ಕೊಂಡು............

ಜನಾಬ್ ಜೆ. ಮಹಮದ್ ಇಮಾಂರವರು.—ನಾವು ಮಾಡಿದ ಕೆಲಸದಲ್ಲಿ 1/3 ಭಾಗ ಅವರು ಮಾಡಿಲ್ಲ ಎಂದು ಹೇಳುತ್ತೇನೆ. I take a challenge. He has not done 1/100th of the work I have done. (Laughter)

ಶ್ರೀ ಟಿ. ಮರಿಯಪ್ಪನವರು.—ಇರಬಹುದು; ಅವರು ಮಾಡಿದ್ದ ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕೆ ನನಗೆ ಶಕ್ತಿಯಿಲ್ಲ. ಅವರು ಏನೇನೋ ಮಾಡುತ್ತಿದ್ದರು. ಅದೇನೆಂಬುದು ಅವರಿಗೇ ಗೊತ್ತು, ನನಗೇ ಗೊತ್ತು.

ಆ ಮೇಲೆ ಒಬ್ಬ ಮಾನ್ಯ ಸದಸ್ಯರು ಸಹಕಾರ ಕ್ಷೇತ್ರದಲ್ಲಿ ಏನೂ ಅಭಿವೃದ್ಧಿಯಾಗಲಿಲ್ಲವೆಂದು ಹೇಳಿದರು. ಈ ದಿವಸ ಆ ಸದಸ್ಯರು ಬರಲಿಲ್ಲ. ಅವರೂ ಆ ಸಹಕಾರ ಪ್ರಚಾರ ಸಂಸ್ಥೆಯ ಸೆಕ್ರಿಟರಿಯವರು. ನನ್ನೊಡನೆ ಎಷ್ಟೋಸಲ ಅವರು ಹೇಳಿದ್ದಾರೆ. 1905ರಿಂದ 1947ನೆಯ ಇಸವಿಯ ವರೆಗೆ ಕೆಲಸ ಮಾಡಿದ್ದರಲ್ಲಿ ನಮ್ಮ ದೇಶದಲ್ಲಿ 2,500 ಸೊಸೈಟಿಗಳಾದುವು. ಅದೂ ಮುಲುಕಿ ಮುಲುಕಿ 42 ವರ್ಷಗಳ ಕಾಲ ಕಷ್ಟ ಪಟ್ಟು ಇಷ್ಟು ಸೊಸೈಟಿಗಳನ್ನು ಮಾಡಲು ಸಾಧ್ಯವಾಯಿತು. ಅಂಥಾದ್ದರಲ್ಲಿ 1947ರಿಂದ—1952ರ ಹೊತ್ತಿಗೆ ಐದೇ ವರ್ಷಗಳಲ್ಲಿ 2,500 ಸೊಸೈಟಿಗಳನ್ನು ಏರ್ಪಡಿಸಿದ್ದೇವೆ. ಅವೂ ನಾಮಕವಾಸ್ತೆಗೆ ಮಾತ್ರವಿರುವ ಸೊಸೈಟಿಗಳಲ್ಲ. ಪ್ರತಿಯೊಂದರಲ್ಲೂ ಸದಸ್ಯರ ಸಂಖ್ಯೆಯನ್ನು ಜಾಸ್ತಿಮಾಡಿದ್ದೇವೆ ; ಷೇರು ಬಂಡವಾಳವನ್ನು ಜಾಸ್ತಿ ಮಾಡಿದ್ದೇವೆ. It is on a planned basis that we have established Co-operative Societies. ಹೇಗೆಂದರೆ, geographical ಆಗಿ ನೋಡುವುದಾದರೆ, ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿ ಸೊಸೈಟಿಗಳಿರಲಿಲ್ಲ. ನಾವೀಗ ಹಳ್ಳಿ ಹಳ್ಳಿಗಳಲ್ಲಿ ಸ್ಥಾಪನೆ ಮಾಡಿರುವುದನ್ನು ನೀವೇ ನೋಡಬಹುದು; ಅವುಗಳಿಗೆ ಸಾಕಾದಷ್ಟು ಕ್ರೆಡಿಟ್ ಇರಲಿಲ್ಲ; ಕ್ರೆಡಿಟ್ ಸಿಕ್ಕುವುದಕ್ಕೆ ವ್ಯವಸ್ಥೆಮಾಡಿದ್ದೇವೆ. ಸೊಸೈಟಿಗಳು ಒಂದು ಗೊತ್ತು ಗುರಿ ಇಲ್ಲದೆ crude ಆಗಿ gravitate ಆಗುತ್ತಿದ್ದುದನ್ನು ತಪ್ಪಿಸಿ functional basis ಮೇಲೆ ಕೆಲಸಮಾಡುವಂತೆ ಮಾಡಿದ್ದೇವೆ. ಇದೇ ಪ್ರಕಾರ ಮಲ್ಟಿಪರ್ಪಸಸ್ ಸೊಸೈಟಿಗಳೇರ್ಪಟ್ಟಿವೆ; ಶ್ರೀಮಾನ್ ಸಿದ್ಧವೀರಪ್ಪನವರೇ ಒಂದು ಸೊಸೈಟಿಗೆ ಅಧ್ಯಕ್ಷರಾಗಿದ್ದರು. ಅದು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿತ್ತೆಂಬುದನ್ನು ಕೇಳಿ. ಶ್ರೀ ಹುಚ್ಚಮಾಸ್ತಿಗೌಡರಿಗೂ ಇಂಥ ಸೊಸೈಟಿಗಳ ಅನುಭವ ಇದೆ. ಮುಳಬಾಗಿಲು ಸೊಸೈಟಿ, ಅರಸೀಕೆರೆ ಸೊಸೈಟಿ, ಎಷ್ಟು ಚೆನ್ನಾಗಿ ಈಗಲೂ ಕೆಲಸಮಾಡುತ್ತಿವೆ. ಸರ್. ವಿ. ಟಿ. ಕೃಷ್ಣಮಾಚಾರಿಯವರ ಕಮಿಟಿಯವರ ವರದಿಯನ್ನು ತಾವಿಂದು ತೆಗೆದು ನೋಡುವುದಾದರೆ, ಮೈಸೂರು ದೇಶದಲ್ಲಿ ಯಾವ ರೀತಿ ಈಗ ಮಾಡಿದೆಯೋ ಅದೇ ರೀತಿಯಿರಬೇಕೆಂದು ಹೇಳಿ ಅವರು ನಮ್ಮ ನೀತಿಯನ್ನೇ endorse ಮಾಡಿರುವಂತಿದೆ. ಅವರೇ ಹೇಳಿದ್ದಾರೆ :

> "Rural Development must be through Multi-purpose Co-operative Societies. It must ultimately work for the rural upliftment"

ಎಂದು. ಅದೇ ರೀತಿ ನಾವು community centers ಎಂದು ಕೇಂದ್ರಗಳನ್ನೇರ್ಪಡಿಸಿದ್ದೇವೆ. This Very word is used in the Planning Commission Report and also in the U.S.A. Technical Co-operation Scheme. ಮೈಸೂರಿನಲ್ಲಿ ಎಂಥ talent ಇದೆಯೆಂಬದನ್ನು ತಾವೇ ದಯವಿಟ್ಟು ನೋಡಿ! ಅವರು ಹೇಗೆ ರೂಪಗೊಳಿಸಬೇಕೆಂದು ಹೇಳಿದ್ದಾರೋ ಅದೇ ರೀತಿ ಮುಂಚೆಯೇ ಮಾಡಿದೆಯಲ್ಲಾ! ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ರವರು, ನಿಮ್ಮ ಕೋ-ಆಪರೇಟಿವ್ ಕಾಮನ್‌ವೆಲ್ತ್ ಎಲ್ಲಿ ಎಂದು ಕೇಳಿದರು. ಇವೆಲ್ಲಾ ಬರಿ ಮಾತಿನಲ್ಲಾಗುವುದಿಲ್ಲ. ಇನ್ನೂ ಕಷ್ಟಪಟ್ಟು ಅಭಿವೃದ್ಧಿಮಾಡಬೇಕು. ವಿನಾಕಾರಣ ಟೀಕಿಸುವುದರಿಂದೇನಾಯಿತು ? ನಾವೀಗ ತಳಹದಿ ಹಾಕಿಟ್ಟಿದ್ದೇವೆ. ಅದರ ಮೇಲೆ ಕೆಲಸವಾಡುವುದನ್ನು ನಿಮಗೆ ಬಿಟ್ಟಿದೆ. ನಮ್ಮ ಸಹಕಾರ ಸಂಸ್ಥೆಗಳನ್ನು ಪರೀಕ್ಷಿಸಿಕೊಂಡು ಹೋಗಿ ರಿಸರ್ವ್ ಬ್ಯಾಂಕಿನವರೂ ಸಹ ನಮ್ಮ ಕೋ-ಆಪರೇಟಿವ್ ಸೊಸೈಟಿಗಳಿಗೆ Short-term Credit facilites ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇಲ್ಲಿಂದ Statstics ಎಲ್ಲವನ್ನೂ ತೆಗೆದುಕೊಂಡುಹೋಗಿ ಅದಷ್ಟು ಬೇಗನೆ ಹಣದ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ರೈತರನ್ನು ಗಿಣಿಯಹಾಗೆ ಚೆನ್ನಾಗಿ ಸಾಕುತ್ತೇವೆಂದು ಹೇಳಿ ಹೊಟ್ಟೆಗೆ ಸರಿಯಾಗಿ ಕೊಡದೆ ಇದ್ದರೆ ಏನು ಪ್ರಯೋಜನ ? ನಾವು ಮಾಡುತ್ತಿರುವುದೆಲ್ಲಾ ಒಂದು ಯೋಜನೆಯ ಪ್ರಕಾರ, ಒಂದು ಯಂತ್ರದಂತೆ. ಒಂದು ದೊಡ್ಡ ಗುರಿಯಿಟ್ಟುಕೊಂಡು ಮಾಡುತ್ತಿದ್ದೇವೆ. ಕೋ-ಆಪರೇಟಿವ್ ಕಾಮನ್‌ವೆಲ್ತ್ ನಮ್ಮ ದೇಶದಲ್ಲಿ ಆಗಬೇಕು, ನಿಜ. ಈಗ ನಾವು ಸರಿಯಾದ ತಳಹದಿಹಾಕಿದ್ದೇವೆ. ನೆಲದ ಒಳಗಡೆ 10 ಅಡಿ ಕಲ್ಲಿನ ಪಾಯಹಾಕಿದೆ; ಮೇಲೆ ಕಟ್ಟಡ ಹಾಕಬೇಕಾಗಿದೆ. ಯಾವುದೇ ಕಟ್ಟಡ ಹಾಕಬೇಕಾದರೂ the foundation must be surely and properly laid. ಕಟ್ಟಡ ಮಾತ್ರ ಮೇಲೆ ನಮಗೆ ಕಾಣುತ್ತದೆ. ಕಟ್ಟಡವನ್ನು ನೋಡಿದರೆ ತಳಪಾಯ ಭದ್ರವಾಗಿದೆಯೇ ಇಲ್ಲವೇ ಎಂಬುದು ಗೊತ್ತಾಗುವುದಿಲ್ಲ. ಇನ್ನು ಮೇಲೆ ಸುರಕ್ಷಿತವಾದ ಕಟ್ಟಡ ಕಟ್ಟಬೇಕಾಗಿದೆ. ಅದಕ್ಕೀಗ ಸರಿಯಾದ ತಳಹದಿಯನ್ನು ಹಾಕಿದೆಯೆಂದು ನಾನು ಧೈರ್ಯವಾಗಿ ಹೇಳುತ್ತೇನೆ.

ರೇಷ್ಮೆಯ ವಿಚಾರ ಹೇಳಿದರು—ಅವರು ಹೇಳಿದ್ದನ್ನು ಕೇಳಿ ನಿಜವಾಗಿಯೂ ನನಗೆ ಬಹಳ ವ್ಯಸನವಾಯಿತು. ಮೈಸೂರು ಸರ್ಕಾರದವರು ಇದರ ವಿಷಯದಲ್ಲಿ ಕೈಕೊಂಡಿರುವಷ್ಟು ಕಾರ್ಯಕ್ರಮವನ್ನು ಪ್ರಾಯಶಃ ಇನ್ನಾವ ಪ್ರಾಂತೀಯ ಸರ್ಕಾರದವರೂ ಮಾಡಿಲ್ಲವೆಂದು ಹೇಳಬಲ್ಲೆ. ರೇಷ್ಮೆ ಕೈಗಾರಿಕೆಯ ಸಮಸ್ಯೆಯನ್ನು ಹೇಗೆ tackle ಮಾಡಬೇಕೆಂಬುದನ್ನು ಶಾಸ್ತ್ರಯವಾಗಿ ನೋಡಿ ಕೆಲಸಮಾಡಿದ್ದೇವೆ. ಈ ಕಮಿಟಿಯಲ್ಲಿ ಸರ್ಕಾರದವರು, ಕೈಗಾರಿಕೆಯವರು, ಮಲ್ಬರಿ ಬೆಳೆಯುವವರು, ಫಿಲೇಚರ್ ರೇಷ್ಮೆ ತಯಾರುಮಾಡುವವರು ಮತ್ತು ಮಾಜಿ ಮಂತ್ರಿಗಳು ಎಲ್ಲರನ್ನೂ ಸೇರಿಸಿಕೊಂಡು ಎಲ್ಲರ ಅನುಭವವನ್ನೂ ತೆಗೆದುಕೊಂಡು ಕೇಂದ್ರ ಸರ್ಕಾರದವರನ್ನೂ ಕೇಳಿ ಇದಕ್ಕಿರತಕ್ಕ ಬಾಧೆಯನ್ನು ತಪ್ಪಿಸುವ ಉದ್ದೇಶದಿಂದ ಒಂದಲ್ಲ, ಎರಡಲ್ಲ, ನಾಲ್ಕೈದು ಮನವಿಗಳನ್ನು ಮಾಡಿಕೊಂಡಿದ್ದೇವೆ. ಪರದೇಶದ ಸಿಲ್ಕಿನ ಪೈಪೋಟಿಯಿಂದ ನಮ್ಮ ಕೈಗಾರಿಕೆ ನಾಶವಾಗುತ್ತಿದೆ, ಇದಕ್ಕೆ ರಕ್ಷಣೆ ಕೊಡಬೇಕೆಂದು ಒತ್ತಾಯ ಪಡಿಸಿದ್ದೇವೆ. ಅದರಲ್ಲೂ ರೆಗ್ಯುಲೇಟೆಡ್ ರೀತಿಯಲ್ಲಿ ಸಿಲ್ಕ್ ಬರುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿರುವುದಲ್ಲದೆ. Quantitative limit ನ್ನು ಕೂಡ ಗೊತ್ತುಮಾಡಬೇಕೆಂದು ಹೇಳಿದ್ದೇವೆ. ಇದನ್ನು ಮಾಡಬೇಕಾದದ್ದು ಅಗತ್ಯ; ಅದರಂತೆ ಮಾಡಿದ್ದೇವೆ.

ಈ ಸಂದರ್ಭದಲ್ಲಿ ಇನ್ನೊಂದು ವಿಚಾರ ಹೇಳಿದರು : ನಾವು ಸುಮ್ಮನೆ ಏಕೆ ಇಂಥ ಸಿಲ್ಕ್ ಕೈಗಾರಿಕೆ ಇಟ್ಟುಕೊಂಡಿರಬೇಕು ? ಒಳ್ಳೆಯ ಸಿಲ್ಕನ್ನು ತಯಾರು ಮಾಡುವುದಕ್ಕೆ ನಮ್ಮಿಂದ ಸಾಧ್ಯವಿಲ್ಲದ ಮೇಲೆ ಇದನ್ನು ನಿಲ್ಲಿ

ಸುವುದೇ ಒಳ್ಳೆಯದು ಎಂದು ಹೇಳಿದರು. ಆರೀತಿ ಮಾನ್ಯಸದಸ್ಯರು ನಮ್ಮದೇಶವನ್ನೂ ಪಾಶ್ಚಿಮಾತ್ಯ ದೇಶದವರನ್ನೂ ಹೋಲಿಸಬಾರದು. ಅವರೂ ಹಿಂದೆ 40-50 ವರ್ಷಗಳ ಕೆಳಗೆ ನಮ್ಮಂತೆಯೇ ಇದ್ದರೆಂಬುದನ್ನು ತಿಳಿಯಬೇಕು. ನಾವೂ ವಿದ್ಯಾಭ್ಯಾಸ ಮಾಡುವಾಗ ಮೊದಲು ಅಕ್ಷರ ಕಲಿತು ಆಮೇಲೆ ಒಂದನೆಯ ಕ್ಲಾಸು, 2ನೆಯ ಕ್ಲಾಸು ಓದುವುದಿಲ್ಲವೇ? ಅಂತೆಯೇ ನಾವೀಗ ತಯಾರುಮಾಡುತ್ತಿರುವುದು ಬಿ-ಗ್ರೇಡಿರಬಹುದು. ಇದನ್ನು ಏಕದಂ ಎ.ಗ್ರೇಡ್ ಎಕೆ ಮಾಡಬಾರದೆಂದು ನೀವು ಹೇಳಬಹುದು. ಅದಕ್ಕೆ ಸರಿಯಾದ ವಾತಾವರಣ ಇರಬೇಕು. ನ್ಯಾಯವಾದ ಬೆಲೆಗಳು ನಿಗದಿಯಾಗಿ ಸಿಕ್ಕುವಂತಿರಬೇಕು. ಈಗ ಮಾರ್ಕೆಟ್ ದರಗಳಲ್ಲಿ ವಿಪರೀತ ಏರುಪೇರುಗಳಿವೆ. ಇದರ ದೆಸೆಯಿಂದ ನಮ್ಮ ರೈತರೆಲ್ಲಾ ಹಾಳಾಗಿ ಕಂಗೆಟ್ಟಿದ್ದಾರೆ. ನಮ್ಮ ದೇಶದ 60,000 ಸಂಸಾರಗಳು ಇಂದು ಕಷ್ಟದೆಶೆಯಲ್ಲಿವೆ. ದುರದೃಷ್ಟವಶಾತ್ ಧಾರಣೆಗಳು ಬಿದ್ದುಹೋಗಿರುವುದರಿಂದ ಈ ಕೈಗಾರಿಕೆ ಬಹಳ ಕಷ್ಟಾವಸ್ಥೆಗೆ ಸಿಕ್ಕಿದೆ. ಹೀಗಿರುವಾಗ ನಿಮಗೆ ಒಳ್ಳೆಯ ಸಿಲ್ಕ್ ಸಿಕ್ಕಲಲ್ಲನೆಂದುಹೇಳಿ, ನಮ್ಮ ಯಂತ್ರಗಳನ್ನೆಲ್ಲಾ ಕಿತ್ತು ಹಾಕಿ ಎಂದು ಹೇಳುವುದು ತರವಲ್ಲ. ಅಲ್ಲದೆ ನಮ್ಮ ಫಿಲೇಚರ್‌ಗೆ ಬೇಕಾದ ಯಂತ್ರ ಸಾಧನಗಳನ್ನು ಹೊಸದುಮಾಡಬೇಕಾಗಿದೆ. ಅಂಥಾದ್ದರಲ್ಲೂ ಈವತ್ತಿಗೂ ನಮ್ಮಲ್ಲಿನ Silk woven products, ಮೈಸೂರು ಸಿಲ್ಕ್‌ಫ್ಯಾಕ್ಟರಿ ಸಿಲ್ಕು ಬಹಳ ಚೆನ್ನಾಗಿ ಖರ್ಚಾಗುತ್ತಿದೆ; firts class ಮಾಲಾಗಿದೆ.

ಅಲ್ಲದೆ ಇನ್ನೊಂದಂಶವನ್ನೂ ಯಾವ ಸದಸ್ಯರೇ ಆಗಲಿ ಗಮನದಲ್ಲಿಡಬೇಕು. ನಮ್ಮ productಗಳ ವ್ಯಾಪಾರಕ್ಕೆ ಚ್ಯುತಿ ಬಾರದರೀತಿಯಲ್ಲಿ ತಾವು ಯಾವ ಟೀಕೆಗಳನ್ನು ಬೇಕಾದರೂ ಮಾಡಬಹುದು. ನಮ್ಮ ಮಾತುಗಳು Business worldನ್ನು ಬಹಳ affect ಮಾಡುತ್ತವೆ. ಬೇರೆಯವರು ಏನು ಹೇಳುತ್ತಾರೆ? ನಮ್ಮಲ್ಲಿನ M.L.A. ಗಳೇ ಈ ಅಭಿಪ್ರಾಯ ಕೊಟ್ಟಿದ್ದಾರೆ ಎಂದು ಕೆಳಭಾವನೆಯನ್ನು ತೋರ್ಪಡಿಸುತ್ತಾರೆ. ಆದ್ದರಿಂದ ಬಹಳ ತೂಕದಿಂದ, ಎಚ್ಚರಿಕೆಯಿಂದ ನಮ್ಮ ಕೈಗಾರಿಕಾ ಸಾಮಾನುಗಳ quality ಯ ವಿಚಾರ ಮಾತನಾಡಬೇಕು. ಏನಿದ್ದರೂ ತಮ್ಮ Criticism ರಚನಾತ್ಮಕವಾಗಿರಲೆಂದು ಮಾತ್ರ ನಾನು ವಿನಯದಿಂದ ಪ್ರಾರ್ಥಿಸುತ್ತೇನೆ.

ಆಖೈರಾಗಿ ಒಂದು ಮಾತು. ನಾನು ಮೊದಲೇ ಹೇಳಿದಹಾಗೆ ತಮ್ಮ ಟೀಕೆಗಳು ರಚನಾತ್ಮಕವಾಗಿರಬೇಕು. ನಮ್ಮ ಬಡ್ಜೆಟ್ಟು ಖೋತಾ ಬಡ್ಜೆಟ್ಟೆಂದು ನಾವೇನೂ ನಿರಾಶರಾಗಬೇಕಾಗಿಲ್ಲ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವಿದೆ. ರಿಟ್ರೆಂಚ್‌ಮೆಂಟ್ ಮಾಡಬೇಕೆಂದರೆ, ಯಾವುದನ್ನು ರಿಟ್ರೆಂಚ್ ಮಾಡಿಕೊಳ್ಳಬೇಕು, ಯಾವಾಗ ರಿಟ್ರೆಂಚ್ ಮಾಡಬೇಕೆಂಬುದನ್ನು ನೋಡಿ ಮಾಡಿಕೊಳ್ಳಬಹುದು. ಅವಶ್ಯಕವಾಗಿದ್ದರೆ, ಈಗ ರಿಟ್ರೆಂಚ್ ಮಾಡೋಣ; ಮುಂದೆ increased activities ನಡೆಸಬೇಕೆಂದರೆ ಮತ್ತೆ ಹೆಚ್ಚಿಗೆ ಸೇರಿಸಿಕೊಳ್ಳಬಹುದು. ಇಷ್ಟಕ್ಕೆ ನಿರಾಶರಾಗಿ ನಮ್ಮ ಆಪದ್ಧನವೆಲ್ಲಾ ಹೋಯಿತಲ್ಲಾ! 5 ಕೋಟಿ ರೂಪಾಯಿಗಳ ನಷ್ಟವಾಯಿತಲ್ಲಾ! ಎಂದು ಚಿಂತಿಸುವುದರಿಂದೇನೂ ಪ್ರಯೋಜನವಿಲ್ಲ. ತಾವೇ ನೋಡಿ, ಇಂದೂ ಪಶ್ಚಿಮ ಬಂಗಾಳದಲ್ಲಿ $3\frac{1}{2}$ ಕೋಟಿ ಡಫಿಸಿಟ್ ಆಗಿಲ್ಲವೇ; ಮದ್ರಾಸಿನಲ್ಲಿ 2·57 ಕೋಟಿ ರೂಪಾಯಿಗಳ ಡಿಫಿಸಿಟ್ ಇಲ್ಲವೇ? ತಾವೂ ಇಂದೇನು ಕಷ್ಟಗಳಿದ್ದರೂ ಉತ್ತಮ ಪಡಿಸಿಕೊಳ್ಳಬಹುದು. ಮುಖ್ಯವಾಗಿ ನಮ್ಮ ಮಿತ್ರರಿಗೆ, "A timid heart hath never won a fair lady" ಎಂದು ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

2 P.M.

ಶ್ರೀ ಟಿ. ನಾಗಪ್ಪನವರು (ತರೀಕೆರೆ) —ಸ್ವಾಮಿ ಸಭಾಪತಿಗಳೆ, ನಮ್ಮ ಮುಂದೆ ಈಗ ನಮ್ಮ ಮುಖ್ಯ ಮಂತ್ರಿಗಳು ಇಟ್ಟಿರುವ 1952-53 ನೆಯ ಸಾಲಿನ ಆಯವ್ಯಯದ ಪಟ್ಟಿಯನ್ನು ಪರಿಶೀಲಿಸುವ ಈ ಸಂದರ್ಭದಲ್ಲಿ ಮಲೆನಾಡು ಅಭಿವೃದ್ಧಿಯ ವಿಷಯದಲ್ಲಿ ಹೆಚ್ಚುಗಮನ ಕೊಟ್ಟಿಲ್ಲ. ಈ ದೃಷ್ಟಿಯಿಂದ ಈ ಬಡ್ಜೆಟ್ಟು ಆಶಾದಾಯಕವಾಗಿಲ್ಲವೆಂದು ಹೇಳಿ ಒಂದೆರಡು ಸಲಹೆ ಮಾಡಬೇಕಾಗಿದೆ. ಈಗತಾನೆ ನಮ್ಮ ಮಾಜಿ ಮಂತ್ರಿಗಳು ಶ್ರೀ ಮರಿಯಪ್ಪನವರು ಕೋಲಾರದ ವಿಷಯದಲ್ಲಿ ಒಂದೆರಡು ಸಲಹೆಗಳನ್ನು ಕೊಟ್ಟರು. ಯಳಂದೂರು ಕೃಷ್ಣರಾಜಪೇಟೆ—ಇವುಗಳಲ್ಲಿ ಮಾಡಿದಷ್ಟು ಖರ್ಚು ಇನ್ನೆಲ್ಲೂ ಮಾಡಿಲ್ಲ ಎಂದು ಹೇಳಿದರು. ಹಿಂದೆಯೇ ಇಷ್ಟು ಹೆಚ್ಚಾಗಿ ಮಲೆನಾಡಿನಲ್ಲಿ ಖರ್ಚುಮಾಡಿದ್ದಿದ್ದರೆ ಈ ದಿವಸ ಕೋಲಾರದಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರುತ್ತಿತ್ತೆ? ಎಂದು ನಾನು ಹೇಳುತ್ತೇನೆ. ಚಿಕ್ಕಮಗಳೂರು ಜಿಲ್ಲೆ ಮತ್ತು ಇತರ ಮಲೆನಾಡು ಪ್ರದೇಶಗಳ ಅಭಿವೃದ್ಧಿಯಾಗಬೇಕೆಂದು ಎಷ್ಟೋ ಸಾರಿ ಕೇಳಿದ್ದೇವೆ. ಮಲೆನಾಡಿನ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹೆಸರಿಗೆ ಮಲೆನಾಡು ಎಂದು ಇದ್ದರೂಕೂಡ, ಇಲ್ಲಿ ನೀರಿನ ಅಭಾವ ಜಾಸ್ತಿ. ಅಲ್ಲಿ 60-0 ಅಡಿ ಆಳ ಬಾವಿ ತೆಗೆದರೂ ನೀರು ಬರುವುದಿಲ್ಲ. ಒಂದು ವೇಳೆ ಬಂದರೂ ಅದು ಉಪ್ಪುನೀರಾಗಿರುವುದೇ ಹೆಚ್ಚು; ಸಿಹಿನೀರು ಹೆಚ್ಚಾಗಿರುವುದಿಲ್ಲ. ದೇವರು ಮಳೆಗಾಲದಲ್ಲಿ ಹೆಚ್ಚು ಮಳೆ, ಚಳಿಗಾಲದಲ್ಲಿ ಹೆಚ್ಚು ಚಳಿ ಆಗುವಂತೆಮಾಡಿದ್ದಾನೆ. 30—60 ಅಂಗುಲದಿಂದ ನೂರಾರು ಅಂಗುಲಗಳವರೆಗೆ ಮಳೆ ಬರುವ ಸ್ಥಳಗಳು ಅಲ್ಲಿವೆ. ಹೀಗಿದ್ದರೂ ಮೈದಾನದಲ್ಲಿರುವಷ್ಟು ದೊಡ್ಡ ಕೆರೆಗಳು ಮಲೆನಾಡಿನಲ್ಲಿಲ್ಲ. ಅಲ್ಲಿ ದೇವರದಯೆಯಿಂದ ಹೆಚ್ಚು ಮಳೆ ಬಿದ್ದರೂ, ಮಳೆಗಾಲದಲ್ಲಿ ಆ ನೀರನ್ನು ಶೇಖರಿಸಿ ಸರಿಯಾಗಿ ಸದ್ವಿನಿಯೋಗ ಪಡಿಸಿಕೊಳ್ಳುವ ಏರ್ಪಾಡುಗಳನ್ನು ಮಾಡಿಕೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಸಣ್ಣಸಣ್ಣ ಕರೆಗಳಿದ್ದರೂ ವಿಪರೀತ ಮಳೆಯಿಂದ ಆಗಾಗ ಒಡೆದು ಹೋಗುತ್ತವೆ. ಇದರಿಂದ ಒಡಕೆರೆಗಳು ಹೆಚ್ಚುತ್ತಿವೆ. ಇಂತಹ ಒಡಕೆರೆಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೇಕಾದಷ್ಟಿವೆ. ಸುಮಾರು 25-30 ವರ್ಷಗಳ ಹಿಂದೆ ತರೀಕೆರೆಯಲ್ಲಿ ಜಂಪಹಳ್ಳ ಪ್ರಾಜೆಕ್ಟ್ ಎಂಬುದನ್ನು ಸರ್ಕಾರದವರು ಹಣ ಖರ್ಚುಮಾಡಿ ಸರ್ವೆ ಮಾಡಿಸಿದರು. ಅಸೆಂಬ್ಲಿಯಲ್ಲಿಯೂ ಅನೇಕಸಾರಿ ಅದರ ವಿಷಯದಲ್ಲಿ ಚರ್ಚೆ ನಡೆದು ಕೆಲಸ ಆರಂಭವಾಗುವ ಸಂದರ್ಭ ಬಂದಿದ್ದೂ ಕೂಡ ನಿಂತು ಹೋಗಿದೆ. ಇದು ಆದರೆ ಇನ್ನೂ ಆರೇಳು ಸಾವಿರ ಎಕರೆ ಜಮೀನು ಇದರ ಹಿಂದೆ ತರಿ ಸಾಗುವಳಿಯಾಗುತ್ತದೆ. ಈ ಏಳೆಂಟು ಸಾವಿರ ಎಕರೆ ಆಬಾದಾಗಿದ್ದಿದ್ದರೆ ಕೋಲಾರ ಜಿಲ್ಲೆಯಲ್ಲಿ ಕ್ಷಾಮದ ಹೆಸರೇ ಇರುತ್ತಿರಲಿಲ್ಲ. ಈಗಲಾದರೂ ಈ ಜಲಾಶಯವನ್ನು ಮಾಡಿಸಬೇಕು.

ಶ್ರೀ ಎ. ಭೀಮಪ್ಪನಾಯಕರು.—ಮಲೆನಾಡು ಮಂತ್ರಿಗಳನ್ನು ಕೇಳಿ.

ಶ್ರೀ ಎಸ್. ಸಿದ್ದಪ್ಪನವರು.—ಮಲೆನಾಡು ಮಂತ್ರಿಗಳೂ ಅವರೇ ಮತ್ತು ಪಬ್ಲಿಕ್‌ವರ್ಕ್ಸ್ ಮಂತ್ರಿಗಳೂ ಅವರೇ !

ಶ್ರೀ ಟಿ. ನಾಗಪ್ಪನವರು.—ತರೀಕೆರೆ ಮಲೆನಾಡಾದರೂ ನೀರಿನ ಕಷ್ಟವಿದೆ. ಇದನ್ನು ಕಟ್ಟಿಸಿದರೆ ನೀರಿನ ಅಭಾವವೂ ತಪ್ಪುತ್ತದೆ. ಈಗಾಗಲೇ ಅಲ್ಲಿ ನೀರು ಸರಬರಾಯಿ ವ್ಯವಸ್ಥೆಗೆ ಮೂರು ಲಕ್ಷ ಮಂಜೂರು ಮಾಡಿ ಅರ್ಧ ಕೊಟ್ಟಿರುತ್ತಾರೆ. ಮುನಿಸಿಪಾಲಿಟಿಯವರು ಇನ್ನೂ ಅರ್ಧ ಭಾಗ ಒಂದೂವರೆ ಲಕ್ಷ ರೂಪಾಯಿ ಕೊಡಬೇಕೆಂದು ಮನವಿಮಾಡಿಕೊಂಡಿದ್ದಾರೆ. ಈ ಸಹಾಯವನ್ನು ಮಲೆನಾಡು ಅಭಿವೃದ್ಧಿಗಾಗಿ ಮಾಡಬೇಕೆಂದು ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ.

ಆರೋಗ್ಯ ದೃಷ್ಟಿಯಿಂದ ನೋಡಿದರೆ ಮಲೆನಾಡಿಗೆ ಹೆಚ್ಚು ಸಹಾಯ ಕೊಡಬೇಕು. ಅಲ್ಲಿ ಮಲೇರಿಯಾ ರೋಗ ಹೆಚ್ಚು.

ಶ್ರೀ ಎಚ್. ಸಿದ್ದವೀರಪ್ಪನವರು.—1951ನೆಯ ಇಸವಿ ಸೆನ್ಸಸ್ ನೋಡಿದರೆ ನಿಮ್ಮ ಆರೋಗ್ಯ ಚೆನ್ನಾಗಿದೆಯೆಂದು ಗೊತ್ತಾಗುತ್ತದೆ.

ಶ್ರೀ ಟಿ. ನಾಗಪ್ಪನವರು.—ಸರ್ಕಾರದವರು ಮಾಡಿದ್ದಾರೆ; ಆದರೂ ಇನ್ನೂ ಅಲ್ಲಿನ ತೊಂದರೆಯನ್ನು ನಿವಾರಿಸಬೇಕು. ತರೀಕೆರೆ ಮುನಿಸಿಪಾಲಿಟಿಯವರನ್ನು ಅರ್ಧ ಹಣ ಕೊಡಿ ಎಂದು ಕೇಳಿದ್ದಾರೆ. ಮುನಿಸಿಪಾಲಿಟಿಗಳಿಗೆ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವುದಕ್ಕೇ ಶಕ್ತಿಯಿಲ್ಲ. ಹೀಗಿರುವಾಗ ಅವರು ಹೇಗೆ ಕೊಡಬಲ್ಲರು ? ಅಲ್ಲಿ ಕುಡಿಯುವ ನೀರಿಲ್ಲ, ಸರಿಯಾಗಿ ಡ್ರೇನೇಜ್ ಇಲ್ಲ. ಸರ್ಕಾರದವರು ಹೆಚ್ಚು ಸಹಾಯ ಒದಗಿಸಬೇಕು. ಅಜ್ಜಂಪುರ ಮುನಿಸಿಪಾಲಿಟಿ ಕೇವಲ 10 ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ಪಡೆಯಿತು. 60—70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಅರ್ಧಕ್ಕೇ ಕೆಲಸ ನಿಲ್ಲಿಸಿ, ಸರ್ಕಾರದವರನ್ನು ಸಹಾಯ ಕೇಳುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಹೆಚ್ಚು ಹೆಚ್ಚಾಗಿ ಗ್ರಾಂಟು ಮತ್ತು ಕಂತುಗಳ ಮೇಲೆ ತೀರಿಸುವ ಸಾಲ ಈ ರೀತಿ ಹಣ ಸಹಾಯ ದೊರೆತರೆ ಮಲೆನಾಡು ಮುನಿಸಿಪಾಲಿಟಿಗಳು ಮುಂದುವರಿಯುತ್ತವೆ.

ಮಲೆನಾಡಿನಲ್ಲಿ ಆದಷ್ಟು ಕಡೆ ಡಿ.ಡಿ.ಟಿ. ಸ್ಪ್ರೇ ಮಾಡುವ ಕೆಲಸವನ್ನು ಕೈಕೊಂಡಿದೆ. ಆದರೆ ಪೂರ್ತಿಯಾಗಿ ಮಾಡಿಲ್ಲ. ಕೆಲವು ಭಾಗಗಳಲ್ಲಿ ಸರ್ಕಾರದವರೇ ಮಾಡುತ್ತಿದ್ದಾರೆ, ಮತ್ತೆ ಕೆಲವು ಕಡೆ ಅರ್ಧ ಖರ್ಚು ಕೊಡಿ ಎಂದು ಕೇಳುತ್ತಾರೆ. ಡಿ.ಡಿ.ಟಿ. ಸ್ಪ್ರೇ ಮಾಡಿ ಮಲೇರಿಯಾ ಹಾವಳಿ ಹೋದರೆ ಅಲ್ಲಿಗೆ ಕೋಲಾರ ಮುಂತಾದ ಕಡೆಗಳಿಂದ ಜನಗಳು ಹೋಗಲು ಅನುಕೂಲವಾಗುತ್ತದೆ. ಅಂತಹ ಪ್ರದೇಶಗಳಲ್ಲಿ ಕ್ಷಾಮ ಅಷ್ಟಾಗಿ ಇರುವುದಿಲ್ಲ. ಮಲೆನಾಡಿನ ಕಡೆ ಈ ಜನ ಹೋದರೆ ಅಲ್ಲಿ ಬೇಕಾದಷ್ಟು ಜಮೀನಿದೆ; ವ್ಯವಸಾಯ ಮಾಡಿಕೊಳ್ಳಬಹುದು. ಮಲೆನಾಡಿನಲ್ಲಿ ಕೇವಲ ಎರಡು ಸಾವಿರ, ನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಿ ಅಣೆಗಳನ್ನು ಕಟ್ಟಿದರೆ ಸಾವಿರಾರು ಎಕರೆ ತರಿ ಸಾಗಾಗುತ್ತದೆ. ತರೀಕೆರೆ ಪ್ರಾಂತದಲ್ಲಿ ದೇವರ ದಯೆಯಿಂದ ಹೆಚ್ಚು ಮಳೆ ಬರುವ ಕಡೆ ಹೆಚ್ಚು ನೀರು ಒದಗುತ್ತದೆ. ಇಂಥ ಕಡೆ ಸಣ್ಣ ಸಣ್ಣ ಅಣೆಕಟ್ಟೆಗಳನ್ನು ಏರ್ಪಾಡು ಮಾಡಿದರೆ ಕೋಲಾರ ಮುಂತಾದ ಕಡೆ ಕ್ಷಾಮ ಬರಲು ಅವಕಾಶವಿಲ್ಲ.

ಮಲೆನಾಡು ಮರಮಟ್ಟಿನ ಕೇಂದ್ರ. ಅಲ್ಲಿ ಫಾರೆಸ್ಟ್ ಇಂಡಸ್ಟ್ರೀಸ್ ಸ್ಕೂಲು ಏರ್ಪಾಡು ಮಾಡಿದರೆ ಕೈಗಾರಿಕೆ ಅಭಿವೃದ್ಧಿಯಾಗುತ್ತದೆ, ಇದರಿಂದ ಅಲ್ಲಿನ ಜನರು ಹೆಚ್ಚು ಸೌಕರ್ಯ ಪಡೆಯಲು ಅನುಕೂಲವಾಗುತ್ತದೆ. ತರೀಕೆರೆಯಲ್ಲಿ ಬೇಕಾದಷ್ಟು ಮರ ಇದೆ. ಯಾವ ಕಡೆ ಸಾಗಿಸುವುದಕ್ಕೂ ಅವಕಾಶವಿದೆ. ಮರವನ್ನು ಕೊಯ್ಯಿಸದೆ ತರೀಕೆರೆಯಿಂದ ಹೊರಗೆ ಕಳುಹಿಸಿದರೂ ಕೂಡ ನೂರಾರು ಅಡಿ ಮರ ವ್ಯರ್ಥವಾಗುತ್ತದೆ. ಬೇರೆ ಕಡೆಯವರು ಅಲ್ಲಿಂದ ತರಿಸಿಕೊಳ್ಳುವ ಟ್ರಾನ್ಸ್‌ಪೋರ್ಟ್ ಖರ್ಚೂ ಉಳಿಯುವಂತೆ ಮಾಡಬಹುದು. ಅಲ್ಲಿ ಒಂದು ಸ್ಕೂಲನ್ನು ಸ್ಥಾಪಿಸಿದರೆ ಎಷ್ಟೋ ಅನುಕೂಲವಾಗುತ್ತದೆ. ಶ್ರೀಮತಿ ಸುಬ್ಬಮ್ಮನವರು ಹೇಳಿದಂತೆ ಆ ಜಿಲ್ಲೆಯವರೇ ಒಬ್ಬರು ಮಂತ್ರಿಗಳಾಗಿ ಬಂದಿದ್ದರೆ ಚೆನ್ನಾಗಿತ್ತು. ಆದರೂ ಮಲೆನಾಡಿನವರೊಬ್ಬರು ಮಂತ್ರಿಗಳಿದ್ದಾರೆ. ತಮಗೆ ಸ್ವಲ್ಪ ದೂರವೆಂದು ಅವರು ಅಲಕ್ಷ್ಯಮಾಡಬಾರದೆಂದು ವಿನಯದಿಂದ ಪ್ರಾರ್ಥಿಸುತ್ತೇನೆ. ಅಲ್ಲಿ ಖಂಡಿತವಾಗಿ ಫಾರೆಸ್ಟ್ ಇಂಡಸ್ಟ್ರಿಯಲ್ ಸ್ಕೂಲೊಂದನ್ನು ಸ್ಥಾಪನೆ ಮಾಡಬೇಕು.

ಮತ್ತೊಂದು ವಿಷಯ. ಮಲೆನಾಡಿನಲ್ಲಿ ಹಿಂದಿನಿಂದಲೂ ಮನೆಗಳಿಗೆ ಕರಿಯ ಹೆಂಚುಗಳನ್ನು ಹಾಕುತ್ತಿದ್ದು ಈಗ ಕೆಂಪು ಹೆಂಚುಗಳನ್ನು ಹಾಕುವ ಪದ್ಧತಿ ಬಂದಿದೆ. ಆದುದರಿಂದ ಅಲ್ಲಿ ಹೆಂಚಿನ ಕಾರ್ಖಾನೆಯನ್ನು ಪ್ರಾರಂಭಮಾಡಲು ಅವಕಾಶ ಮಾಡಬೇಕೆಂದು ಸರ್ಕಾರಕ್ಕೆ ಮನವಿಮಾಡಿಕೊಂಡಿದ್ದಾರೆ. ಆದರೂ ಇಂಥ ಒಂದು ಸಹಾಯವನ್ನು ಮಾಡುತ್ತೇವೆಂದು ಸರ್ಕಾರದವರು ಹೇಳಿ ಈವರೆಗೂ ಕೊಟ್ಟಿಲ್ಲ. ಯಾರಾರಾದರೂ ಖಾಸಗಿ ಜನ ತಾವು ಹೆಂಚಿನ ಕಾರ್ಖಾನೆಯನ್ನು ಪ್ರಾರಂಭಮಾಡುತ್ತೇವೆಂದು ಕೇಳಿದರೆ ಸಹಾಯ ಕೊಡಿ; ಇಲ್ಲದಿದ್ದರೆ, ಸರ್ಕಾರದವರೇ ಒಂದು ಕಾರ್ಖಾನೆಯನ್ನು ತೆರೆದರೆ ಅನುಕೂಲವಾಗುತ್ತದೆ. ಈಗ ಅಲ್ಲಿ ಆರ್. ಡಿ. ಯಿಂದ ಮಂಜೂರಾದ ಅನೇಕರಿಗೆ ಹೆಂಚು ಸಿಕ್ಕದೆ ಮನೆಗಳನ್ನು ಅರ್ಧಕ್ಕೇ ನಿಲ್ಲಿಸಿದ್ದಾರೆ.

ನಿನ್ನೆಯ ದಿನ ನಾನು ತರೀಕೆರೆಗೆ ಹೋಗಿದ್ದೆ. ದೇವರ ದಯೆಯಿಂದ ಅಲ್ಲಿ ಮಳೆ ಬಂದಿದೆ. ನನಗೆ ನೂರಾರು ಎಕರೆ ಜಮೀನಿರುವುದರಿಂದ ಅಲ್ಲಿಗೆ ಹೋಗಿ ನೋಡಿಕೊಂಡು ಬಂದೆ. ತರೀಕೆರೆ ಸುತ್ತಮುತ್ತ 9 ಮೈಲಿ ಮಾತ್ರ ಮಳೆ ಬಂದಿದೆ. ಸರ್ಕಾರದವರು ಆದಷ್ಟು ಕಡೆ ಮಲೆನಾಡಿನಲ್ಲಿ ಸಣ್ಣ ಸಣ್ಣ ಕಟ್ಟೆ ಕೆರೆಗಳನ್ನು ಮಾಡಿಸಿದರೆ ಅಲ್ಲಿ ನೀರು ನಿಂತು ಜನರಿಗೆ ಅನುಕೂಲವಾಗುತ್ತದೆ. ಈ ಕಾರಣದಿಂದ ದೇಶದಲ್ಲಿ ಕ್ಷಾಮ ಬರುವುದಿಲ್ಲ. ನಾವು ಮಾಡಿದ್ದು ನಾವು ತಿನ್ನದೇ ಇದ್ದರೂ ನಮ್ಮ ಮಕ್ಕಳಿಗೆ ಅನುಕೂಲವಾಗುತ್ತದೆಂದು ಹೇಳುವ ಹಾಗೆ, ಈಗ ಕಟ್ಟಿಸಲು ಪ್ರಾರಂಭಿಸಿದರೆ ಮುಂದಾದರೂ ಅನುಕೂಲವಾಗುತ್ತದೆ. ಮಲೆನಾಡು ಅಭಿವೃದ್ಧಿಯ ಕಡೆ ಹೆಚ್ಚು ಗಮನ ಕೊಡಬೇಕು. ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟಿದ್ದ ಸಮಿತಿಯವರೂ ಇದೇ ಅಭಿಪ್ರಾಯ ಕೊಟ್ಟಿದ್ದಾರೆ. ನಮ್ಮ ಸರ್ಕಾರದ ಅಭಿಪ್ರಾಯವೂ ಇದೇ ಆಗಿದೆ. ಮುಖ್ಯಮಂತ್ರಿಗಳ ಭಾಷಣದಲ್ಲಿ ಕೂಡ ಉದಾರವಾಗಿ ಹೇಳಿದ್ದಾರೆ. ಮಲೆನಾಡು ಮುನಿಸಿಪಾಲಿಟಿಗಳಿಗೂ ಕೂಡ ಹೆಚ್ಚು ಗ್ರಾಂಟು ಮತ್ತು ಸಾಲಗಳನ್ನು ಕೊಡುವುದರ ಮೂಲಕ ಅವನ್ನು ಅಭಿವೃದ್ಧಿಮಾಡಬೇಕು.

ಆದರೆ ಮಲೆನಾಡಿನ ರಸ್ತೆಗಳ ವಿಚಾರ ಹೇಳಬೇಕೆಂದರೆ ತೀರ ವ್ಯಸನವಾಗುತ್ತದೆ. ಮಲೆನಾಡಿನಲ್ಲಿ ಇಲ್ಲಿಯವರೆಗಾದರೂ ಒಂದು ಸಿಮೆಂಟ್ ರೋಡನ್ನು ನಾವು ನೋಡಲಿಲ್ಲ ಎಂದು ಹೇಳಿದರೆ ಇದೊಂದು ಆಶ್ಚರ್ಯದ ಸಂಗತಿಯೇನೂ ಆಗಲಾರದು. ಎಷ್ಟೋ

ರಸ್ತೆಗಳಲ್ಲಿ ರಾತ್ರಿವೇಳೆ ಸಂಚಾರ ಮಾಡಬೇಕಾಗಿ ಬಂದಾಗ ಗಾಡಿಗಳನ್ನು ಅಲ್ಲೇ ಬಿಟ್ಟು ಬಿಟ್ಟು ಕೇವಲ ಎತ್ತುಗಳನ್ನು ಮಾತ್ರ ಮನೆಗೆ ಹೊಡೆದುಕೊಂಡು ಬಂದಿರತಕ್ಕ ನಿದರ್ಶನಗಳನ್ನು ನಾನೇ ಎಷ್ಟೋ ಕಣ್ಣಾರೆ ನೋಡಿದ್ದೇನೆ ಮತ್ತು ನಾನೂ ಸಹ ಆ ರೀತಿ ಮಾಡಿದ್ದೇನೆ. ಆದರೆ ಈಗೇನೋ ಆ ಮಲೆನಾಡಿನಲ್ಲಿ ಅಲ್ಲಲ್ಲೇ ಕೆಲವು ಸಣ್ಣ ಸಣ್ಣ ರಸ್ತೆಗಳಿವೆ. ಅವುಗಳಿಗೆಲ್ಲಾ ಕಲ್ಲು ಜಲ್ಲಿ ಹಾಕಿಸಬೇಕಾದದ್ದು ಅತ್ಯಗತ್ಯ. ಹೀಗೆ ಮಾಡದೆ ಇರುವುದರಿಂದ ಮಳೆಗಾಲದಲ್ಲಿ ರಸ್ತೆಗಳೆಲ್ಲಾ ಕೆಸರಿನಿಂದ ತುಂಬಿದ್ದು ಗಾಡಿಗಳು ಸುತರಾಂ ಓಡಾಡಲು ಸಾಧ್ಯವಿರುವುದಿಲ್ಲ. ಈ ಕಾರಣದಿಂದ ರಸ್ತೆಗಳನ್ನು ಆದಷ್ಟು ಬೇಗ ಅಲ್ಲಿ ಮಾಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಇಷ್ಟೇ ಅಲ್ಲದೆ ಮಲೆನಾಡಿನಲ್ಲಿರತಕ್ಕ ಮುನಿಸಿಪಾಲಿಟಿಗಳಿಗೆ ತಾವು ಹೆಚ್ಚು ಹೆಚ್ಚಾಗಿ ವರ್ಷೇ ವರ್ಷೇ ಗ್ರಾಂಟುಗಳನ್ನೊದಗಿಸಿ, ವರ್ಷಕ್ಕೆ ಇಷ್ಟಿಷ್ಟು ಎಂದು ಸಿಮೆಂಟು ರಸ್ತೆಯನ್ನು ಸಹ ಮಾಡಿಸಿದರೆ ತುಂಬ ಅನುಕೂಲವಾಗುತ್ತದೆಂದು ಅರಿಕೆಮಾಡಿಕೊಳ್ಳುತ್ತೇನೆ.

ಇದೇ ರೀತಿಯಾಗಿ ಮಲೆನಾಡಿಗೆ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನು ಬೆಳಕಿನ ಬಗ್ಗೆಯೂ ಮತ್ತು ವ್ಯವಸಾಯದ ಬಗ್ಗೆಯೂ ಒದಗಿಸಿಕೊಡಬೇಕು. ಈಗ ಮಲೆನಾಡಿನಲ್ಲಿ ವಿಶೇಷವಾಗಿ ದಟ್ಟವಾಗಿ ಬೆಳೆದ ಮರಗಳಿರುವುದರಿಂದ ಯಾವಾಗಲೂ ರಸ್ತೆಗಳಲ್ಲಿ ಕಪ್ಪಾಗಿರುತ್ತದೆ. ಪ್ರಯಾಣ ಸೌಕರ್ಯಕ್ಕೆ ತುಂಬ ಅಡಚಣೆಯಾಗಿರುತ್ತದೆ. ಆದಕಾರಣ ತಾವು ಆದಷ್ಟು ಬೇಗ ಪ್ರತಿಯೊಂದು ಮಲೆನಾಡಿನ ಗ್ರಾಮಕ್ಕೂ ಈ ಬೆಳಕನ್ನೂ ಮತ್ತು ಬೇಸಗೆಯಲ್ಲಿ ಹೆಚ್ಚು ಆಹಾರ ಬೆಳೆಯತಕ್ಕ ಸಂಬಂಧವಾಗಿ ಈ ಪವರನ್ನೂ ಒದಗಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಾನು ಸೂಚಿಸಿರತಕ್ಕ ಅಂಶಗಳನ್ನೆಲ್ಲಾ ಮಾನ್ಯ ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು, ಮುಂದಿನ ಸಾಲಿನಲ್ಲಿ ಈ ಸಭೆಯ ಮುಂದೆ ಮಂಡಿಸತಕ್ಕ ಬಡ್ಜೆಟ್ಟಿನಲ್ಲಾದರೂ, ಈ ಬಾಬುಗಳಿಗೆ ಹೆಚ್ಚು ಹಣವನ್ನೊದಗಿಸಿ, ತನ್ಮೂಲಕ ಮಲೆನಾಡಿನ ಅಭಿವೃದ್ಧಿಗೆ ಅವಕಾಶ ಉಂಟುಮಾಡಿಕೊಡಬೇಕೆಂದು ತಮ್ಮನ್ನು ಬೇಡಿಕೊಂಡು ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri H. SIDDAVEERAPPA (Minister for Home).—Mr. Speaker, Sir, I have heard with rapt attention the several speeches made by the Hon'ble Members with regard to the subjects or the departments that come under my portfolio. I have noted some of the valuable suggestions they have made and also the criticisms that have been offered. In particular I am indeed thankful to the Hon'ble Member Sri Pattabhiraman for having tendered his valuable suggestions. While sympathising with the Government, he has given all the encouragement that we need. His words of wisdom will certainly be valued and if only the other Hon'ble Members on the opposite side had bestowed at least half the attention he has given to our problems and given the suggestions in the manner in which Sri Pattabhiraman had given them, I would have extended the same amount of thanks and gratitude to those Members.

Janab J. MOHAMED IMAM.—We do not expect anything in return.

Sri H. SIDDAVEERAPPA.—However, while thanking the Hon'ble Members who have tendered their valuable suggestions to me, I would like first of all to refer to the most important problem, the problem of problems that faces us, *viz.*, the food problem. I do not want to dwell on it at great length, because the Leader of the House has been good enough to say that a separate day will be allotted for threshing out this problem. But suffice it for me to say that almost all the Hon'ble Memb rs of this House have given their unstinted praise for the new food policy of the Government which has brought about a sort of millenium, if I may be pardoned to say, a new orientation as it were. It has infused confidence in the minds of the rural population and I have been receiving a chorus of prai e for the new policy that has been enunciated by the Government. Of course, a solitary and lonely voice was heard on the other side. The Member for Chitaldrug even went to the extent of saying that on that account we do not deserve to be on the treasury benches. I will refer to it in greater detail when I take the food debate when I have an answer to it.

I now refer to the Department of Police. Hon'ble Member Sri Huche Gowda said that, in the State of Travancore-Cochin with a more or less the same population as we have in Mysore, the amount that has been spent on the Police Department is really less; but the Hon'ble Member has forgotten at the same time that the total area of the Travancore-Cochin State is really less when compared with the total area of the Mysore State although, on account of the density of population in that area, the population more or less equals ours. I would like

(SRI H. SIDDAVEERAPPA.)

to bring it to the notice of that Hon'ble Member that the area in the Mysore State is nearly thrice as much as that of Travancore-Cochin State and the area that I have to cover in the maintenance of law and order is really more. What is more, may I bring to your kind notice that the percentage of the expenditure on the Police in Mysore State when compar: d with the revenue of the State is the lowest in India when compared with the corresponding figures of other States? In U. P. the percentage was 13'80, in Bombay 13'69, in Madras 12'4; in Bombay this year it is 14'98; Madras this year it is 11'59, whereas in Mysore it is hardly 6'4 per cent and in Madhya Pradesh it is 13 per cent and in Hyderabad 13 per cent.

Sri L. SIDDAPPA.—Because we are such good subjects in Mysore.

Sri H. SIDDAVEERAPPA.—And I may say that no doubt here and there the Department requires pruning; it requires some unfettered action- -I cannot deny that. But let us not forget that the Department has been working under great strain and str ss. If my friend Janab Mohamed Imam remembers that particularly at a time, about two years ago, when he had to pass through those hectic days, rather sleepless nights, how this Department had tackled that problem and given safety and peace and sleepful nights to my Hon'ble Friend......

Janab J. MOHAMED IMAM.—I have always slept peacefully.

Sri H. SIDDAVEERAPPA.—I hope he will agree with me, the Department has really done well. Also, with regard to the extra work this Department has to undertake in connection with the prohibition and several other kinds of work that have been tacked on to them, I may say that the Department has really done well. The figures relating of prohibition cases that have been tackled by this Department in the year 1951-52, show that we detected and prosecuted 11,291 prohibition cases and recovered a sum of Rs. 1,53,420 by way of fines in the Court. Therefore my submission is this. While replying to the criticisms relating to the Police Department—fortunately there were very few criticisms, except Sri Hutche Gowda no other Member referred to it—I may say that the Police have done magnificently well and they hope to give a better account of themselves in the years to come.

Sri Mulka GOVINDA REDDY.—Sri Gopala Gowda also referred to the Police Department.

Sri H. SIDDAVEERAPPA.—Of course he made certain allegations. If the allegations are proved, then it is a different matter. My Hon'ble friend knows as a student of Law that mere allegations, however strong they may be, can never be taken for facts. The allegations of Sri Gopal Gowda are there and I do not take them for proved facts.

Next comes the Department of Agriculture. Some Hon'ble Members made some emphatic criticisms about the Department of Agriculture forgetting that for our very existence this Department is very important. Sir, here and there, in our methods and manner of working the Department, there might be some lacuna. But the remedy suggested must be constructive and should be helpful to tone up the administration of the Department. Mere wholesale condemnation and criticism of the Department will not be of any avail. My friend Janab Imam and others have strongly criticised the Grow More Food Scheme. At this stage I would be failing in my duty if I do not thank my friend Sri T. Mariappa, who, in his own way, with facts and figures, has given such cogent reasoning in order to belie the several criticisms levelled against this Department. I may say that even in the Grow More Food Scheme, if I may give figures, the percentage of establishment charges of that Department worked out only up to 1 % when we take the total amount that we have spent in the development of the scheme. The Government of India came to our rescue on an All India basis in the year 1949. It should be remembered that this Government did not fritter away all the energies and resources on sundry things. They concentrated only on the schemes of

permanent nature, particularly, the major and minor irrigation schemes as well as desilting of tanks, clearing of feeder channels etc. The Government of India gave us Rs. 3,18,34,261 by way of grants and loans during these three years, *ie.*, 1949-50, 1950-51 and 1951-52. I may also say—of course my friends may not agree with me—it is estimated that in the year 1949-50 we grew 43,400 tons of extra food-grains, in 1950-51, 69,828 tons and in the year 1951-52, 28,164 tons. I may say that this Grow More Food Scheme was approved, particularly the scheme in Mysore was spoken of in high praise, by the National Planning Commission and I may be pardoned if I may say with pardonable pride that the schemes that this House enunciated in Mysore during these 4½ years have been the beacon light and guide in the formulation of several policies on an All-India basis. I will refer only to this aspect of it. In the matter of Grow More Food Scheme we have proceeded further. To-day we have read in the papers that this scheme is going to be intensified in a different line. What is heartening, and it is a matter which appeals to me most, is that for the first time the Krishnamachari Report has laid emphasis that the floor prices of any grain, that is to say, grown by an Agriculturist, must be assured. Only then there will be sufficient incentive. Any amount of propaganda is not sufficient. It will not make the agriculturist to grow more. Give him the necessary price and work it out on an economic basis, if you want him to produce more food. That fact has been recognised for the first time. I am sure in the shape of things to come, the agriculturist, not only in Mysore but all over India, will have a millenium for which he has worked all these years.

I now come to the Veterinary Department, which of course was subjected to some criticism, particularly at the hands of my friend Sri Lakkappa Gowda. Here and there, particularly in the Malnad, the cattle requires to be improved in its breed. That is what he said. I may say that in Malnad we have very nearly 25% of the bovine population of the State that is, nearly 10,80,699 and it is only the buffalo and the *Malnad Giddas* that thrive there. The Government are keenly aware that in Malnad cattle require more attention than people because people are really civilized and they can take care of themselves. We are making certain experiments and particularly we have begun three experiments, including the one in Sulekere, in Shimoga District. We have also started an experimental cattle breeding Station and we want to have this upgrading of this *Malnad Giddas* and try to find out how far they breed there in that climate. We are thinking of breeding Malnad buffaloes with our Murray buffaloes. We have got a station at Ajampur. The experiment is yielding good results. Sindhi and Murray buffalloes are scattered there in that area. In Malnad, particularly the cattle are not so well looked after because it is only the grass that they can find in the hillocks that is the staple food for them. They are not given any concentrated fooder containing particularly the chemicals that are required to develop the cattle. I may assure Sri Lakkappa Gowda that I will see that these improved grades are really put into vogue and raised in greater number in the Malnad areas. Then my friend Sri Nagappa Setty referred to cattle insurance. I may tell him that it is a very big problem and that has to be tackled by the Government of India. I am sure that they are doing it. Recently they have already started some pilot schemes and they are working them out in seven States in India, and we want to be benefitted by those schemes and try to find out how far they fit in with our economic conditions, particularly whether we in Mysore would come into the picture on account of our present financial conditions. We want to be benefitted by the experiments of others. We do not want to experiment ourselves.

Sri Mulka GOVINDA REDDY.—What about credit Insurance ?

Sri H. SIDDAVEERAPPA.—It stands more or less on the same footing. Government of India are at it. I may

(SRI H. SIDDAVEERAPPA)

tell the Hon'ble Member that Government of India and the National Planning Commission have thought of it and we will certainly be benefitted by it. We cannot build it overnight. We cannot build a nation by magic. It will take sometime.

2-30 P.M.

I now refer to Co-operation. I am glad that my friend Sri Srinivasa Iyengar is here and I am sorry that he he was not present when Sri Mariappa referred to his speech in greater datail. Well, I am really unable to understand why friends who are expected to know these things better have levelled criticisms against us. May I think it is advisedly done, because my friend Sri Srinivasa Iyengar is quite well aware that I was also present in the Co-operative Seminar as well as my mighty friend Sri Bhemappa Naik (Laughter). Most of the recommendations made by that Seminar have been put into practice. May I ask my friend to refresh his memory whether it is not due to the recommendation of the Seminar that the Provincial Co-operative House Building Society in Mysore has been started?

Sri S. SRINIVASA IYENGAR.—It is left at that.

Sri H. SIDDAVEERAPPA.—Give us a little credit. I could quote another instance but the time at my disposal is very short. We in Mysore are really proud that we have got several retired gentlemen who have been rendering yeomen service in the development of the Co-operative Department. May I say that in the Provincial House Building Co-operative Society Sri A. R. Nagesvara Iyer, retired Judge of the High Court of Mysore, and several others have been doing their best to solve the problem of scarcity of housing in Mysore State? Knowing all that, I am really sorry that my friend Srinviasa Iyengar said nothing has been done.

Sri S. SRINIVASA IYENGAR.—With your permission, Sir, I want to give some information.

Sri H SIDDAVEERAPPA.—I am not yielding to the Hon'ble Member.

Janab J. MOHAMED IMAM.—I raise to a point of order.

Mr. SPEAKER.—If it is for the purpose of giving information to the Hon'ble Minister he need not do so. If it is for personal explanation I hope the Hon'ble Minister will yield.

Sri S. SRINIVASA IYENGAR.—It is a personal explanation that I wanted to give. The Provincial House Building Corporation was started at the instance of the Government on the recommendation of the Seminar. My complaint, as the Secretary of the Provincial Co-operative Institute, is that the necessary funds or assistance of Government is not forthcoming. The object in mentioning that is just to simply see that once the Provincial House Building Co-operative Institute was established it did deserve all the encouragement that the Government ought to have given it. That has not been done in the present Budget. That is all what I mentioned.

Mr. SPEAKER.—The Hon'ble Minister is aware of it and it is on that basis that he is replying.

Sri H. SIDDAVEERAPPA.—I extremely disagree with what my friend remarked. Government have given nearly five lakhs by way of loan and I may say that an Assistant Registrar of Co-operative Societies has been kept at the disposal of the Provincial House Building Co-operative Society. I may tell my friend that most of his criticisms are unfounded, unwarranted and without the support of any fact and without any basis.

Then I refer to Sericulture which again my friend Srinivasa Iyengar referred to. Sri Mariappa laid great emphasis on the point and nobody is more conscious than I about the present plight of the industry and how it has been causing a good deal of anxiety, not only to the Government but to several families that depend upon that industry. I may here disclose that during my recent visit to Delhi I had a talk with the concerned Deputy Minister as the Minister in charge was not in headquarters We have come to certain tentative conclusions and I am sure the Government of India will

certainly come to our rescue in tiding over the crisis and help us in a generous measure to see that this industry is saved from its present plight.

Then with regard to Road Transport: During the question hour to-day, what I had to say about the several criticisms that have been levelled have already been made clear by me. Suffice it for me to say that in the speech of the Hon'ble Finance Minister there is a statement to the effect that the policy of hundred per cent nationalising of certain routes is engaging the attention of the Government. Government know that if the policy of nationalisation has to succeed one of the most important factors that contribute towards its success is cent per cent nationalization of the lines in which Government buses ply. I am also conscious of the several points where improvements are needed. Government are at it and I may assure the Hon'ble Members that even in the matter of cutting down the working expenses and several other matters that go to economize our expenditure, Government will look to it and see that all possible efforts are made to make the scheme a success.

I am done and I thank you, Sir, for having given me an opportunity to express my views with regard to the several departments I had to deal with

(*Sri M. Madiah in the Chair*).

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ ಅನುಸೂಚಿತ ಜಾತಿಗಳು).— ಸ್ವಾಮಿ, ಈ ಆಯವ್ಯಯಪಟ್ಟಿಯ ಮೇಲೆ ನಾನು ಒಂದೆರಡು ಅಂಶಗಳನ್ನು ಮಾತ್ರ ಈ ಸಭೆಯ ಮುಂದೆ ಇಡಬೇಕೆಂದು ಬಯಸುತ್ತೇನೆ. ನಿಜವಾಗಿಯೂ ನಮ್ಮ ಸ್ನೇಹಿತರಾದ ಶ್ರೀಮಾನ್ ಮುಲ್ಕ ಗೋವಿಂದರೆಡ್ಡಿಯವರು ಹೇಳಿದ ಹಾಗೆ ಈ ವರದಿಯು ಬಡವರಿಗೆ ಆಶಾದಾಯಕವಾಗಿಲ್ಲ ಎಂಬ ಅಂಶವನ್ನು ನಾನು ಒತ್ತಿ ಹೇಳುತ್ತಾ ಇದ್ದೇನೆ. ಏಕೆಂದರೆ, ಈಗ ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆ. ಪ್ರಜಾಪ್ರಭುತ್ವದ ತತ್ವವೇನೆಂದರೆ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಕೂಡ ಎಲಿಮೆಂಟರಿ ರೈಟ್ಸ್ ಒದಗಿಸಬೇಕು. ಆ ರೀತಿ ಒದಗಿಸುವುದು ಪ್ರಜಾಪ್ರಭುತ್ವದ ಮುಖ್ಯ ತತ್ವ ಎಂದು ತಿಳಿದುಕೊಂಡಿದ್ದೇನೆ. ಹಿಂದೆ ಇದ್ದ ನಿರಂಕುಶ ಪ್ರಭುತ್ವಕ್ಕೂ ಈಗಿನ ಪ್ರಜಾಪ್ರಭುತ್ವಕ್ಕೂ ವ್ಯತ್ಯಾಸವಿದೆ. ಈಗ ಸಾಮಾನ್ಯ ಮನುಷ್ಯನ ಹಿತಸಾಧನೆ ಎಲಿಮೆಂಟರಿ ರೈಟ್ಸ್ ಒದಗಿಸಿಕೊಡುವುದರಿಂದಾಗುತ್ತದೆ. ಪ್ರಜಾಪ್ರಭುತ್ವದ ತತ್ವ ಎಂದರೆ ಒಬ್ಬ ಸಾಮಾನ್ಯ ಮನುಷ್ಯನ ಜೀವನಕ್ಕೆ ಸಾಕಾದಷ್ಟು ವ್ಯವಸಾಯಕ್ಕೆ ಜಮೀನು, ಸುಖವಾಗಿ ವಾಸಮಾಡುವುದಕ್ಕೆ ಒಂದು ಮನೆ ಮತ್ತು ಅವನು ಲೋಕ ವ್ಯವಹಾರವನ್ನು ತಿಳಿದುಕೊಳ್ಳುವುದಕ್ಕೆ ಸಾಕಷ್ಟು ವಿದ್ಯಾಭ್ಯಾಸ, ಕುಡಿಯುವ ನೀರಿನ ಸೌಕರ್ಯ, ಇವು ಎಲಿಮೆಂಟರಿ ರೈಟ್ಸ್. ಇವನ್ನು ಒದಗಿಸಿಕೊಡುವುದು ಪ್ರಜಾಪ್ರಭುತ್ವದ ಮುಖ್ಯವಾದ ತತ್ವ. ಈಗ ನೋಡಿದ್ದರಲ್ಲಿ ಇವನ್ನು ಮುಂದೆ ಒದಗಿಸಲಾಗುತ್ತದೆ ಎಂಬ ಆಶೆ ಇದೆಯೆ? ಎಂದರೆ: ಇಲ್ಲ ಎಂದು ಘಂಟಾಘೋಷವಾಗಿ ಹೇಳುತ್ತಾ ಇದ್ದೇನೆ. ಏಕೆಂದರೆ, ನಮ್ಮ ನಾಯಕರು ಹೇಳಿದ ಹಾಗೆ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿ ಮುಖ್ಯವಾದ ತತ್ತ್ವ ಸಾಮಾನ್ಯ ಮನುಷ್ಯನ ಹಿತಸಾಧನೆಯನ್ನು ಮರೆತಿದ್ದೀರಿ ಎಂಬ ಅಂಶವನ್ನು ಅಂಕಿ ಅಂಶಗಳಿಂದ ತಿಳಿಸುತ್ತೇನೆ.

ನಾನೀಗ ತಮ್ಮನ್ನು ಯಾವ ವಿಧದಲ್ಲೂ ಟೀಕೆ ಮಾಡುತ್ತಿದ್ದೇನೆಂದು ತಿಳಿಯಬಾರದು. ಮಾನ್ಯ ಸದಸ್ಯರು ರಚನಾತ್ಮಕವಾಗಿ ಟೀಕೆ ಮಾಡಲಿ, ಸಲಹೆ ಕೊಡಲಿ ಎಂದು ಹೇಳಿದಂತೆಯೇ, ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಮುಖ್ಯವಾಗಿ ನಮ್ಮ ದೇಶದಲ್ಲಿನ ಗ್ರೋ-ಮೋರ್-ಫುಡ್ ಯೋಜನೆಯ ವಿಚಾರದಲ್ಲಿ ನಮ್ಮ ಮಾಜಿ ಮಂತ್ರಿಗಳಾದ ಮರಿಯಪ್ಪನವರು ಕೆಲವು ಅಂಶಗಳನ್ನು ಹೇಳಿದರು. ಅವರೀಗ ಸಭೆಯಲ್ಲಿಲ್ಲ, ಎದುರಿನಲ್ಲಿದ್ದಿದ್ದರೆ ಕೆಲವು ವಿಚಾರಗಳನ್ನು ಹೇಳುತ್ತಿದ್ದೆ. ಈಗ ಅವರಿಲ್ಲದಿರುವುದರಿಂದ ನಾನು ಹೆಚ್ಚಿಗೆ ಹೇಳಲು ಇಷ್ಟಪಡುವುದಿಲ್ಲ...............

[ಸದಸ್ಯರುಗಳು 'ಹೇಳಿ, ಹೇಳಿ, ಪರವಾಗಿಲ್ಲ' ಎಂದು ಧ್ವನಿಗೈದರು].

1942ನೆಯ ಇಸವಿಯಿಂದಲೂ ನಮ್ಮ ಸರ್ಕಾರದವರೂ ಈ ಗ್ರೋ-ಮೋರ್-ಫುಡ್ ಯೋಜನೆಯನ್ನು ನಡೆಸುತ್ತಿದ್ದಾರೆ. ಅವರ ಉದ್ದೇಶವೇನೋ ದೊಡ್ಡದಾಗಿದೆ. ಆದರೂ ಬೆಳೆ ಮಾತ್ರ ಹೆಚ್ಚಿಗೆ ಆಗಿಲ್ಲ. ಇದಕ್ಕೆ ಮುಖ್ಯ ಕಾರಣ—ಯಾರಿಗೆ ನಿಜವಾಗಿ ಕಷ್ಟಪಟ್ಟು ದುಡಿಯುವುದಕ್ಕೆ ಶಕ್ತಿಯಿದೆಯೋ ಅಂಥವರಿಗೆ ಜಮೀನು ಕೊಡಬೇಕೇ ವಿನಾ ಮತ್ತು ವ್ಯವಸಾಯ ಮಾಡುವ ರೈತನಿಗೆ ಜಮೀನು ಕೊಡಬೇಕೇ ವಿನಾ ಬೇರೆಯವರಿಗೆ ಕೊಟ್ಟರೇನು ಪ್ರಯೋಜನ? ಅದರಲ್ಲೂ ಸಾಕಷ್ಟು ಜಮೀನಿಲ್ಲದ ನಿಮ್ನ ತರಗತಿಯವರಿಗೆ ಜಮೀನು ಕೊಡಬೇಕೇ ಬೇಡವೇ ಎಂಬುದನ್ನೇ ಅವರು ಯೋಚನೆ ಮಾಡಿರಲಿಲ್ಲವೆಂದು ಕಾಣುತ್ತದೆ. ಈ ವಿಚಾರವನ್ನು ನಾನು ಸರ್ಕಾರದವರ ಗಮನಕ್ಕೆ ತಂದ ಮೇಲೆ ಆದಿಕರ್ಣಾಟಕರಿಗೆ ಜಮೀನು ಕೊಡುವ ಬಗ್ಗೆ ಒಂದು ಆರ್ಡರ್ ಸಾದರಾಯಿತು. ಇಷ್ಟಾದರೂ ಈಗಲೂ ಅಂಕಿ ಅಂಶಗಳನ್ನು ನೋಡುವುದಾದರೆ, 50 ಎಕರೆ, 100 ಎಕರೆ ಈ ರೀತಿ ಕೊಟ್ಟಿರುವುದು ಹೆಚ್ಚಿಗೆ ಜಮೀನಿರುವವರಿಗೇ ವಿನಾ ಶೇಕಡ 90 ಪಾಲು ಸಂದರ್ಭಗಳಲ್ಲಿ ಬೇಸಾಯ ಮಾಡುವ ಜಮೀನಿಲ್ಲದ ಆದಿಕರ್ಣಾಟಕರಿಗೆ ಜಮೀನು ಕೊಟ್ಟಿಲ್ಲವೆಂದು ನಾನು ಹೇಳಬಲ್ಲೆ. 100—50 ಎಕರೆ ಜಮೀನಿರುವವರೇ ಮತ್ತೆ ಹೆಚ್ಚಿಗೆ ಜಮೀನುಗಳನ್ನು ತೆಗೆದುಕೊಂಡು ಅವುಗಳಲ್ಲಿನ ಮರಗಳನ್ನು ಕಡಿದು ಇದ್ದಲು ಸೌದೆ ಮಾಡಿ ಮಾರಿಕೊಳ್ಳುತ್ತಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರಬೇಕೆಂಬುದೇ ನನ್ನ ಇಷ್ಟ. ಈ ಜಮೀನುಗಳ ಪೈಕಿ ಎಷ್ಟು ಜಮೀನು ಆಬಾದಾಗಿದೆ, ಎಷ್ಟು ಆಬಾದಾಗಿಲ್ಲ ಎಂದು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೇಕೋ ಉತ್ತರ ಬಂದಿಲ್ಲ. ಆದ್ದರಿಂದ ನಾನು ಒತ್ತಾಯಪಡಿಸುವುದೇನೆಂದರೆ, ಜಮೀನಿಲ್ಲದಿರುವವರಿಗೆ ಮತ್ತು ಯಾರು ಕಷ್ಟಪಟ್ಟು ಕೆಲಸ ಮಾಡಿ ದೇಶದ ಉತ್ಪನ್ನವನ್ನು ಜಾಸ್ತಿ ಮಾಡಲು ಸಹಾಯಕರಾಗ

(ಶ್ರೀ ಎಂ. ಚಿಕ್ಕಲಿಂಗಯ್ಯನವರು.)

ಬಿಲ್ಲರೋ ಅಂಥವರಿಗೆ ಜಮೀನು ಕೊಡಬೇಕೇ ವಿನಾ ದಯಾದಾಕ್ಷಿಣ್ಯಗಳಿಗೊಳಗಾಗಿ ಶಿಫಾರಸ್ಸಿನ ಮೇಲೆಯೂ ಪೊಲಿಟಿಕಲ್ sufferers ಎಂತಲೂ ಕೊಡುತ್ತಾ ಹೋದರೆ ನಮ್ಮ ಆಹಾರದ ಸಮಸ್ಯೆ ಬಗೆ ಹರಿಯುವುದಿಲ್ಲವೆಂಬ ಅಂಶವನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಅದರಲ್ಲೂ ಮುಖ್ಯವಾಗಿ ನಮ್ಮ ಆದಿಕರ್ಣಾಟಕರಿಗೆ ಜಮೀನು ಕೊಡುವುದರಲ್ಲಿ ಅವರ ಆರ್ಥಿಕ ಸ್ಥಿತಿಯ ಕಡೆಗೂ ಅವರ ಸಾಮಾಜಿಕ ಸ್ಥಿತಿಗತಿಗಳ ಕಡೆಗೂ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri K. HANUMANTHAIYA (Chief Minister).—You said political sufferers should not be taken into consideration. Depressed Classes are social sufferers and in the same way political sufferers also deserve some consideration.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—Political sufferers ಎಂಬ ದೃಷ್ಟಿಯಿಂದ ಕೊಡಬೇಡವೆಂದರೂ, ಅವರೂ ನಿಜವಾಗಿ ವ್ಯವಸಾಯ ಮಾಡುವವರಾದರೇಕೆ ಅವರಿಗೆ ಕೊಡಕೂಡದು?

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ನಾನೇನೂ Political sufferersಗಳಿಗೆ ಕೊಡಕೂಡದೆಂದು ಹೇಳಲಿಲ್ಲ. ಅವರು ವ್ಯವಸಾಯ ಮಾಡುವುದಾದರೆ ಕೊಡಬಹುದು.

ಆದ್ದರಿಂದ, ನಿಮ್ಮ ತರಗತಿಯವರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂಬ ದೃಢಕಾಂಕ್ಷೆ ತಮಗಿರುವುದರಿಂದ ಈ ವಿಚಾರವನ್ನು ಬಹಳ ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಅಮೃತಮಹಲ್ ಕಾವಲುಗಳು, ಈಚಲು ವನಗಳು ಮತ್ತು ಅರಣ್ಯ ಪ್ರದೇಶಗಳಲ್ಲಿ ಬಿಡಿಸಿಕೊಡಲಾದ ಜಮೀನುಗಳಲ್ಲಿ ಶೇಕಡ ಇಷ್ಟು ಭಾಗವನ್ನು ನಿಮ್ಮ ತರಗತಿಯವರಿಗೆ ಮೀಸಲಾಗಿಟ್ಟು......

Sri K. HANUMANTHAIYA.—You will kindly remember that day before yesterday, the Hon'ble Revenue Minister said clearly that the Government's policy is, as far as possible, to give lands to landless people. He made that point very clear.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ನಮ್ಮ ನಿಮ್ಮ ತರಗತಿಯವರು ಎಲ್ಲೆಲ್ಲಿ ಹೋಗಿ ಒಂದು ವ್ಯವಸಾಯದ ಕಾಲೊನಿಯನ್ನು ಮಾಡಿಕೊಂಡು ಹೊಸದಾಗಿ ಮನೆ ಮಠಗಳನ್ನು ಕಟ್ಟಿಕೊಂಡು ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂದು ಹೇಳಿ ಜಮೀನು ಕೊಡಿ ಎಂದು ಕೇಳುತ್ತಾರೋ ಅದಕ್ಕೆ ತಾವು ಗಮನ ಕೊಡಬೇಕಾದುದು. ಆದರೆ ತಾವು ಕಲೆಕ್ಟಿವ್ ಫಾರ್ಮಿಂಗ್, ಬೆಟರ್ ಫಾರ್ಮಿಂಗ್, ಕೋ-ಆಪರೇಟಿವ್ ಫಾರ್ಮಿಂಗ್—ಈ ಯೋಜನೆಗಳು ಎಲ್ಲಿವೆಯೋ ಅಂಥ ಸ್ಥಳಗಳಿಗೆ ಹೋಗುತ್ತಿರುವಂಥವರಿಗೇ ಕೊಡುತ್ತಿದ್ದೀರೇ ಹೊರತು, ನಾನು ಹೇಳುವ ಹಾಗೆ ಹತ್ತಾರು ನಿಮ್ಮ ತರಗತಿಯವರು ಎಲ್ಲಾದರೂ ಹೋಗಿ ಕಾಲೊನಿ ಮಾಡಿಕೊಳ್ಳೋಣವೆಂದು ಜಮೀನು ಕೇಳಿದರೆ ತಾವು ಕೊಡುತ್ತಿಲ್ಲ. ನಾನೂ ಈ ಸ್ಕೀಮಿನಲ್ಲಿ ಸೇರಿ ಕೆಲಸ ಮಾಡಿದ್ದೇನೆ. ಅದೇನೂ ಅಷ್ಟು ಆಶಾದಾಯಕವಾಗಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಈಗ ನೀವು ಬಿಟ್ಟಮೇಲೆ ಬಹಳ ಚೆನ್ನಾಗಿ ಆಯಿತು. (ನಗು).

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಅಂಕಿ ಅಂಶಗಳನ್ನು ಕೊಟ್ಟು ಅದಕ್ಕೆ ಬೇಕಾದರೆ ನಾನು ಉತ್ತರ ಹೇಳಬಲ್ಲೆ. ಆದರೆ ನಾನೀಗ ಅದನ್ನೆಲ್ಲಾ ಹೇಳಲು ಇಷ್ಟಪಡುವುದಿಲ್ಲ.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸರ್ಕಾರದವರು ಇದಕ್ಕಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ತಯಾರಾಗಿದ್ದಾರೆಂಬುದು ಬಜೆಟ್ಟಿನಿಂದೇನೋ ವ್ಯಕ್ತಪಡುತ್ತದೆ. ಆದರೆ ನಾನು ಮೊದಲೇ ಹೇಳಿದ ಹಾಗೆ ನಾವು ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿ ಸುಧಾರಣೆಯನ್ನು ಮಾಡಬೇಕು. ಈಗಿನ ಪದ್ಧತಿಯಿಂದ ನಮ್ಮ ಜನಾಂಗಕ್ಕಾಗಲಿ ನಮ್ಮ ದೇಶಕ್ಕಾಗಲಿ ನಾವು ನಿರೀಕ್ಷೆ ಮಾಡುತ್ತಿರುವಷ್ಟು ಪ್ರಯೋಜನವಾಗುತ್ತಿಲ್ಲ. ಹುಡುಗರು ಗೊತ್ತು ಗುರಿಯಿಲ್ಲದೆ ಬಿ. ಎ. ಪಾಸು ಮಾಡಿ ನಿರುದ್ಯೋಗಕ್ಕೆ ತುತ್ತಾಗುತ್ತಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಆದ್ದರಿಂದ ಬೇರೆ ಪಾಶ್ಚಿಮಾತ್ಯ ದೇಶಗಳಲ್ಲಿ ಯಾವ ರೀತಿ ವಿದ್ಯಾಭ್ಯಾಸ ಮಾಡಿಸಿ ಅವರು ಓದಿದ ಮೇಲೆ ತಮ್ಮ ಜೀವನೋಪಾಯವನ್ನು ಕಲ್ಪಿಸಿಕೊಳ್ಳುವುದಕ್ಕೆ ಶಕ್ತರಾಗುವುದಕ್ಕೆ ಸಾಧ್ಯವಾಗುವ ರೀತಿಯನ್ನನುಸರಿಸಿದ್ದಾರೋ ತಾವೂ ಆ ರೀತಿ ಸುಧಾರಣೆ ಮಾಡಬೇಕೆಂದು ಹೇಳುತ್ತೇನೆ.

Sri K. HANUMANTHAIYA.—Agreed.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಈ ಸಂದರ್ಭದಲ್ಲಿ ಆದಿಕರ್ಣಾಟಕರಿಗೆ ಸಂಬಂಧಪಟ್ಟಿರುವಂತೆ ನಡೆಯುತ್ತಿದ್ದ Central Adi Karnataka Institute ವಿಚಾರವಾಗಿ ಒಂದು ಮಾತು ಹೇಳಬಯಸುತ್ತೇನೆ. ಅಲ್ಲಿ 210 ಹುಡುಗರಿದ್ದರು. ಈಗ ಈ ಸಭೆಯ ಅಧ್ಯಕ್ಷರೂ (ಶ್ರೀ ಎಂ. ಮಾದಯ್ಯನವರು) ಸಹ ಅಲ್ಲಿದ್ದು ಸೌಖ್ಯವನ್ನನುಭವಿಸಿದ್ದಾರೆ. ಆ ಸ್ಕೂಲಿನಲ್ಲಿ 60,000 ರೂಪಾಯಿಗಳಿಗೆ ಮೇಲ್ಪಟ್ಟು ಉತ್ಪತ್ತಿ ಬರುತ್ತಿತ್ತು. ಸ್ಮಿತಿ, ಟೈಲರಿಂಗ್, ಜೋಡು ಹೊಲಿಯುವುದು, ಚಾಪೆ ಹೆಣೆಯುವುದು, ವರಗೆಲಸ, ಇತ್ಯಾದಿಯಾಗಿ ಅನೇಕ ಕಲಸ ಕಾರ್ಯಗಳನ್ನು ಮಾಡಿಸಿ ಅದರ ಜೊತೆಗೆ ಹುಡುಗರಿಗೆ ವಿದ್ಯೆ ಕಲಿಸುತ್ತಿದ್ದರಲ್ಲದೆ, ಅವರು ಮುಗಿಸಿಕೊಂಡು ಹೋಗುವಾಗ ಬೋನಸ್ಸನ್ನು ಕೂಡ ಕೊಟ್ಟು ಕಳುಹಿಸುತ್ತಿದ್ದರು. ಇಂಥಾದ್ದನ್ನು ಸರ್ಕಾರದವರು ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಆಗಿ ಪರಿವರ್ತನೆ ಮಾಡುತ್ತೇವೆಂದು ಹೇಳಿ ವಜಾ ಮಾಡಿಬಿಟ್ಟರು. ಅತ್ತ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನ್ನು ಮಾಡಲಿಲ್ಲ; ಇತ್ತ ಹಿಂದಿದ್ದ ಆ ಶಾಲೆಯನ್ನು ಪುನಃ revive ಕೂಡ ಮಾಡಲಿಲ್ಲ. ಹೀಗಾಗಿ ನಮ್ಮ ಆದಿಕರ್ಣಾಟಕರಿಗೆ ಸಿಕ್ಕುತ್ತಿದ್ದ ಈ ಟೆಕ್ನಿಕಲ್ ವಿದ್ಯಾಭ್ಯಾಸವೂ ಹೋಯಿತು. ಈಗ ನಮ್ಮಲ್ಲಿ ಮಿಡ್ಲ್ ಸ್ಕೂಲ್ ಪರೀಕ್ಷೆಯಾಗಿರುವವರಿಗೆ ಟೆಕ್ನಿಕಲ್ ಸ್ಕೂಲುಗಳಲ್ಲಿ ಹೆಚ್ಚಿಗೆ ಅವಕಾಶ ಕೊಡಬೇಕೆಂದು ಮನವಿ ಮಾಡಿಕೊಂಡರೆ ಅದನ್ನೂ assure ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರು. ಇನ್ನಾದರೂ ತಾವೀಗ ಪಾರಿಭಾಷಿಕ ಶಿಕ್ಷಣ ವಿಷಯಗಳಲ್ಲಿ ನಮ್ಮ ನಿಮ್ಮ ತರಗತಿಗಳವರ ವಿದ್ಯಾರ್ಥಿಗಳಿಗೆ ಮಿಡ್ಲ್ ಸ್ಕೂಲಿನಲ್ಲೂ ಹೈಸ್ಕೂಲಿನಲ್ಲೂ ಹೆಚ್ಚಿಗೆ ಅವಕಾಶ ಕೊಟ್ಟು ಪಾಶ್ಚಿಮಾತ್ಯ ದೇಶಗಳಿಗೂ ಹೋಗಿ ವ್ಯಾಸಂಗ ಮಾಡಿಕೊಂಡು ಬರುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ಮುಖ್ಯವಾಗಿ ವಿದ್ಯಾಭ್ಯಾಸದ ಸುಧಾರಣೆ ಮಾಡುವಾಗ ಈ ವಿಚಾರಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. CHAIRMAN (Sri M. Madiah).—The Hon'ble Member's time is up.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಪಾನನಿರೋಧದ ವಿಚಾರದಲ್ಲಿ ಮುಖ್ಯವಾಗಿ ಒಂದು ಮಾತು ಹೇಳಿ ಮುಗಿಸುತ್ತೇನೆ. ನಮ್ಮ ನಿಮ್ನ ತರಗತಿಯವರ ದೃಷ್ಟಿಯಿಂದಲಾದರೂ ಕೂಡ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಪಾನನಿರೋಧವನ್ನು ಜಾರಿಗೆ ತರಬೇಕೆಂಬ ನನ್ನ ಪ್ರಾರ್ಥನೆ. ಕೆ. ಜಿ. ಎಫ್. ಕಡೆಯವರು ಇದನ್ನು ಸ್ವಲ್ಪ ಮಟ್ಟಿಗೆ ವಿರೋಧಿಸುವುದಕ್ಕೆ ಒಂದು ವಿಶೇಷ ಕಾರಣವಿದೆ. ಕೆ.ಜಿ.ಎಫ್. ನಲ್ಲಿ ಕಲಸ ನಡೆಸುತ್ತಿರುವವರು ಪರದೇಶೀಯರು. ಮೈಸೂರು ದೇಶದವರು ಆ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಪರದೇಶೀಯರ ದೃಷ್ಟಿಯಿಂದ ಪಾನ ನಿರೋಧವನ್ನು ವಜಾ ಮಾಡುವುದು ಅತ್ಯಾವಶ್ಯಕವಾಗಿರಬಹುದು. ಅಲ್ಲಿನ ಡಾಕ್ಟರೂ ಕೂಡ ಜನರಿಗೆ ಪಾನ ನಿರೋಧವನ್ನು ತೆಗೆದು ಹಾಕಿಸಿಬಿಡಿ ಎಂದು ಬುದ್ಧಿವಾದ ಕೊಡುತ್ತಿರುವುದಾಗಿ ತಿಳಿದು ಬಂದಿದೆ. ಆದರೂ 16–17 ಲಕ್ಷದಷ್ಟಿರುವ ಯಾವ ಒಂದು ಬಹುಮತ ಪಂಗಡದವರು ಇಂದು ಆರ್ಥಿಕ ದೃಷ್ಟಿಯಿಂದಲೂ, ಸಾಮಾಜಿಕ ದೃಷ್ಟಿಯಿಂದಲೂ ನೈತಿಕ ದೃಷ್ಟಿಯಿಂದಲೂ ಹಿಂದೆ ಬಿದ್ದಿದ್ದಾರೋ ಅವರುಗಳ ಪುರೋಭಿವೃದ್ಧಿಗಾಗಿಯೂ, ಏಳಿಗೆಗಾಗಿಯೂ ಪಾನನಿರೋಧವನ್ನು ಜಾರಿಗೆ ತರಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದಕ್ಕಾಗಿಯೇ ಟೆಂಪರೆನ್ಸ್ ಅಸೋಸಿಯೇಷನ್ನಿನವರು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಏನಾದರೂ ಮಾಡಿ ಪಾನನಿರೋಧವನ್ನು ಎಲ್ಲ ಕಡೆಯೂ ಜಾರಿಗೆ ತಂದು ಇದರಿಂದ release ಆಗತಕ್ಕ ಈ ಜಮೀನುಗಳನ್ನು ಮಾನ್ಯ ಸಚಿವರು ಅಪ್ಪಣೆ ಕೊಡಿಸಿದ ಹಾಗೆ ಶೇಕಡ 50 ಭಾಗದಷ್ಟು ಜಮೀನಿಲ್ಲದ ನಿಮ್ನ ತರಗತಿಯವರಿಗೆ ಕೊಟ್ಟು ತನ್ಮೂಲಕ ಅವರ ಆರ್ಥಿಕ ಸ್ಥಿತಿಯನ್ನೂ ಸಾಮಾಜಿಕ ಸ್ಥಿತಿಯನ್ನೂ ಉತ್ತಮಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

Sri A. BHEEMAPPA NAIK.—Your leader differs from you in the matter of prohibition.

Sri M. CHICKALINGIAH.—I am not differing from him. I am only suggesting from the economic and social point of view of the Depressed Classes.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಬಿಂಕಲಗೂಡು).—ಅಧ್ಯಕ್ಷರೇ, ಈಗ ಸಭೆಯ ಮುಂದೆ ಮಂಡಿಸಿರುವ ಈ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತೇನೆ. ಇದನ್ನು ಸ್ವಾಗತಿಸಲು ಕಾರಣವೇನೆಂದರೆ, ನಮ್ಮ ಜನರ ಪುರೋಭಿವೃದ್ಧಿಗೆ ಅಗತ್ಯವಾದ ಮುಖ್ಯ ಬಾಬುಗಳೇನಿವೆಯೋ ಅವಕ್ಕೆ ಸಾಕಷ್ಟು ಹಣವನ್ನು ಸರ್ಕಾರದವರು ಒದಗಿಸಿದ್ದಾರೆ. ವಿರೋಧ ಪಕ್ಷದ ನಾಯಕರಾದ ಜನಾಬ್ ಇಮಾಂರವರು ಈ ಬಡ್ಜೆಟ್ಟನ್ನು ಬಹಳ ಟೀಕೆ ಮಾಡಿದ್ದಾರೆ. ಆದರೂ ನಮ್ಮ ಸ್ನೇಹಿತರಾದ ಶ್ರೀಮಾನ್ ಶಂಕರಲಿಂಗೇಗೌಡರು ಹೇಳುವ ಅಂಕಿ ಅಂಶಗಳು ಮತ್ತು ಅವರ ಅರ್ಥಶಾಸ್ತ್ರ ಸಾಮಾನ್ಯವಾಗಿ ಒಂದೊಂದು ಅರ್ಥವಾಗದೇ ಇದ್ದರೂ ಈ ಸಲ ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರು ಈಗ ಸಭೆಯಲ್ಲಿಲ್ಲ. ಅವರು ವಿರೋಧ ಪಕ್ಷದವರು ಅಪ ಪ್ರಚಾರಕ್ಕಾಗಿ ಮಾತನಾಡಿರುವುದಕ್ಕೆ ಉತ್ತರಗಳನ್ನು ಕೊಡುತ್ತಾ, ನ್ಯಾಯವಾದ ಅಭಿಪ್ರಾಯವನ್ನು ಕೊಡಬೇಕು, ನಿಜವಾಗಿರುವುದನ್ನು ನಿಜವೆನ್ನಬೇಕು, ನಿಜವಲ್ಲದಿದ್ದನ್ನು ನಿಜವಲ್ಲಬೇಕೆಂದು ಹೇಳಿದ್ದಾರೆ. ಅವರು ಬಹಳ ಕಷ್ಟಪಟ್ಟು ಬಡ್ಜೆಟ್ಟನ್ನು ಬಹಳ ಚೆನ್ನಾಗಿ ನೋಡಿ ಅವರ ಬುದ್ಧಿ ಎಲ್ಲವನ್ನೂ ಉಪಯೋಗಿಸಿ ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಶ್ರಮವಹಿಸಿ ಈ ಬಡ್ಜೆಟ್ಟನ್ನು ಪರಿಶೀಲಿಸಿ ಅವರ ಜಾಣ್ಮೆಯನ್ನುಪಯೋಗಿಸಿ ಅವರೇ ಇದನ್ನು ಸ್ವಾಗತಿಸಿದ ಮೇಲೆ ನಾನು ಸ್ವಾಗತಮಾಡುವುದರಲ್ಲಿ ವಿಶೇಷವೇನೂ ಇಲ್ಲ. ಇಮಾಂ ಸಾಹೇಬರು ಯಾವುದೋ ಒಂದು ಕಾಲದಲ್ಲಿ ಅವರು ಮಂತ್ರಿಗಳಾಗಿದ್ದ ಕಾಲದ ಪರಿಸ್ಥಿತಿಯನ್ನು ತಮ್ಮ ಮನಸಿನಲ್ಲಿಟ್ಟುಕೊಂಡು ಯೋಚನೆಮಾಡುತ್ತಿದ್ದಾರೆಯೇ ಹೊರತು ಕಾಲ ಪರಿಸ್ಥಿತಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಹೇಗೆ ಬದಲಾವಣೆಯಾಗಿದೆಯೆಂಬುದನ್ನು ಗಮನಿಸಿಲ್ಲ. ಈಗ ದೇಶ ಎಷ್ಟೋ ವೇಗದಿಂದ ನಡೆಯುತ್ತಿದೆ. ಪ್ರಪಂಚವೇ ವೇಗದಿಂದ ನಡೆಯುತ್ತಿದೆ. ಜನರು ಹೆಚ್ಚಿನ ಆಕಾಂಕ್ಷೆಯಿಂದ ಮುಂದುವರಿಯಬೇಕೆಂದು ಎಲ್ಲೆಲ್ಲಿಯೂ ರಸ್ತೆಗಳು ಬೇಕು, ಸೇತುವೆಗಳು ಬೇಕು, ಸ್ಕೂಲುಗಳು ಬೇಕು, ವೈದ್ಯ ಸಹಾಯ ಬೇಕು ಎಂದು ಕೇಳುವುದಲ್ಲದೆ ಕೂಗು ಹಾಕುತ್ತಿದ್ದಾರೆ. ಇದೆಲ್ಲವೂ ಅವರ ಕಣ್ಣಿಗೆ ಕಾಣುತ್ತಿದೆಯೋ ಇಲ್ಲವೋ ಅವರ ಕಿವಿಗೆ ಕೇಳುತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಅವರು ತಮ್ಮ ಅಧಿಕಾರಾವಧಿಯಲ್ಲಿ ಎಷ್ಟು ಕೆರೆಗಳನ್ನು ಕಟ್ಟಿಸಿದರು, ಎಷ್ಟು ಸ್ಕೂಲುಗಳನ್ನು ಕೊಟ್ಟರು ಎಂದು ಕೇಳುತ್ತೇನೆ. ಈ ನಾಲ್ಕು ವರ್ಷಗಳಲ್ಲಿ ಕೊಟ್ಟಿರುವ ಕಾಲು ಭಾಗದಷ್ಟನ್ನೂ ಅವರು ಕೊಟ್ಟಿಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಬೇಕಾದರೆ challengeಗೆ ಒಪ್ಪಿಕೊಳ್ಳುತ್ತೇನೆ. ಈಗ ನಮ್ಮ ಸೆಕ್ರೆಟೇರಿಯಟ್ಟಿಗೆ ಜನರು ಹೇಗೆ ಬರುತ್ತಿದ್ದಾರೆಂಬುದನ್ನು ನೋಡಲಿ. ಅವರ ಕಾಲದಲ್ಲಿ ಒಬ್ಬ ಮಂತ್ರಿಗಳನ್ನು ಜನ ನೋಡಬೇಕಾದರೆ ಎಷ್ಟೋ ಕಷ್ಟ. ಅಮಲ್ದಾರರೇ ತಡೆಯುತ್ತಿದ್ದರು. ಡೆಪ್ಯುಟಿ ಕಮೀಷನರೇ ತಡೆಯುತ್ತಿದ್ದರು. ಎಲ್ಲಾದರೂ ಕ್ಷಾಮವೆಂದು ಹೇಳಿದರೆ ದೊಡ್ಡ ದೊಡ್ಡ ರಸ್ತೆಗಳಲ್ಲಿ ಹೋಗಿ ಬರುತ್ತಿದ್ದರು; ಜನರ ಕಷ್ಟಗಳನ್ನು ವಿಚಾರಿಸುತ್ತಿರಲಿಲ್ಲ. ಆದರೆ ಈಗ ಡೆಪ್ಯುಟಿ ಕಮೀಷನರು, ಸಬ್ ಡಿವಿಜನ್ ಆಫೀಸರು, ಅಮಲ್ದಾರರು ತಡೆಗಟ್ಟಿದರೂ ಕೂಡ ಜನ ಕೇಳುವುದಿಲ್ಲ. ನಮ್ಮ ಮಂತ್ರಿಗಳಿಗೆ ನಮ್ಮ ಕಷ್ಟ ಸುಖಗಳು ಅರ್ಥವಾಗುತ್ತವೆ, ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲವೆಂದು ಹೇಳಿ ನೇರವಾಗಿ ಮಂತ್ರಿಗಳಲ್ಲಿಗೇ ಬರುತ್ತಾರೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಕಾಂಗ್ರೆಸ್ ಪಾರ್ಟಿಯವರನ್ನು ಮಾತ್ರ ಹಾಗೆ ಬಿಡುತ್ತಾರೆ; ಇತರರನ್ನು ಬಿಡುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಈ ಹೊತ್ತು ಬಸ್ ಲೈನ್‌ಗಳನ್ನು ತೆಗೆದುಕೊಳ್ಳಿ, ಕಾಂಗ್ರೆಸ್ಸಿಗೆ ಸೇರಿದವರಿಗಿಂತ ಇತರರಿಗೆ ಹೆಚ್ಚಾಗಿ ಸಿಕ್ಕಿವೆ. ಜಮೀನು ಪಡೆದಿರುವವರೂ ಕೂಡ ಕಾಂಗ್ರೆಸ್‌ನವರಿಗಿಂತ ಇತರರೇ ಹೆಚ್ಚು ಪಡೆದಿದ್ದಾರೆ. ಹಿಂದೆ ಯಾರು ಮಹಡಿ ಮನೆಗಳನ್ನು ಕಟ್ಟಿಕೊಂಡು ಮಜಾ ಮಾಡುತ್ತಿದ್ದರೋ ಅವರಿಗೇ ಕಾಂಗ್ರೆಸ್ ಸರ್ಕಾರದವರು ಉತ್ತೇಜನ ಕೊಡುತ್ತಿದ್ದೀರಿ ಎಂದು ಅನೇಕ ಸಾರಿ ಕಾಂಗ್ರೆಸ್ ಮಂತ್ರಿಗಳನ್ನು ನಮ್ಮ ಪಕ್ಷದ ಮೀಟಿಂಗುಗಳಲ್ಲಿ ಟೀಕೆ ಮಾಡಿದ್ದೇವೆ. ನಮ್ಮ ಮಿತ್ರರಾದ ಶ್ರೀಮಾನ್ ಮರಿಯಪ್ಪನವರು ಹೇಳಿದ ಹಾಗೆ, ಸ್ವತಂತ್ರ ದೇಶದಲ್ಲಿ ವಿರೋಧ ಪಕ್ಷದ ಪಾತ್ರವೇನೆಂಬುದನ್ನು ತಿಳಿದುಕೊಳ್ಳದೆ ಸುಮ್ಮನೆ ಟೀಕೆ ಮಾಡುವುದು, ತಪ್ಪನ್ನೇ ಕಂಡುಹಿಡಿಯುವುದು, ಯಾವಾಗಲೂ ಹೀಗೆ ಮಾಡುತ್ತಿರುವುದು ಸರಿಯಲ್ಲ. ದೇಶವನ್ನು ಮುಂದೆ ಹೇಗೆ ಅಭಿವೃದ್ಧಿ ಸ್ಥಿತಿಗೆ

(ಶ್ರೀ ಜಿ. ಎ. ತಿಮ್ಮಪ್ಪಗೌಡರು.)

ತರಬೇಕು, ಮುಂದೆ ಮಾಡಬೇಕಾಗಿರುವ ಅನೇಕ ಕೆಲಸಗಳಿಗೆ ಏನು ಸಲಹೆಗಳನ್ನು ಕೊಡಬೇಕು ಎಂಬುದನ್ನು ಕುರಿತು ಸರ್ಕಾರಕ್ಕೆ ಸಲಹೆಗಳನ್ನು ಕೊಡಬೇಕು. ಸರ್ಕಾರದವರ ವರಮಾನವನ್ನು ಹೇಗೆ ಹೆಚ್ಚಿಸುವುದು, ವ್ಯವಸಾಯವನ್ನು ಹೇಗೆ ಅಭಿವೃದ್ಧಿ ಮಾಡಬೇಕು. ಕುಡಿತವನ್ನು ಹೇಗೆ ಕಡಮೆಮಾಡಬೇಕು, ಕೈಗಾರಿಕೆಯ ಅಭಿವೃದ್ಧಿ ಹೇಗಾಗಬೇಕು ಎಂಬ ವಿಷಯಗಳಲ್ಲಿ ಸಲಹೆಗಳನ್ನು ಕೊಟ್ಟರೆ ಅದರಿಂದ ದೇಶಕ್ಕೆ ಉಪಕಾರವಾಗುತ್ತವೆ.

ಈಗ ನನಗೆ ವ್ಯವಸಾಯದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದು ಆಸೆ ಇದೆ. ಅನೇಕ ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಆಸೆಗಳು ನೆರವೇರಬೇಕಾದರೆ, ವಿದ್ಯುಚ್ಛಕ್ತಿಯು ಹೆಚ್ಚಾಗಿಬೇಕು. ವ್ಯವಸಾಯ ಕೈಗಾರಿಕೆ ಎಲ್ಲವೂ ಅಭಿವೃದ್ಧಿಯಾಗಬೇಕಾದರೆ ಇದು ಅವಶ್ಯಕ. ವ್ಯವಸಾಯ ನಾವು ನಿರೀಕ್ಷಣೆ ಮಾಡಿದಷ್ಟು ಅಭಿವೃದ್ಧಿಯಾಗುತ್ತಿಲ್ಲ. ಈಗಿನ ಪ್ರಜಾ ಸರ್ಕಾರಕ್ಕಿಂತ ಹಿಂದೆ ಯಾವ ಸರ್ಕಾರವಿತ್ತೋ ಅದು ಹೆಚ್ಚು ಮುಂದಾಲೋಚನೆ ಇಟ್ಟುಕೊಂಡು ಹತ್ತು ಹದಿನೈದು ವರ್ಷಗಳ ಯೋಜನೆಗಳನ್ನಿಟ್ಟುಕೊಂಡು ದೇಶದಲ್ಲಿ ಆಗಬೇಕಾದ ಕೆಲಸಗಳೇನಿವೆ ಎಂಬುದನ್ನು ಯೋಚನೆ ಮಾಡಿಕೊಂಡು ತಕ್ಕ ಉತ್ತೇಜನ ಕೊಡಲಿಲ್ಲ. ಸರ್ ಮಿರ್ಜಾರವರ ದಕ್ಷತೆಯನ್ನು ಪ್ರಶಂಸೆ ಮಾಡುತ್ತಾರೆ. ಆದರೆ ಅವರ ಕಾಲದಲ್ಲಿ ಪಟ್ಟಣಗಳನ್ನು ಶೃಂಗಾರ ಮಾಡಿ ಇಲ್ಲಿ ಒಳ್ಳೊಳ್ಳೆಯ ರಸ್ತೆಗಳನ್ನೂ ಪಾರ್ಕುಗಳನ್ನೂ ಮಾಡುವುದಕ್ಕೆ ಪ್ರಯತ್ನಪಟ್ಟರೇ ವಿನಾ ಹಳ್ಳಿಗಳನ್ನು ಅಭಿವೃದ್ಧಿ ಮಾಡುವುದರಲ್ಲಿ, ಗ್ರಾಮಾಂತರಗಳ ರಸ್ತೆಗಳು, ಕೆರೆಗಳು ಮುಂತಾದವುಗಳನ್ನು ಮಾಡಿಸಲು ಪ್ರೋತ್ಸಾಹವನ್ನು ಕೊಡದೆ ಇದ್ದುದರಿಂದ ಈ ದಿನ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಜನರು ಕೇಳುವ ಅನುಕೂಲಗಳನ್ನೆಲ್ಲಾ ಪೂರೈಸುವುದು ಕಷ್ಟವಾಗಿದೆ. ಆದರೂ ಶ್ರೀ ವರ್ಮಾ ಪಟ್ಟಾಭಿರಾಮರ್‌ರವರು ತಿಳಿಸಿದ ಹಾಗೆ, ಈಗ ಯಾವುದರಲ್ಲಿಯೂ ಅಧೈರ್ಯ ಪಡಬೇಕಾಗಿಲ್ಲ. ಈಗ ನಮ್ಮ ಮುಖ್ಯಮಂತ್ರಿಗಳೂ ಮತ್ತು ಉತ್ಸಾಹ ಶಾಲಿಗಳಾದ ಮಂತ್ರಿಗಳೂ ಇದ್ದಾರೆ. ಶ್ರೀಗಳಾದ ಕಡಿದಾಳ್ ಮಂಜಪ್ಪನವರಿದ್ದಾರೆ, ರಾಮಚಂದ್ರರಾಯರಿದ್ದಾರೆ, ಸಿದ್ದವೀರಪ್ಪನವರಿದ್ದಾರೆ, ಸಿದ್ದಲಿಂಗಯ್ಯನವರಿದ್ದಾರೆ, ಇವರೆಲ್ಲರೂ ಹಳ್ಳಿಗಳ ಕಷ್ಟವನ್ನರಿತವರೇ ಆಗಿದ್ದಾರೆ ಅವರು ವ್ಯವಸಾಯಾಭಿವೃದ್ಧಿಗೆ ಹೆಚ್ಚು ಗಮನಕೊಡುತ್ತಾರೆಂಬ ಭರವಸೆಯಿದೆ. ಈಗ ಏನೊಂದು ನಿರಾಸೆ ನಮಗಿದ್ದರೂ ಅದು ತೊಲಗುವಂತೆ ಈ ಮಂತ್ರಿಮಂಡಲದವರು ಮುಂದೆ ಒಂದು ವರ್ಷದಲ್ಲಿ ಪರಿಣಾಮಕಾರಿಯಾದ ಬದಲಾವಣೆಗಳನ್ನು ಮಾಡುತ್ತಾರೆಂಬ ಭರವಸೆಯಿದೆ. ಈ ವರ್ಷ ನಾಲ್ಕು ಕೋಟಿ ರೂಪಾಯಿ ಖೋತಾ ಬೀಳುತ್ತದೆ, ಬಡ್ಜೆಟ್ಟನ್ನು ಸರಿದೂಗಿಸುವುದು ಕಷ್ಟ, ಏನು ಹೊಸ ತೆರಿಗೆಗಳು ನಮ್ಮ ಮೇಲೆ ಬೀಳುತ್ತವೆಯೋ ಏನೋ ಎಂದು ಜನರು ಭಯ ಭೀತರಾಗಿದ್ದರು. ಆದರೆ ನಮ್ಮ ಮಂತ್ರಿಗಳು ಸಾಮರ್ಥ್ಯದಿಂದಲೂ ಧೈರ್ಯದಿಂದಲೂ ಬುದ್ಧಿವಂತಿಕೆಯಿಂದಲೂ ಬಡ್ಜೆಟ್ಟನ್ನು ಸರಿದೂಗಿಸಿ ನಾಲ್ಕು ಕೋಟಿ ಖೋತಾ ಇದ್ದುದನ್ನು ಒಂದು ಕೋಟಿಗೆ ಇಳಿಸಿ ಬಡ್ಜೆಟ್ಟನ್ನು ನಮ್ಮ ಮುಂದಿಟ್ಟಿದ್ದಾರೆ.

ಈಗಿನ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ನ್ಯೂನತೆಗಳಿರುವುದರಿಂದ ಯಾರೂ ವ್ಯವಸಾಯಕ್ಕೆ ಹೋಗುತ್ತಿಲ್ಲ. ಯಾರೇ ಆಗಲಿ ಒಂದು ಎಸ್. ಎಸ್. ಎಲ್. ಸಿ. ಅಥವಾ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದೊಡನೆಯೇ ಒಂದು ಬಸ್ ಕ್ಲರ್ಕ್, ಅಥವಾ ಲಾಯರು ಕೆಲಸ, ಸರ್ಕಾರಿ ಅಧಿಕಾರ, ವ್ಯಾಪಾರ, ಪತ್ರಿಕೆಗಳ ಪ್ರತಿನಿಧಿಗಳ ಕೆಲಸ, ಮುಂತಾದ ಜೀವಿಕೆಯ ಇತರ ಎಲ್ಲ ಕ್ಷೇತ್ರಗಳಿಗೂ ಬರುತ್ತಾರೆಯೇ ಹೊರತು ವ್ಯವಸಾಯಕ್ಕೆ ಬರುತ್ತಿಲ್ಲ. ಏಕೆಂದರೆ, ವ್ಯವಸಾಯ ಫಲದಾಯಕವಾಗಿಲ್ಲ. ಹಳ್ಳಿಯ ಜೀವನ ಆಕರ್ಷಣೀಯವಾಗಿಲ್ಲ. ನಮ್ಮ ಹಳ್ಳಿಯನ್ನು ನೋಡಿದರೆ, ಅಲ್ಲಿಗೆ ಹೋಗಲು ಸರಿಯಾದ ರಸ್ತೆಯಿಲ್ಲ, ಸೇದುವ ಬಾವಿಯಿಲ್ಲ, ಮಿಡ್ಲ್ ಸ್ಕೂಲಿಲ್ಲ, ಪತ್ರಿಕೆಗಳನ್ನೋದಲು ಅವಕಾಶವಿಲ್ಲ. ಹೀಗೆ ಅಲ್ಲಿಯ ಜೀವನ ನರಕಯಾತನೆಯಾಗಿರುವಾಗ, ನಾಗರಿಕ ಜೀವನದ ಅನುಕೂಲತೆ ಇಲ್ಲದೇ ಇರುವಾಗ ಹಳ್ಳಿಗೆ ಹೋಗಿ ವ್ಯವಸಾಯ ಮಾಡು ಎಂದರೆ ಹೇಗ ಮಾಡುತ್ತಾರೆ? ಸ್ವಾಮಿ, ಸರ್ಕಾರಿ ನೌಕರರು ನಮಗೆ ಸಂಬಳ ಕಡಮೆ ಎಂದು ಹೇಳುತ್ತಾರೆ. ನಮ್ಮ ಸ್ನೇಹಿತರೊಬ್ಬರು ಮಧ್ಯಮ ತರಗತಿ ಜನರ ಪರವಹಿಸಿ ಬಹಳ ಹೇಳಿದರು. ಕೆಳ ದರ್ಜೆ ನೌಕರರ ಜೀವನ ಸ್ಥಿತಿಯ ಕಷ್ಟವನ್ನು ಹೇಳಿದರು. ಹಳ್ಳಿಯವರ ಜೀವನ ಇವರೆಲ್ಲರ ಜೀವನಕ್ಕಿಂತ ಹೀನಸ್ಥಿತಿಯಲ್ಲಿದೆ.

3 P.M.

ಇನ್ನೂ ಒಂದು ಕಾರಣವೇನೆಂದರೆ, ಈ ದಿವಸ ರೈತನ ಮಗನಾಗಿರತಕ್ಕವನು, 40-50 ರೂಪಾಯಿಗಳ ಕಂದಾಯ ಕೊಡುವಂಥ ರೈತನಾಗಿದ್ದರೂ, ಅಂಥ ಸ್ಥಿತಿಯಲ್ಲಿರತಕ್ಕ ರೈತನ ಮಗನೂ ಕೇವಲ ಈ ದಿವಸ 25 ರೂಪಾಯಿನ ಗುಮಾಸ್ತೆಗಿರಿಗೆ ಬರಲು ಸಿದ್ಧನಾಗಿದ್ದಾನೆ; ಅಷ್ಟೆ ಏಕೆ, ಒಬ್ಬ ಕಾನ್‌ಸ್ಟೇಬಲ್ ಆಗಿ ಕೆಲಸ ಮಾಡಲು, ಕೊನೆಗೆ ಜವಾನನಾಗಿ ಕೆಲಸಮಾಡುವುದಕ್ಕೂ ಸಿದ್ಧನಾಗಿರುತ್ತಾನೆ. ಇದರಲ್ಲಿ ಏನೊಂದು ಅಂಶ ಅಡಕವಾಗಿದೆಯೆಂದರೆ—ಈ ನೌಕರೀ ವರ್ಗದಲ್ಲಿರತಕ್ಕವರ ಜೀವನ ಅಷ್ಟು ಸಲೀಸಾಗಿ ನಡೆಯುತ್ತಿರುವುದರಿಂದ, ಅವರೇಜ್ ಸ್ಟ್ಯಾಂಡರ್ಡ್‌ಗಿಂತಲೂ ನೆಮ್ಮದಿಯಾಗಿ ಜೀವನೋಪಾಯಮಾಡಿಕೊಂಡು ಹೋಗುತ್ತಿರುವುದನ್ನು ನೋಡಿ, ಈ ರೈತಾಪಿವರ್ಗದಲ್ಲಿರತಕ್ಕ ಜನರು, ಸ್ವಲ್ಪಮಟ್ಟಿಗೆ ವಿದ್ಯಾಭ್ಯಾಸದಲ್ಲಿ ಮುಂದುವರಿದರೆಂದರೆ ಆ ವರ್ಗದಲ್ಲಿರತಕ್ಕ ಜನರ ಜೀವನೋಪಾಯದಲ್ಲಿ ಉಂಟಾಗಿರುವ ಜುಗುಪ್ಸೆಯನ್ನು ನೋಡಿ, ಅದನ್ನು ಸಹಿಸಲಾರದೆ, ಅವರಿಗೆ ಎಷ್ಟೇ ಮನೆ ಇರಲಿ, ಜಮೀನಿರಲಿ, ಅವುಗಳೊಂದನ್ನೂ ಲೆಕ್ಕಿಸದೆ, ಈ ನೌಕರಿಗಳಿಗೆ ಬಂದು ಸೇರುತ್ತಿದ್ದಾರೆ. ಪ್ರತಿಯೊಬ್ಬರಿಗೂ ಮುಂದುವರಿಯಬೇಕು ಎಂಬ ಆಸೆ ಇದ್ದೇ ಇದೆ. ಆದರೆ ಅಧಿಕಾರ ವೃತ್ತಿಯಲ್ಲಿರುವವರೂ ಸಹ ಸಹಕರಿಸಿ ಕೆಲಸಮಾಡಿದರೆ, ಮತ್ತು ಸಾಮಾನ್ಯ ಜನರ ಜೀವನವೂ ಉತ್ತಮಗೊಳ್ಳಲೆಂಬ ಒಂದು ಸಹೃದಯ ಭಾವನೆಯಿಂದ ಅವರು ತಮ್ಮ ಕೆಲಸಕಾರ್ಯಗಳನ್ನು ಶ್ರದ್ಧೆ ವಹಿಸಿ ಮಾಡಿದರೆ, ಇಡೀ ದೇಶದ ಜನತೆಯ ಜೀವನ ಉತ್ತಮಗೊಳ್ಳಲು ಸಾಧ್ಯವಾಗುತ್ತದೆಯೆಂದು ನಾನು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಮಲೆನಾಡಿನ ಡೆವಲಪ್‌ಮೆಂಟ್ ವಿಷಯವಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೆ ತಾವು ಈ ದಿವಸ ಜನರಮೇಲೆ ಸೆಸ್ಸುಗಳನ್ನು ವಿಧಿಸುವುದರಲ್ಲಿ ಅಳತೆಮೀರಿಹೋಗಲಾಗಿದೆ. ಹೆಲ್ತ್ ಸೆಸ್ ಎಂದು ಬೇರೆ ಒಂದು ಸೆಸ್ಸನ್ನು ಹೊಸದಾಗಿ ಜನರಮೇಲೆ ಹಾಕಿರುತ್ತೀರಿ. ಆದರೆ ನಮ್ಮ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ತಾವು ಇನ್ನೂ ಹೆಚ್ಚು ಸೆಸ್ಸುಗಳನ್ನು ವಿಧಿಸಿದರೂ ಪರವಾಇಲ್ಲ. ಎಲ್ಲರೂ ಒಪ್ಪುವುದಾದರೆ ನಾವೂ ಕೊಟ್ಟೇವು. ತಾವು ಅದಕನುಸಾರವಾಗಿ ನಮಗೆ ಹೆಚ್ಚಿನ ಸೌಕರ್ಯಗಳನ್ನು ಒದ

ಗಿಸಿಕೊಡುತ್ತೇವೆಂಬ ಭರವಸೆಯನ್ನು ಕೊಡಬೇಕು. ಆದರೆ ಈ ಹೊರೆಯನ್ನು ಎಲ್ಲರಮೇಲೆಯೂ ಹಾಕಬೇಕು. ಜಮೀನು ಕಂದಾಯದ ಮೇಲೆ ಮಾತ್ರ ಸೆಸ್ಸುಗಳನ್ನು ಹಾಕುವುದು ಸರಿಯಾದ ನೀತಿಯಲ್ಲ. ಮೊಹತರ್ಫದ ಮೇಲೂ ಈ ಸೆಸ್ಸುಗಳನ್ನು ವಿಧಿಸಬೇಕು.

ಮಲೆನಾಡಿನ ರಸ್ತೆಗಳೆಲ್ಲಾ ಬಹಳ ಕೆಟ್ಟುಹೋಗಿವೆ. ಅವುಗಳನ್ನು ತಾವು ಮೊದಲು ಸರಿಪಡಿಸಲು ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿದೆ. ಆದರೆ ಶ್ರೀಮಾನ್ ಪಳನಿಯಪ್ಪನ್‌ರವರು, ಆ ಮಲೆನಾಡಿನವರು ಅನಾಗರಿಕರು ಎಂದು ಒಂದು ವಿಚಾರ ಹೇಳಿದರು. ಆದರೆ ಇಂಗ್ಲೀಷಿನವರು, ಕಪ್ಪುಜನರನ್ನು ತಮ್ಮ ಬಳಿ ಇಟ್ಟುಕೊಂಡು ಅವರನ್ನು ಅಭಿವೃದ್ಧಿಗೆ ತರುತ್ತೇವೆ, ಅವರನ್ನು ನಾಗರಿಕರನ್ನಾಗಿ ಮಾಡುತ್ತೇವೆಂದು ಜಂಭ ಕೊಚ್ಚಿಕೊಳ್ಳುತ್ತಿದ್ದಹಾಗೆ—ಇವರೂ ಈ ದಿವಸ ಅನಾಗರಿಕರು ಅವರು ಎಂದು ಹೇಳಿದಮೇಲೆ ಇವರು ಇನ್ನೆಂಥ ನಾಗರಿಕರೋ, ಅಥವಾ ಇದು ಇನ್ನೆಂಥಾ ನಾಗರಿಕ ಸ್ಥಿತಿಯೋ ನನಗೆ ಅರ್ಥವಾಗುತ್ತಿಲ್ಲ. ಆದರೆ ಮಲೆನಾಡಿನ ವಿಚಾರವನ್ನು ಅನೇಕರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ನಮ್ಮ ದೇಶಕ್ಕೆ ಬೇಕಾದ ವಿಶಿಷ್ಟ ಪದಾರ್ಥಗಳೂ ಈ ದಿವಸ ಅಲ್ಲಿಂದ ದೊರೆಯುತ್ತಿವೆ. ಆದರೂ ಈ ದಿವಸ ಅದು ಅಷ್ಟು ಹೀನಸ್ಥಿತಿಗೆ ಬಂದಿದೆ.

ನಮ್ಮ ಮಂತ್ರಿಗಳ ವಿಚಾರವಾಗಿ ಕೊನೆಯಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ ಜನರು ಈಗ ಸ್ವಲ್ಪ ಹೆದರಿಕೊಂಡು ನಡೆಯುತ್ತಿದ್ದಾರೆ. ಮೆಷಿನ್ ಸಂಪೂರ್ಣವಾಗಿ ಕೆಟ್ಟುಹೋಗಿರತಕ್ಕ ಒಂದು ರೈಲ್ವೆ ಅಥವಾ ಬಸ್ಸಿಗೆ ನಿಪುಣರಾದ ಸಾಮರ್ಥ್ಯವುಳ್ಳ ಡ್ರೈವರುಗಳಿದ್ದರೂ ಅದು ವೇಗವಾಗಿ ಹೇಗೆ ಹೋಗಲಾಗುವುದಿಲ್ಲವೋ ಅದೇ ರೀತಿಯಲ್ಲಿ ನಮ್ಮ ಮಂತ್ರಿಗಳು ಚೆನ್ನಾಗಿ ಕೆಲಸಮಾಡತಕ್ಕ ದಕ್ಷತೆಯನ್ನು ಪಡೆದಿದ್ದರೂ ಆಡಳಿತ ಶಾಖೆಯಲ್ಲಿ ಸ್ವಲ್ಪ ನ್ಯೂನತೆಗಳಿರುವುದರಿಂದ, ಕೆಲಸಗಳು ಸ್ವಲ್ಪ ನಿಧಾನವಾಗುತ್ತಿವೆ. ಈ ಆಡಳಿತ ಯಂತ್ರವನ್ನು ಬಹು ಬೇಗ ಸರಿಪಡಿಸಬೇಕಾಗಿದೆ. ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಏನು ಒಂದು ಮಾತನ್ನು ಹೇಳಿದ್ದಾರೆಂದರೆ—ಇನ್ನು ಒಂದು ವರ್ಷಕಾಲ ನನ್ನ ಕೆಲಸ ನೋಡಿ, ಅನಂತರ ತಾವು ಏನು ಬೇಕಾದರೂ ಟೀಕೆ ಮಾಡಿ ಎಂದು. ಅಷ್ಟೇ ಅಲ್ಲದೆ ಅವರು ಯಾರೇ ತಪ್ಪುಮಾಡಿರಲಿ, ಅದು ಅವರ ನಿಗಾಕ್ಕೆ ಬಿದ್ದರೆ ಅಥವಾ ಅವರಿಗೆ ಅದು ದೃಢಪಟ್ಟರೆ ಅವರು ಯಾರೇ ಆಗಿರಲಿ ಅಂಥ ತಪ್ಪಿತಸ್ಥರನ್ನು ಕೆಲಸದಿಂದಲೇ ವಜಾಮಾಡಲಾಗುತ್ತದೆಂದು ಹೇಳಿದ್ದಾರೆ. ಇದರಿಂದ ಈಗ ಜನರು ಸ್ವಲ್ಪ ಹೆದರಿ ಕೆಲಸಮಾಡುತ್ತಿದ್ದಾರೆ. ಆದುದರಿಂದ ಸರ್ಕಾರಿ ನೌಕರರೂ ಕೂಡ ಸರಿಯಾಗಿ ಕೆಲಸಮಾಡಬೇಕಾಗಿದೆ. ನಾನು ಈಗ ಮಂಡಿಸಿರತಕ್ಕ ಬಡ್ಜೆಟ್ಟನ್ನು ಸ್ವಾಗತಿಸುತ್ತೇನೆ. ಇನ್ನು ಮುಂದಿನ ವರ್ಷಕ್ಕೆ ನಮ್ಮ ಬಡ್ಜೆಟ್ ಉಳಿತಾಯದ ಬಡ್ಜೆಟ್ಆಗಿ ಸಭೆಯಮುಂದೆ ಬರುವಂತೆ ಭಗವಂತನು ಅನುಗ್ರಹಿಸಲಿ ಎಂದು ನಾನು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. CHAIRMAN.—The House will now rise for lunch and meet again at 3-35 P.M.

The Assembly adjourned for Lunch at Five Minutes past Three of the Clock and reassembled at Thirty-five Minutes past Three of the Clock.

[MR. SPEAKER in the Chair.]

(Sri S. Gopala Gowda rose·)

Mr. SPEAKER.—May I know what time does the Hon'ble Member propose to take?

Sri S. GOPALA GOWDA.—Twenty minutes.

Mr. SPEAKER.—We have an hour and twenty minutes before us. I do not know what time the Ministers would have. I will have to adjust. The Hon'ble Member will kindly not exceed 10 minutes.

ಶ್ರೀ ಎಸ್. ಗೋಪಾಲಗೌಡರು (ಸಾಗರ_ಹೊಸನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳವರು 23ನೆಯ ತಾರೀಖಿನ ದಿವಸ ಈ ಸಭೆಯ ಮುಂದೆ . .

Sri L. SIDDAPPA (Channagiri).—Treasury Bench is vacant, Sir.

Janab J. MOHAMED IMAM.—The Treasury Bench is absolutely vacant. We are nervous about the Ministers.

Mr. SPEAKER.—There is quorum. The Ministers are coming in two minutes.

ಶ್ರೀ ಎಸ್. ಗೋಪಾಲಗೌಡರು.—ರಾಜ್ಯಾಂಗದ 207 ಮತ್ತು 230ನೆಯ ವಿಧಿಗಳ ಪ್ರಕಾರ ಈ ಸಭೆಯ ಮುಂದೆ ಪ್ರಸಕ್ತಸಾಲಿನ ಆರ್ಥಿಕ ವಿವರಣೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ಕಳೆದ ಮೂರು ದಿವಸಗಳಿಂದ ಅನೇಕ ಮಾನ್ಯ ಸದಸ್ಯರು ಈ ಆಯವ್ಯಯದ ಅಂದಾಜಿನ ಮೇಲೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಇಲ್ಲಿ ನನಗೆ ಒಂದು ತೊಡಕುಬಂದಿದೆ. ಅದೇನೆಂದರೆ ಪ್ರಸಕ್ತ ಸಾಲಿನ ಅಂಕಿ ಅಂಶಗಳು ಇಲ್ಲಿ ದೊರೆಯುತ್ತಿಲ್ಲ.

On page 77 of the Memorandum the foot-note reads as follows :—

> "The figures for 1951-52 and Budget for 1952-53 are not furnished, since adjustment in respect of Federal Assets and Liabilities have not been effected and the statement has to be compiled under the Revised classification which would be possible in the A. G.'s books in the accounts of 1951-52 onwards."

ಆದ್ದರಿಂದ ಇಲ್ಲಿ ನಮಗೆ ಬೇಕಾದ ಅಂಕಿ ಸಂಖ್ಯೆಗಳಿಲ್ಲದಿರುವುದರಿಂದ ಖಚಿತವಾದ ಒಂದು ಅಭಿಪ್ರಾಯವನ್ನು ಕೊಡತಕ್ಕಂಥಾದ್ದು ಬಹಳ ಕಷ್ಟ. ಇನ್ನು ಈ ಅಂದಾಜುಪಟ್ಟಿಯಲ್ಲಿ 20 ಕೋಟಿ, ಒಂದು ಲಕ್ಷ, 62 ಸಾವಿರ ರೆವೆನ್ಯೂ including grant on account of revenue gap ಎಂದೂ, expenditure on Revenue accounts 21 ಕೋಟಿ, 3 ಲಕ್ಷ 34 ಸಾವಿರ ಎಂದೂ ತೋರಿಸಿದೆ...... ...

Sri K. HANUMANTHAIYA.—May I interrupt for just one minute, Sir? Will I be able to reply to the Budget debate to-day, Sir?

Mr. SPEAKER.—What time would the Ministers require?

Sri K. HANUMANTHAIYA—The Assembly sits till 5 P.M. There is only $1\frac{1}{4}$ hours before us and if you are pleased to give the Government one hour, I think that will suffice.

Mr. SPEAKER—That means the debate can go on, so far as the other Members are concerned, till 4 P.M.

Sri SHANKARA LINGE GOWDA—We have no objection to sit even beyond 5 P.M.

Sri K. HANUMANTHAIYA.—No Sir, it should not exceed 5 P.M.

ಶ್ರೀ ಎಸ್. ಗೋಪಾಲಗೌಡರು.—ಈ ಅಂದಾಜು ಪಟ್ಟಿ ತಯಾರಾಗುವುದಕ್ಕೆ ಮುಂಚೆ ಒಂದು ಅಂದಾಜು ಪಟ್ಟಿ ತಯಾರಾಗಿ ನಮ್ಮ ಮುಂದೆ ಇಡಲ್ಪಟ್ಟಿತ್ತು. ಅದನ್ನೇ ಸ್ವಲ್ಪಮಟ್ಟಿಗೆ ಅನುಕೂಲಕ್ಕೆ ತಕ್ಕಂತೆ ಸುಧಾರಣೆಮಾಡಿ ಈ ಪಟ್ಟಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ಆಹಾರ ಸಬ್ಸಿಡಿಯನ್ನು ಕೊಡದೇಹೋದರೆ ಎಷ್ಟು ಖೋತಾ ಬೀಳುತ್ತದೆಯೆಂಬುದನ್ನು ಹೇಳಿ ಇತ್ತೀಚೆಗೆ ಕೊಡುವುದನ್ನು ಕಡಮೆ ಮಾಡಲಾಗಿದೆಯೆಂದು ಒಂದು ಸಮಾಧಾನ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ನಾನು ಒಂದಂಶವನ್ನು ಹೇಳದೇ ಇರುವುದಕ್ಕಾಗವುದಿಲ್ಲ. ಅದೇನೆಂದರೆ ಬೆಳೆ ಬೆಳೆಯುವವರಿಂದ ಆಹಾರವನ್ನು ಕೊಂಡುಕೊಂಡು ಅನಂತರ ಸರ್ಕಾರ ಅದರ ಬೆಲೆಯನ್ನೇರಿಸಿ ಈಗ ಸಬ್ಸಿಡಿಯನ್ನು ಸರಿತೂಗಿಸಿದೆಯೆಂದು ಸಮಾಧಾನ ಹೇಳಿದ್ದಾರೆ. ಇದನ್ನು ಜನತೆ ಬಹಳ ಸಂತೋಷದಿಂದ ಸ್ವಾಗತಿಸಿದರೇ ಎಂಬುದು ನನಗೆ ತಿಳಿಯದು. ನಾನಂತೂ ಬಹಳ ತೀವ್ರವಾಗಿ ಈ ನೀತಿಯನ್ನು ಖಂಡಿಸಿ ಕಟುವಾಗಿ ಟೀಕೆಮಾಡಿದ್ದೇನೆ. ಈ ವಿಚಾರದಲ್ಲಿ ಸೋಷಿಯಲಿಸ್ಟ್ ಪಕ್ಷ ಶಿಸ್ತಿನಿಂದ ಸತ್ಯಾಗ್ರಹವನ್ನು ಕೂಡ ಮಾಡಿದ್ದಾರೆ. ಆ ಸತ್ಯಾಗ್ರಹದ ಸಂಬಂಧದಲ್ಲಿ ಮಾನ್ಯ ಮಂತ್ರಿಗಳು ಉತ್ತರಕೊಡುತ್ತಾ ಅದು ಅನುಚಿತ, ಆ ರೀತಿ ಮಾಡಿದ್ದು ಸರಿಯಲ್ಲ ಎಂದು ವಿರೋಧಿಸಿ ಮಾತನಾಡಿದ್ದಾರೆ. ಬಹುಶಃ ಆ ಮಂತ್ರಿಗಳು ಸತ್ಯಾಗ್ರಹ ಕಾಲದಲ್ಲಿ ರಾಜಕೀಯ ರಂಗದಲ್ಲಿರಲಿಲ್ಲವೆಂದು ಕಾಣುತ್ತದೆ; ಅವರಿಗೆ ಸತ್ಯಾಗ್ರಹವೆಂದರೇನು ಎಂಬುದೇ ಬಹುಶಃ ತಿಳಿಯದು. ಏಕೆಂದರೆ ಸತ್ಯಾಗ್ರಹದಿಂದಲೇ ದೇಶ ಹೋರಾಟ ಮಾಡಿ ಸ್ವಾತಂತ್ರ್ಯ ಗಳಿಸಿದ್ದು; ಮತ್ತು ಅದಿಲ್ಲದೆ ನಮಗೆ ಯಾವ ನ್ಯಾಯವೂ ದೊರಕುವುದಿಲ್ಲ. ಸತ್ಯಾಗ್ರಹ ಮಾಡುವುದು ಜನತೆಗೆ ಒಂದು ಜನ್ಮಸಿದ್ಧವಾದ ಹಕ್ಕು.

ಈ ಸಂದರ್ಭದಲ್ಲಿ ಆಹಾರದ ಖೋತಾವನ್ನು ಸರಿತೂಗಿಸಬೇಕಾದರೆ ಈಗ ಕೈಕೊಂಡಿರುವ ಕಾರ್ಯಕ್ರಮ ಬಡ್ಜೆಟ್ಟಿನಲ್ಲಿ ಬಹಳ ಖೋತಾ ಕಡಮೆಮಾಡಿದೆ; ಇದು ರಿಯಲಿಸ್ಟಿಕ್ ಬಡ್ಜೆಟ್ ಎಂದು ಹೇಳಿರುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಅಲ್ಲದೆ ಈ ಬಂಡವಾಳಶಾಹಿ ಆರ್ಥಿಕಪದ್ಧತಿಯೇನಿದೆ ಮತ್ತು ಅದು ಅನೇಕ ವರ್ಷಗಳಲ್ಲಿ ಈ ರೀತಿ ಅಂದಾಜುಪಟ್ಟಿ ಮಾಡಿ ದೇಶದ ಪರಿಹಾರಕ್ಕೆ ಎಷ್ಟುಮಟ್ಟಿಗೆ ಒದಗಿಸಿದೆ, ಎಷ್ಟು ಖರ್ಚುಮಾಡಿದ್ದಾರೆ, ಎಷ್ಟು ತೆರಿಗೆ ಹಾಕಬಹುದು ಎಂಬುವನ್ನು ಪರಿಶೀಲಿಸಬೇಕು. ಅದೊಂದು ಸಂಪ್ರದಾಯ. ಈ ಮಾತನ್ನಾಡುವಾಗ ಹಿಂದಿನ ಮಂತ್ರಿಮಂಡಲ ಮತ್ತು ಈಗಿನ ಮಂತ್ರಿಮಂಡಲ ಮಾಡಿರುವಂಥ ಮತ್ತು ಮಾಡಬಹುದಾದಂಥ ಆಯವ್ಯಯವನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಈಗ ಬಂದಿರುವ ಮಂತ್ರಿಮಂಡಲ ಕ್ರಾಂತಿಕಾರಕವಾದ ಬಡ್ಜೆಟ್‌ನ್ನು ನಮ್ಮ ಮುಂದೆ ಇಟ್ಟಿಲ್ಲ. ಇದು ಅಂಥ ಕ್ರಾಂತಿಕಾರಕವಾದ ಬಡ್ಜೆಟ್ ಅಲ್ಲ. ಇಂಡಿಯಾದೇಶದ ಬಡ್ಜೆಟ್ ಸಹ ಕ್ರಾಂತಿಕಾರಕವಾದ ಬಡ್ಜೆಟ್ಟಿನ ಆಧಾರದ ಮೇಲೆ ಹೊರಗೆ ಬಂದಿಲ್ಲ ಎಂದು ಹೇಳುತ್ತೇನೆ.

ಶ್ರೀ ಕೆ. ಹನುಮಂತಯ್ಯನವರು.—ಯಾವಯಾವ ಬದಲಾವಣೆ ಮಾಡಿದರೆ ಕ್ರಾಂತಿಕಾರಕವಾಗುತ್ತದೆಯೆಂದು ಹೇಳಿದರೆ ನಾನಾದರೂ ಮಾಡುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಎಸ್. ಗೋಪಾಲಗೌಡರು.—ಹೇಳುತ್ತೇನೆ. ಆ ಮೇಲೆ ಮಾಜಿ ಮಂತ್ರಿಗಳು ಮಾಜಿ ಮಂತ್ರಿಗಳಿಗೆ ಉತ್ತರ ಕೊಡುವ ರೂಪದಲ್ಲಿ ತಮ್ಮ ಸರ್ಕಾರ ಎಷ್ಟು ಪ್ರಗತಿದಾಯಕವಾಗಿ ಕೆಲಸಮಾಡಿದೆಯೆಂದು ಬಹಳ ಕಾಲ ತೆಗೆದುಕೊಂಡು ಈ ಸಂದರ್ಭದಲ್ಲಿ ದೊಡ್ಡ ಭಾಷಣಮಾಡಿದ್ದಾರೆ. ಅದಕ್ಕೆ ಪ್ರತಿಯೊಂದು ಅಂಶಕ್ಕೂ ಉತ್ತರ ಕೊಡುವ ಗೋಜಿಗೆ ನಾನು ಹೋಗುವುದಿಲ್ಲ. ಆದರೆ ಒಂದು ಅಂಶ ತಿಳಿಸಿದರೆ ತಪ್ಪಾಗಲಾರದು. ಈಗತಾನೆ ಮುಖ್ಯಮಂತ್ರಿಗಳಾಗಿರುವ ಶ್ರೀ ಹನುಮಂತಯ್ಯನವರು ಅಧಿಕಾರಕ್ಕೆ ಬಂದ ತರುಣದಲ್ಲಿ ತಮ್ಮ ಬಹಿರಂಗ ಭಾಷಣದಲ್ಲಿ ಹೇಳಿದ್ದನ್ನು ಕೇಳಿದ್ದೇನೆ. ಸರ್ ಎಂ. ವಿಶ್ವೇಶ್ವರಯ್ಯನವರು, ಸರ್ ಮಿರ್ಜಾ ಇಂಥವರು, ಈ ರೀತಿ ಅಧಿಕಾರ ಮಾಡಿ ಮಂತ್ರಿಮಂಡಲದಲ್ಲಿ ಆದರ್ಶರಾಗಿದ್ದಾರೆಂದು ಹೇಳಿದರೇ ಹೊರತು ತಮ್ಮ ತತ್ಪೂರ್ವದಲ್ಲಿದ್ದ ಮಂತ್ರಿಗಳು ಇಂಥ ಅನುಕೂಲವಾದ ಕೆಲಸಮಾಡಿದ್ದಾರೆಂದು ಒಂದು ಅಕ್ಷರವನ್ನೂ ಹೇಳಲಿಲ್ಲ. ಅಲ್ಲದೆ ಹಿಂದಿನ ಮಂತ್ರಿಮಂಡಲ ಅಧಿಕಾರದಲ್ಲಿದ್ದಾಗ ಶ್ರೀ ಹನುಮಂತಯ್ಯನವರು ಒಂದು ಅವಿಶ್ವಾಸ ಸೂಚನೆ ತಂದಿರುವುದು ಗಮನದಲ್ಲಿದೆ; ಅದನ್ನು ಮರೆಯಬಾರದು. ಆದ್ದರಿಂದ ಈಗ ಬಡ್ಜೆಟ್ಟನ್ನು ತಯಾರಿಸಿರುವ ಪಕ್ಷದವರೆಲ್ಲರೂ ಒಂದಾಗಿ ಎಷ್ಟುಮಟ್ಟಿಗೆ ಈ ಬಡ್ಜೆಟ್ಟಿನ ಲೋಪದೋಷಗಳನ್ನು ಮುಚ್ಚಿಡುವುದಕ್ಕೆ ಪ್ರಯತ್ನಪಟ್ಟರೂ, ನಾನು ಒಂದು ವೇಳೆ ಇದರಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸುವುದಕ್ಕಾಗದಿದ್ದರೂ ಈ ಸಭೆಯ ಹೊರಗಡೆ ತಜ್ಞರು ಮತ್ತು ಅರ್ಥಶಾಸ್ತ್ರಜ್ಞರು ಅದನ್ನು ವಿಮರ್ಶೆಮಾಡದಿರಲಾರರು. ಈ ಆಯವ್ಯಯದಿಂದ ವೆಲ್‌ಫೇರ್ ಸ್ಟೇಟ್ ಅಥವಾ ಕೋ-ಆಪರೇಟೀವ್ ಕಾಮನ್‌ವೆಲ್ತ್ ಸ್ಥಾಪಿಸಬಹುದೆ? ಇದು ನಮ್ಮ ದೇಶದಲ್ಲಿರುವ ಅಜ್ಞಾನ, ಬಡತನ, ನಿರುದ್ಯೋಗ, ಮುಂತಾದ ಸಮಸ್ಯೆಗಳಿಗೆ ಪರಿಹಾರ ಕೊಟ್ಟಿದೆಯೆ? ಎಂಬುದನ್ನು ಪತ್ರಿಕೆಗಳ ಮತ್ತಿತರ ಸಾಧನಗಳ ಮೂಲಕ ಸಾರ್ವಜನಿಕರು ವಿಮರ್ಶಿಸಲು ತಕ್ಕ ಪ್ರಯತ್ನಮಾಡುತ್ತಾರೆಂದು ನಂಬುತ್ತೇನೆ. ಈ ದಿವಸ ಸರ್ಕಾರದ ಪಕ್ಷದವರು ಹಾಗೆ ಹೇಳಿರುವುದು ಸರಿ, ಹೀಗೆ ಹೇಳಿರುವುದು ಸರಿಯಲ್ಲ ಎಂದು ಬರಿಯ ವಿರೋಧವನ್ನು ಮುಚ್ಚಿಡಲು ಪ್ರಯತ್ನಮಾಡುತ್ತಿದ್ದಾರೆ. ಆ ರೀತಿ ಮಾಡಬೇಕಾದ ಅಗತ್ಯ ಕಂಡುಬರಲಿಲ್ಲ.

ಬಡ್ಜೆಟ್ ಮೆಮೊರಾಂಡಂನಲ್ಲಿ ಇನ್ನೊಂದು ಕಡೆ ಹೀಗೆ ಹೇಳಿದೆ:—

> "The deficit could be wiped off in the normal course with decontrol of food, securing further economy of expenditure and by enhancement of revenue in cases where the

level of taxation is considered low."

ಇದರಲ್ಲಿ ತೆರಿಗೆ ಬಹಳ ಕಡಮೆಯಿದೆಯೆಂದು ತಿಳಿದುಬರುವ ಕಡೆ ಹೆಚ್ಚಿಸಬೇಕೆಂದು ಹೇಳಿದೆ. ಆದರೆ ತೆರಿಗೆ ಹೆಚ್ಚಿಸುವುದಕ್ಕೆ ನಾವು ದೂರ ಹೋಗಬೇಕಾಗಿಲ್ಲ. ಆ ಕಾಲ ಬಂದಿದೆ. ಈ ಬಜೆಟ್ಟನ್ನು ಸ್ವಾಗತಮಾಡಿದವರು ಹೊಸ ತೆರಿಗೆ ಹಾಕಿಲ್ಲ, ಅದು ಬಹಳ ಸಂತೋಷಕರ ಎಂದು ಹೇಳಿದ್ದಾರೆ. ಖೋತ ಕಡಮೆಮಾಡಲು ಮತ್ತು ಉತ್ಪತ್ತಿ ಬಹಳವಾಗಿ ಹೆಚ್ಚಿಸಲು ಏರ್ಪಾಡು ಮಾಡಿದೆಯೆಂದೂ ಹೇಳಿದೆ. By penalising the producers and the consumers ಅಂದರೆ ಅವರಿಬ್ಬರನ್ನೂ ಶಿಕ್ಷೆಗೆ ಗುರಿಪಡಿಸಿ ಈ ರೀತಿ ಮಾಡಿದ್ದಾರೆ. ಬೊಂಬಾಯಿ, ಬಿಹಾರ ಮತ್ತು ಡೆಲ್ಲಿ ಪ್ರಾಂತಗಳಲ್ಲಿ ಸಬ್ಸಿಡಿ ತೆಗೆದುಕೊಂಡರೆ ಮೈಸೂರಿನವರು ಬಿಟ್ಟಿದ್ದಾರೆ. ಕೊಚ್ಚಿನವರೂ ತೆಗೆದುಕೊಂಡರು. ಅದೇ ಮೈಸೂರಿಗೆ ನೆಹ್ರೂರವರು ಒಂದು ಸರ್ಟಿಫಿಕೇಟ್ ಕಳುಹಿಸಿ, ಇಲ್ಲಿ ಮುಖ್ಯ ಮಂತ್ರಿಗಳು ಇಟ್ಟ ಹೆಜ್ಜೆ ದಿಟ್ಟವಾದುದು, ಅದು ದೇಶಕ್ಕೇ ಒಂದು ಮಾರ್ಗದರ್ಶಕ ಎಂದು ಹೇಳಿದರು.

Sri H. SIDDAVEERAPPA.—Compared with other States, the rates here are lower than anywhere else in India. I challenge the Hon'ble Member to disprove it.

ಶ್ರೀ ಎಸ್. ಗೋಪಾಲಗೌಡರು.—ಈ ರೀತಿ ಸಬ್ಸಿಡಿಯನ್ನು ಕೇಂದ್ರದಿಂದ ತೆಗೆದುಕೊಳ್ಳುವುದಕ್ಕೆ ಅಸಹಾಯರಾಗಿದ್ದಾರೆ. ಧಾನ್ಯವನ್ನು ಬೆಳೆಯತಕ್ಕ ರೈತರು ಬೋನಸ್ ತೆಗೆದುಕೊಳ್ಳಲಿಲ್ಲ. ನಾಲ್ಕು ಸಲ ದರವನ್ನು ಹೆಚ್ಚಿಸಿದರೂ ಕೂಡ ಪ್ರೊಕ್ಯೂರ್‌ಮೆಂಟ್ ಆದಮೇಲೆ ಹೆಚ್ಚಿಸುವುದು ಒಂದು ನಿಯಮವಾಗಿದೆ. ರೈತರಿಗೆ ಬೋನಸ್ ಕೊಡಲಿಲ್ಲ.

ಮೂರನೆಯದು, ಕೊಳ್ಳುವವರಿಗೆ ಯಾವ ದರದಲ್ಲಿ ಒದಗಿಸಿದ್ದೇವೆ ಎಂದು ಹೇಳಿ ತೋರಿಸಿರುವ ರೀತಿಯಲ್ಲಿ, 3 ಕೋಟಿ ರೂಪಾಯಿಗಳು ಆಹಾರ ಕೊಳ್ಳುವುದಕ್ಕೆ ಅಡ್ವಾನ್ಸ್ ಎಂದು ನಿಂತಿದೆ. ಕೊಳೆಯುವುದು, ಮಾರಾಟವಾಗುವುದು ಎಲ್ಲಾ ಹೋಗಿ ಅಖೈರಾಗಿ ಎಷ್ಟು ದುಡ್ಡು ಉಳಿಯುತ್ತದೆ ಎಂಬುದನ್ನು ನೋಡಬೇಕಾಗಿದೆ.

Mr. SPEAKER.—A day is set apart for discussing the food policy. The Member can give details then. The House was very eager to know from him whether he is suggesting any alternative constructive proposal. That is why I am giving him a chance.

ಶ್ರೀ ಎಸ್. ಗೋಪಾಲಗೌಡರು.—ದೇಶದಲ್ಲಿ ಮೊದಲನೆಯದು ಭೂಮಿಯ ಒಂದು ಸಾಧಾರಣೆಯನ್ನು ಮಾಡತಕ್ಕದ್ದು. ಇವೊತ್ತು ತಾನೆ ವರದಿ ಬರುತ್ತಾ ಇದೆ. ವಿ. ಟಿ. ಕೃಷ್ಣಮಾಚಾರಿಯವರ ವರದಿ ಎಷ್ಟುಮಟ್ಟಿಗೆ ಕಾರ್ಯಗತವಾಗುತ್ತದೆ ಎಂಬುದನ್ನು ದೇಶ ಕಾದು ನೋಡಬೇಕು. ಅದು ಕ್ರಾಂತಿಕಾರಕ ಬದಲಾವಣೆ ಎಂದು ಹೇಳುತ್ತೇನೆ. ಇನ್ನೊಂದು, ನಮ್ಮ ದೇಶದಲ್ಲಿ...

Sri K. HANUMANTHAIYA.—That is, the land policy. ಬಜೆಟ್ ವಿಚಾರ ಹೇಳಿ.

ಶ್ರೀ ಎಸ್. ಗೋಪಾಲಗೌಡರು.—ಈ ಬಜೆಟ್‌ನಲ್ಲಿ ಒಂದೂ ಅಂಕಿ ಸಂಖ್ಯೆ ಕೊಡದೇ ಇರುವುದರಿಂದ, ಹೆಚ್ಚು ಅಂಕಿ ಸಂಖ್ಯೆಗಳ ಮೇಲೆ ಟೀಕೆ ಇಲ್ಲ ಎಂದು ಮೊದಲೇ ಹೇಳಿಕೊಂಡಿದ್ದೇನೆ. ನಮ್ಮ ದೇಶದಲ್ಲಿರತಕ್ಕ ಒಂದು ಆರ್ಥಿಕ ಪರಿಸ್ಥಿತಿಯನ್ನು ನೋಡುವುದಾದರೆ ಇದು ಒಂದು ವಸಾಹತುವಾಗಿತ್ತು. ಇಲ್ಲಿ ಮೊದಲನೆಯದು ವ್ಯವಸಾಯ, ಎರಡನೆಯದು ಕೈಗಾರಿಕೆ. ಕೈಗಾರಿಕೆಯೂ ಸಹ ಪೂರ್ಣವಾಗಿ ಬೆಳವಣಿಗೆಯಾಗಿಲ್ಲ ಎಂಬುದು ನಮಗೆ ಗೊತ್ತು. ಜೊತೆಗೆ ಸಂಖ್ಯೆ ಇಲ್ಲ. ಇವೊತ್ತು ನಮ್ಮ ಮುಂದಿರತಕ್ಕ ಪ್ಲಾನ್‌ನಲ್ಲಿ ಮಿಕ್ಸೆಡ್ ಎಕಾನಮಿ ಎಂದು ಹೇಳಿದ್ದಾರೆ. ಅದು ಎಷ್ಟುಮಟ್ಟಿಗೆ ವ್ಯವಸಾಯವನ್ನು ಪ್ರಗತಿಯ ಹಾದಿಯಲ್ಲಿ ತೆಗೆದುಕೊಂಡು ಹೋಗುತ್ತದೆ ಎಂಬುದು ಅನುಮಾನಾಸ್ಪದವಾದದ್ದು. ಇನ್ನು ಯಾವ ಒಂದು ಕಾರ್ಯವನ್ನು, ಕೈಗಾರಿಕೆಯನ್ನು, ಉದ್ಯಮವನ್ನು ಕೈಗೊಳ್ಳಬೇಕಾದರೂ ಬಂಡವಾಳ ಬೇಕು ಎಂದು ಹೇಳಿ ನಮ್ಮ ದೃಷ್ಟಿಯಿಂದ ಕ್ಯಾಪಿಟಲಿಸ್ಟ್‌ನ್ನು ಇಂಟೆನ್ಸೀವ್ ಆಗಿ ನೋಡುತ್ತೇವೆ. ಅದಕ್ಕೆ ಬದಲಾಗಿ ದೇಶದಲ್ಲಿರತಕ್ಕ ಒಂದು ಸಂಪತ್ತು ಎಂದರೆ ಮಾನವ ಸಂಪತ್ತು. ಅದಕ್ಕೇ ಲೇಬರ್ ಇಂಟೆನ್ಸೀವ್ ಆಗಬೇಕೆಂಬುದು ಒಂದು ಸೂಚನೆ. ಈಗತಾನೆ ಮಾಜಿ ಮಂತ್ರಿಗಳು ಉತ್ತರ ಕೊಡುತ್ತಾ ನಮ್ಮ ಜನ ಎಷ್ಟುಮಟ್ಟಿಗೆ ಸಮರ್ಥರಾಗಿದ್ದಾರೆ, ದೇಶದಲ್ಲಿ ಕೈಗಾರಿಕೆಗಳು ಎಷ್ಟುಮಟ್ಟಿಗೆ ಅಭಿವೃದ್ಧಿ ಹೊಂದಿವೆ ಎಂಬ ವಿಚಾರ ಹೇಳಿದರು. ಪ್ರಗತಿದಾರಿಯಲ್ಲಿ ಹೋಗಿರುವುದಕ್ಕೆ ಮಾನ್ಯುಮೆಂಟ್ಸ್ ಆಗಿ ಊರು ಊರಿನಲ್ಲಿರತಕ್ಕ ಮಲ್ಟಿಪರ್‌ಪಸ್ ಕೋ-ಆಪರೇಟೀವ್ ಸೊಸೈಟಿಗಳು, ಗ್ರೋ-ಮೋರ್-ಫುಡ್ ಸ್ಕೀಮುಗಳು ಇವೇ ಸಾಕು, ಜನತೆ ತೀರ್ಮಾನ ಕೊಡಬಹುದು; ಎಷ್ಟು ಯಶಸ್ವಿಯಾಗಿ ದೇಶದ ಹಣವನ್ನು ಪ್ರಗತಿದಾಯಕವಾಗಿ ಉದ್ಯಮಗಳಲ್ಲಿ ಹಾಕಿ ಜನರ ಬಡತನ ಹೋಗಲಾಡಿಸಿ, ಕೈಗಾರಿಕೋದ್ಯಮವನ್ನು ರೂಢಿಸಿದ್ದಾರೆ ಎಂಬುದು ಗೊತ್ತಾಗುತ್ತದೆ.

ಇನ್ನು ಪಾನನಿರೋಧದ ವಿಚಾರ. ಇನ್ನೊಂದು ದಿವಸವನ್ನೇ ಅದಕ್ಕೆ ಇಟ್ಟಿರಬೇಕು. ಅದು ಪೂರ್ಣ ಯಶಸ್ವಿಯಾಗುವುದು ಅಸಾಧ್ಯ ಎಂಬುದಕ್ಕೆ ನಿಯೋಗಿಯವರ ಸಮಿತಿ ಒಂದು ತೀರ್ಮಾನಕ್ಕೆ ಬಂದಿದೆ. ಆ ಒಂದು ತೀರ್ಮಾನದ ಪ್ರಕಾರ ಈಗ ಯಾವ ರೀತಿ ಪಾನನಿರೋಧ ನಡೆಸಿಕೊಂಡು ಹೋಗುತ್ತಾ ಇದ್ದೇವೆಯೋ ಅದು ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ, ಮಾನವನ ಸ್ವಭಾವಕ್ಕೆ ವಿರೋಧವಾಗಿ ನಡೆದಂತೆ ಆಗುತ್ತದೆ ಎಂದು ಸೂಚನೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ನಾನು ನನ್ನ ಜೀವನದಲ್ಲೇ ಮೊದಲನೆಯ ಸಲ ಇಂಥ ಒಂದು ಆಯವ್ಯಯ ಪಟ್ಟಿಯನ್ನು ಇಡುತ್ತಾ ಇದ್ದೇನೆ, ಅದು ನನ್ನ ದೃಷ್ಟಿಯಿಂದ, ಎಂದು ಹೇಳಿಕೊಂಡು ಅಂದಾಜು ಪಟ್ಟಿಯನ್ನು ಮಂಡಿಸಿದರು. 'ರಾಜಪ್ರಮುಖರ ಭಾಷಣದಲ್ಲಿ ಇಂಥಾ ವಿವರಗಳು ಏನೂ ಇರಬಾರದು ಬರಿಯ ನೀತಿ, ತತ್ವಗಳನ್ನು ಮಾತ್ರ ಸ್ವಲ್ಪ ಮಟ್ಟಿಗೆ ವಿಮರ್ಶೆಮಾಡಿ ಅಷ್ಟಕ್ಕೆ ಬಿಡುತ್ತಾರೆ' ಎಂದು ಹೇಳಿ ತಮ್ಮ ಭಾಷಣದಲ್ಲಿ ಹೇಳಿದರು. ಹಾಗೆಯೇ ತಮ್ಮ ಭಾಷಣದಲ್ಲಿ ಹೆಚ್ಚು ವಿವರವಾಗಿ ಹೇಳಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡುತ್ತಾ ಶತಮಾನಗಳ ಗುಲಾಮತನ ಮತ್ತು ಇತರ ವಿಚಾರಗಳೊಡನೆ ಹೋರಾಟಮಾಡಿದ್ದೇವೆ ಎಂದು ಹೇಳುತ್ತಾರೆ. ಇವೊತ್ತು ಡಾಮಿನೇಷನ್ ಮತ್ತು ಎಕ್ಸ್‌ಪ್ಲಾಯಿಟೇಷನ್ ಇವೆರಡರ ಶೋಷಣೆಯಿಂದಲೂ ಸಾಮಾನ್ಯ ಜನ ತಪ್ಪಿಸಿಕೊಳ್ಳುವುದಕ್ಕೆ ಆಗಿಲ್ಲ ಎಂಬುದನ್ನು ನೋಡಬೇಕು.

(ಶ್ರೀ ಎಸ್. ಗೋಪಾಲಗೌಡರು.)

ನಮ್ಮಲ್ಲಿ ಈಗ ಏಕನಾಯಕ ತತ್ವ ಕೊನೆಗೊಂಡಿದ್ದರೂ ಕೂಡ ಇವೊತ್ತು ನಾವು ಈ ಬಡತನ ಮತ್ತು ಹಣದ ಒಂದು ಕೊರತೆಯಿಂದ ತೊಳಲುತ್ತಿದ್ದರೂ ಕೂಡ ರಾಜಪ್ರಮುಖರಿಗೆ 24 ಲಕ್ಷ ರೂಪಾಯಿಗಳ ಒಂದು ಮಾಸಾಶನ ಕೊಡುತ್ತಾ ಇದ್ದೇವೆ.

Sri K. HANUMANTHAIYA.—I will give you correct figures. We are giving him more.

ಶ್ರೀ ಎಸ್. ಗೋಪಾಲಗೌಡರು.—ನನ್ನ ಒಂದು ದೃಷ್ಟಿಯಲ್ಲಿ ಅದನ್ನೂ ಕೂಡ ನಿಲ್ಲಿಸಬೇಕಾದದ್ದು ದೇಶದ ಹಿತದೃಷ್ಟಿಯಿಂದ ಕ್ಷೇಮ ಎಂದು ಹೇಳಬೇಕಾಗಿದ್ದೆ. ಇವೊತ್ತು ನಮಗೆ ಅಂಕಿ ಸಂಖ್ಯೆಯ ಕೊರತೆ ಬಹಳವಾಗಿದೆ.

> "The Five-year Plan for Mysore can be implemented only to the extent to which the Government of India will render financial assistance. But we are anxious to take all steps to implement the Five-year Plan."

ಎಂದು ಹೇಳಿದ್ದಾರೆ.

ಅದರಲ್ಲಿ ಕೇಂದ್ರದವರು ಎಷ್ಟುಮಟ್ಟಿಗೆ ನಮ್ಮ ಸಹಾಯಕ್ಕೆ ಬರುತ್ತಾರೆ ಎಂಬುದು ಒಂದು ಅಂಶ. ಇನ್ನು ನಾವು ಈ ಐದು ವರ್ಷದ ಪ್ಲಾನ್‌ನಲ್ಲಿ ಏನಿನೆಯೋ ಅದನ್ನು ಕಾರ್ಯಗತಮಾಡಬೇಕಾದರೆ, ಹೊರಗಡೆಯಿಂದ ನಮಗೆ ಸಹಾಯ ಬಂದು ಕಾರ್ಯಗತಮಾಡುತ್ತೇವೆ ಎಂದರೂ ಬಹುಶಃ ಅನೇಕ ಕಾರ್ಯಕ್ರಮಗಳು ಕಾರ್ಯಕ್ರಮದಲ್ಲೇ ಉಳಿಯಬಹುದು, ಕಾರ್ಯಗತವಾಗದೇ ಹೋಗಬಹುದು. ಇವೊತ್ತು ಭದ್ರಾ ಪ್ರಾಜೆಕ್ಟ್ ಇದೆ, ಅದಕ್ಕೆ ಇವೊತ್ತಿನ ರೀತಿಯಲ್ಲಿ ಹಣ ಒದಗುತ್ತಾ ಹೋದರೆ $1\frac{3}{8}$ ಶತಮಾನಬೇಕು ಇದೇ ರೀತಿ ತುಂಗಾ ಪ್ರಾಜೆಕ್ಟು ಹೊನ್ನೆಮರಡು ಪ್ರಾಜೆಕ್ಟು ಇನ್ನೂ ಅನೇಕ ಪ್ರಾಜೆಕ್ಟುಗಳು ಹಣದ ಕೊರತೆಯಿಂದ ನಿಂತುಹೋಗುವ ಪರಿಸ್ಥಿತಿ ಬಂದಿದೆ.

4 P. M.

ನಾವು ಮುಖ್ಯವಾಗಿ ಯಾವದೊಂದು ಕಾರ್ಯಕ್ರಮವನ್ನು ಕಾರ್ಯಗತಮಾಡಬೇಕಾದರೂ ಜನತೆಯ ವಿಶ್ವಾಸ, ಸಹಕಾರ ಅದಕ್ಕೆ ದೊರೆಯದೆ ಹೋದರೆ ಅದು ಸಾಧ್ಯವಾಗುವುದಿಲ್ಲವೆಂದು ತಿಳಿಯಬೇಕು. ಇವೊತ್ತು ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಯ ಯೋಜನೆಯೇ ಆಗಲಿ, ಗ್ರೋ-ಮೋರ್-ಫುಡ್ ಯೋಜನೆಯೇ ಆಗಲಿ ಮತ್ತು ಇಂಥ ಅನೇಕ ಯೋಜನೆಗಳನ್ನು ಮಾಡಿಯೂ ಉಪಯೋಗವಿಲ್ಲದೆಹೋಗಿ ನಿರರ್ಥಕವಾಗಿರುವುದಕ್ಕೆ ಕಾರಣ, ತಾವು ಜನತೆಯ ಸಹಕಾರವನ್ನು ಪಡೆಯದೆ ಇದ್ದುದರಿಂದ ಅವು ಸರಿಯಾಗಿ ನಡೆಯದೇಹೋದವು ಎಂದು ಗೊತ್ತಾಗಿದೆ. ಆದ್ದರಿಂದ ಮುಂದಾದರೂ, ಸರ್ಕಾರದವರು ಯಾವ ಕಾರ್ಯಕ್ರಮವನ್ನು ಕೈಕೊಳ್ಳಬೇಕಾದರೂ ಜನತೆಯಲ್ಲಿ ನಿಕಟ ಸಂಬಂಧ ಹೊಂದಿ ಅವರ ಉತ್ಸಾಹವನ್ನು ಕುದುರಿಸಿದ ಹೊರತು, ಎಷ್ಟೇ ಹಣವನ್ನು ಸುರಿದರೂ ಅವು ಸಾಕಾದಷ್ಟು ಫಲವನ್ನು ಕೊಡುವುದಿಲ್ಲವೆಂಬ ಅಂಶವನ್ನು ಮನಗಾಣಬೇಕೆಂದು ನಾನು ಒತ್ತಿ ಹೇಳುತ್ತೇನೆ.

ಇವೊತ್ತು ತಾವು ಕಮ್ಯೂನಿಟಿ ಪ್ರಾಜೆಕ್ಟುಗಳೆಂದು ಸೊರಬ, ಶಿಕಾರಿಪುರ ತಾಲ್ಲೂಕುಗಳಲ್ಲಿ ಕೈಕೊಳ್ಳಬೇಕೆಂದು ಕೆಲಸ ನಡೆಯಿಸುತ್ತಿದ್ದೀರಿ. ಈ ಬಗ್ಗೆ ಯಾವ ಆಧಾರದಮೇಲೆ ಸೊರಬ, ಶಿಕಾರಿಪುರ ತಾಲ್ಲೂಕುಗಳನ್ನು ಆರಿಸಿಕೊಂಡರೋ ಗೊತ್ತಿಲ್ಲ. ಬಹುಶಃ ಮಲೆನಾಡಿನ ಪ್ರದೇಶಗಳನ್ನು ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಅಂದಮಾತ್ರಕ್ಕೇ ಸೊರಬಕ್ಕಾಗಲಿ ಶಿಕಾರಿಪುರಕ್ಕಾಗಲಿ ಈ ಸ್ಕೀಮನ್ನು ಕೊಡಕೂಡದೆಂದೇನೂ ನನ್ನ ಅಭಿಪ್ರಾಯವಲ್ಲ. ಆದರೆ, ಇಂಥ ವಿಷಯಗಳಲ್ಲಿ ಮಲೆನಾಡಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕಾದದ್ದು ಸೂಕ್ತ. ಇದನ್ನು ಕೂಡ ತಾವು ಕಾರ್ಯಗತಮಾಡಬೇಕಾದರೆ ತಮಗೆ ಅಲ್ಲಿನ ಜನರ ಪೂರ್ಣ ಸಹಕಾರ ದೊರೆಯಬೇಕು.

ಆಮೇಲೆ, ಕ್ರಾಂತಿಕಾರಕ ಬದಲಾವಣೆಗಳೇನೆಂಬುದನ್ನು ಸೂಚಿಸಬೇಕೆಂದು ಅವರು ಹೇಳಿದರು. ಈ ಹೊತ್ತು ಭೂಮಿಗಾಗಿ ಎಷ್ಟು ವರ್ಷಗಳಿಂದ ನಮ್ಮ ದೇಶದಲ್ಲಿ ಹೋರಾಟ ನಡೆಯುತ್ತಿದೆ! ಆ ರೀತಿಯಾಗಿ ಒಮ್ಮೆ ಹೋರಾಟ ನಡೆದಾಗ—ಕಾಗೋಡಿನಲ್ಲಿ ಜಮೀನ್ದಾರರುಗಳು ರೈತರಿಂದ ಭೂಮಿಯನ್ನು ಕಿತ್ತುಕೊಂಡು ಅವರನ್ನು ಹೊರಕ್ಕೆ ತಳ್ಳಿದರೂ ಕೂಡ ಆ ಹೊಡೆದಾಟವನ್ನು ನೋಡಿಯೂ ಕಾಂಗ್ರೆಸ್ ಸರ್ಕಾರವು ಅದನ್ನು ತುಳಿಯುವುದಕ್ಕೆ ಮುಂದೆ ಬಂದಿದೆಯಲ್ಲಾ! ಇದೆಷ್ಟು ವಿರೋಧಾಭಾಸವನ್ನು ಸೂಚಿಸುತ್ತದೆಂಬುದು ನಿಮಗೇ ಗೊತ್ತಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಇವೊತ್ತೇನೂ ಹಾಗೆ ಮುಂದಕ್ಕೆ ಬಂದಿಲ್ಲ! ತುಳಿಯುತ್ತಲೂ ಇಲ್ಲ! 5 ಜನರ ಹೊರತು ಬಾಕಿಯವರ ಮೇಲಿನ ಕೇಸನ್ನೆಲ್ಲಾ ಈಗಾಗಲೇ withdraw ಮಾಡಬೇಕೆಂದುಮಾಡಿದ್ದೇವೆ.

(ಶ್ರೀ ಎಸ್. ಗೋಪಾಲಗೌಡರು ತಮ್ಮ ಭಾಷಣವನ್ನು ಮುಂದುವರಿಸಲು ಪ್ರಾರಂಭಿಸಿದರು.)

Mr. SPEAKER.—Your time is over. You wanted 20 minutes. I have given you 23 minutes. I now call upon the Hon'ble Ministers to reply.

(Several Members rose to speak).

Mr. SPEAKER—I am helpless. What can I do?

Sri K. HANUMANTHAIYA (Leader of the House).—Sir, my Hon'ble friend Sri N. C. Nagiah Reddy, who comes from Kolar, it seems, wants to reply to some of the grievances that were mentioned by some of the Members. He may be allowed some time to reply and then I will speak.

Mr. SPEAKER.—So, he will be the last speaker.

ಶ್ರೀ ಎನ್. ಸಿ. ನಾಗಯ್ಯರೆಡ್ಡಿಯವರು (ಗೋರಿಬಿದನೂರು).—ಅಧ್ಯಕ್ಷರೇ, ನಾನು ಈ ಬಡ್ಜೆಟ್ಟಿನಮೇಲೆ ಮಾತನಾಡುವುದು ಅನಾವಶ್ಯಕವೆಂದು ತಿಳಿದುಕೊಂಡಿದ್ದೆ. ಅದರಲ್ಲೂ ನಮ್ಮ ಈಗಿನ Opposition ಪಾರ್ಟಿಯವರು ಮಾತನಾಡಿದಮೇಲೆ ಅಂತೂ ಕೇವಲ ಅನಾವಶ್ಯಕವೆಂದೇ ನಾನು ಭಾವಿಸಿದೆ. ಏಕೆಂದರೆ, ಅವರುಗಳು ಇನ್ನೂ, ಪಾಪ, ಎಳೆ ಮನುಷ್ಯರು, ನನ್ನನ್ನಾದರೂ ಸಾಲ ತೆಗೆದುಕೊಂಡಿದ್ದರೆ ಒಳ್ಳೆಯದಾ

ಗುತ್ತಿತ್ತೆಂದು ನನಗೆ ತೋರಿತು. ಹಿಂದೆ ನಾವು opposition ನಲ್ಲಿದ್ದಾಗ ನಾವು ಮಾತನಾಡಿದೆವು ಅಂದರೆ ಜಗ ಅಲ್ಲಾಡುತ್ತಿತ್ತು ! ಈಗೇನು, ಬೆಂಚೂ ಸಹ ಅಲುಗಾಡುವುದಿಲ್ಲ. ಆದ್ದರಿಂದ ನಮ್ಮ ಮಂತ್ರಿಗಳು ಕೊಡತಕ್ಕ ಉತ್ತರಗಳೇ ಸಾಕೆಂದು ನಾನು ತಿಳಿದಿದ್ದೆ.

ಈಗ ನನ್ನ ಮಿತ್ರರು ಕೋಲಾರದ ವಿಷಯ ಹೇಳುತ್ತಾ ಕ್ಷಾಮ, ಕ್ಷಾಮ ಎಂದು ಬಹಳವಾಗಿ ಹೇಳಿಬಿಟ್ಟರು. ಆ ವಿಷಯದಲ್ಲಿ ನಾನು ಸ್ವಲ್ಪ ಮಾತನಾಡದೆ ಹೋದರೆ ಲೋಪವಾದೀತೆಂದು ನಾಲ್ಕು ಮಾತುಗಳನ್ನು ಹೇಳಲು ನಿಂತಿದ್ದೇನೆ.

ಕೋಲಾರಕ್ಕೆ ಕ್ಷಾಮಗಳು ಕೇವಲ ಅಪರೂಪವೇನೂ ಅಲ್ಲ. ಆಗಾಗ್ಗ 4 ವರ್ಷಕ್ಕೆ ಒಂದು ಸಾರಿ, 5 ವರ್ಷಕ್ಕೊಂದುಸಾರಿ ಬರುತ್ತಲೇ ಇರುತ್ತದೆ. ಆದರೆ ಈ ಸಾರಿ ಏನು ವಿಶೇಷವೆಂದರೆ, ಕ್ಷಾಮಬಂದರೂ ನಮ್ಮ ಸಾರ್ವಜನಿಕರು ಸಕಾಲದಲ್ಲಿ ಸರ್ಕಾರದ ಬೆಂಬಲವನ್ನು ಹೊಂದಿದ್ದಕ್ಕಾಗಿ ಸರ್ಕಾರದವರನ್ನು ವಂದಿಸಬೇಕಾಗಿದೆ. ಸರ್ಕಾರದವರು ಈ ವಿಷಯದಲ್ಲಿ ಏನೂ ಮಾಡಿಲ್ಲವೆಂದು ಹೇಳಿದರೆ ಮಹಾ ಪಾಪ ! ಹಿಂದೆ ಇಂಥ ಕ್ಷಾಮಗಳು ಬಂದಾಗ ನಾನೂ ನೋಡಿದ್ದೇನೆ. ನಾನು ಖಂಡಿತವಾಗಿ ಹೇಳುತ್ತೇನೆ, ಈ ಸರ್ಕಾರ ಈ ಬಗ್ಗೆ ಖರ್ಚನ್ನು ಬೇಡವೆಂದು ಹೇಳುವಷ್ಟು ಮಾಡಿದ್ದಾರೆ. ಚಿಂತಾಮಣಿಯಲ್ಲಿ 25,000 ರೂಪಾಯಿಗಳನ್ನು ಖರ್ಚುಮಾಡಿ ಎಂದು ಸರ್ಕಾರದವರು ಹೇಳಿದ್ದರು. ಅಲ್ಲಿನ ಅಮಲ್ದಾರರು ಇನ್ನೂ ಮುಂದೆಹೋಗಿ 85,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಬಾವಿಗಳಿಗೆ ಸಬ್ಸಿಡಿ ಮುಂತಾದುವುಗಳಿಗಾಗಿ 85 000 ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಾವ ಗೋರಿಬಿದನೂರಿಗೆ ಕ್ಷಾಮ ನಿವಾರಣಾ ಫಂಡಿನಿಂದ 55,000 ರೂಪಾಯಿಗಳನ್ನು ಕೊಡಬೇಕೆಂದಿದ್ದರೆ 1½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರೀತಿ ಸರ್ಕಾರದವರು ಸ್ವಲ್ಪ ಹಿಡಿತ ಮಾಡಿ ಕೊಡದೆ ಇದ್ದರೂ ಅಲ್ಲಿನ ಅಧಿಕಾರಿಗಳು ಬಹಳ ಮುತುವರ್ಜಿಯಿಂದ ಕೆಲಸ ಮಾಡಿದ್ದಾರೆ. ಇದಕ್ಕಾಗಿ ಅವರುಗಳನ್ನು ಬಹಳ ಮಟ್ಟಿಗೆ ವಂದಿಸಬೇಕಾಗಿದೆ. ಅದೂ ದಿನವೊಂದಕ್ಕೆ 25,000 ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ ! ಹಣವನ್ನು ಸುಮ್ಮನೆ ಸುರಿಯುತ್ತಿದ್ದಾರೆ !!. ಇನ್ನೂ ಒಂದು ವಿಷಯವೇನೆಂದರೆ, 25,000 ರೂಪಾಯಿಗಳೆಂದರೆ, ಬರೀ ರೂಪಾಯಿಗಳನ್ನು ಮಾತ್ರ ಕೊಡುತ್ತಿಲ್ಲ. ದವಸವನ್ನೂ ಒದಗಿಸುತ್ತಿದ್ದಾರೆ. ಪ್ರತಿಯೊಬ್ಬರೂ ಎಷ್ಟು ಕೂಲಿಮಾಡುತ್ತಾರೋ ಆ ಕೂಲಿಗೆ ತಕ್ಕಂತೆ ದವಸ ಕೊಡುತ್ತಿದ್ದಾರೆ.

ಹೀಗಿರುವಾಗ ಯಾವುದೋ ಒಂದು ಬಾವಿ ತೋರಿಸಿ ಅದಕ್ಕೇನೂ ಕೊಟ್ಟಿಲ್ಲ ಎಂದು ಸುಮ್ಮನೆ ಹೇಳುತ್ತಿದ್ವರೆ, ಹೇಗೆ ? ಸರ್ಕಾರದವರು 20 ಲಕ್ಷ ರೂಪಾಯಿಗಳನ್ನು ಬಾವಿಗಳನ್ನು ತೋಡಿಸುವುದಕ್ಕೆ ಕೊಟ್ಟಿದ್ದಾರೆ. ಎಷ್ಟೋ ಬಾವಿಗಳಿಗೆ ಒಂದೊಂದಕ್ಕೂ ಸಾವಿರ ರೂಪಾಯಿನಂತೆ ಕೊಟ್ಟಿದ್ದಾರೆ. ಅವರು ಹೇಳಿದ ಬಾವಿಗೂ 500 ರೂಪಾಯಿ ಕೊಟ್ಟಿದ್ದಾರೆಂದು ನಾನು challenge ಮಾಡಿ ಬೇಕಾದರೆ ಹೇಳುತ್ತೇನೆ. ಬಹುಶಃ ಅವರು ಆ ಬಾವಿಯನ್ನು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಹೀಗಿರುವಲ್ಲಿ ಮಾಡಿರತಕ್ಕ ಕಾರ್ಯವನ್ನು ಇಲ್ಲವೇ ಇಲ್ಲವೆಂದು ಹೇಳುವುದು ಮಹಾ ಪಾಪ. ಇಷ್ಟೇ ಅಲ್ಲದೆ ಹುಲ್ಲನ್ನೂ ಕೂಡ ವ್ಯಾಗನ್ ಒಂದಕ್ಕೆ ಒಂದು ಟನ್ನು, ಎರಡು ಟನ್ನು ಹಿಡಿಯುವಂಥವು ದಿನವೊಂದಕ್ಕೆ 10—15 ವ್ಯಾಗನ್ನುಗಳನ್ನು ಕಳುಹಿಸುತ್ತಿರಲಾಗಿದೆ. ಅದರಲ್ಲೂ ಬಾಗೇಪಲ್ಲಿಗೇ ಒಂದು ಭಾಗ, ಗೋರಿಬಿದನೂರು ಮತ್ತು ಮಿಕ್ಕ ತಾಲ್ಲೂಕುಗಳಿಗೇ ಒಂದು ಭಾಗ ಎಂದು ಹಂಚುತ್ತಿದ್ದಾರೆ. ಬಾಗೇಪಲ್ಲಿಗೆ ½ ಭಾಗದಷ್ಟು, ಗೋರಿಬಿದನೂರಿಗೆ 1/6 ಭಾಗದಷ್ಟು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ—ಈ ಗ್ರಾಮಗಳಿಗೆ 1/3 ಭಾಗ—ಎಂದು ಕಳುಹಿಸಿಕೊಡುತ್ತಿದ್ದರೂ ಇಲ್ಲವೆಂದು ಹೇಳಿದರೆ, ಸರ್ಕಾರದವರು ಇನ್ನೇನುಮಾಡಬೇಕಾಗಿತ್ತೋ ತಿಳಿಯದು. ಮಾಡಿರುವ ಕೆಲಸವನ್ನು ಇಲ್ಲವೆಂದಾಗಲೀ, ಸುಮ್ಮನೆ ಟೀಕಿಸುವುದಾಗಲಿ ಒಳ್ಳೆಯದಲ್ಲ. ಸಣ್ಣ ಪುಟ್ಟ ಅಧಿಕಾರಿಗಳು ಇಷ್ಟು ಮಾಡಿಯೂ ವ್ಯರ್ಥವಾಯಿತಲ್ಲಾ ಎಂದು ವ್ಯಸನಪಡುತ್ತಾರೆ. ನಾನೇ ಖುದ್ದು ಕೆಲವು ಸ್ಥಳಗಳಿಗೆ ಹೋಗಿ ನೋಡಿದ್ದೇನೆ. ರಿಲೀಫ್ ಕೇಂದ್ರಗಳಿಗೆ ಭೇಟಿ ಕೊಟ್ಟಿದ್ದೆ. ಆ ಜನರು ಎಲ್ಲವೂ ಸರಿಯಾಗಿದೆಯೆಂದು ಹೇಳಿ ಕೂಲಿಗೆ ಸರಿಯಾಗಿ ದವಸ ಕೊಡಿಸಿ ಎಂದು ಹೇಳಿದರು. ಅದನ್ನು ಮಾಡಿಕೊಟ್ಟೆವು. ಆಮೇಲೆ ಕೊಡುತ್ತಿರುವ ಕೂಲಿ ಸಾಲದು ಎಂದು ಹೇಳಿದರು. ಮಾರುದಿನವೇ ಹೆಚ್ಚಿಸಿದ್ದೇವೆ. ಹುಲ್ಲನ್ನು ಒದಗಿಸುವುದರಲ್ಲೂ 120 ರೂಪಾಯಿಗೆ ಕೊಂಡ ಹುಲ್ಲನ್ನು 85 ರೂಪಾಯಿಗೆ ಸಬ್ಸಿಡೈಸ್‌ಮಾಡಿ ಒದಗಿಸಿದ್ದೇವೆ. ಯಾವ ಸರ್ಕಾರ, ಯಾವ ಕಾಲದಲ್ಲಿ ತಾನೆ ಇಷ್ಟುಮಟ್ಟಿಗೆ ರೈತನ ಸಂರಕ್ಷಣೆಗೆ ಬಂದಿದೆ ? ಆದರೂ ಶ್ರೀಮಾನ್ ನಾರಾಯಣರೆಡ್ಡಿಯವರು ಇದಕ್ಕಿಂತ ಹೆಚ್ಚಿನ ಕ್ಷಾಮ ಎಲ್ಲೂ ಇರಲಿಲ್ಲ ಎಂದುಬಿಟ್ಟರು: ಬಹುಶಃ ಅವರಿಗೆ ಎಲ್ಲಾ ವಿಷಯಗಳೂ ತಿಳಿಯವು ಎಂದು ತಿಳಿದಿದ್ದೇನೆ. ನನ್ನ ಮನೆಯಲ್ಲೇ 200 ದನಗಳು ಸಾಯುವ ಸ್ಥಿತಿಯಲ್ಲಿದ್ದವು. ಆದ್ದರಿಂದ ಸುಮ್ಮನೆ ಟೀಕೆ ಮಾಡುವುದರಿಂದ ಪ್ರಯೋಜನವಿಲ್ಲ. ಪ್ರತಿಯೊಂದಕ್ಕೂ ಯಾವಾಗ ಕೊಟ್ಟಿರಿ, ಏನು ಕೊಟ್ಟಿರಿ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ, ಕೋಲಾರಕ್ಕೆಕ್ಷಾಮ ಏಕೆ ಬರುತ್ತದೆಂಬುದನ್ನು ನಮ್ಮ ಸರ್ಕಾರದವರು ಖಂಡಿತ ಪರಿಶೀಲಿಸಬೇಕು. 1892ನೆಯ ಇಸವಿಯಲ್ಲಿ ಬ್ರಿಟಿಷ್ ಸರ್ಕಾರದವರು ಇಲ್ಲಿ ಆಡಳಿತ ಮಾಡುತ್ತಿದ್ದಾಗ, ಮದ್ರಾಸ್ ಪ್ರಾಂತದವರೊಡನೆ ಒಂದು Agreement ಮಾಡಿಕೊಂಡಿದ್ದರು. ಅದರಂತೆ ಕೋಲಾರದ ಗಡಿಯಿಂದ 52 ಮೈಲಿ ವಿಸ್ತೀರ್ಣದಲ್ಲಿ ಯಾವ ಯಾವ ನಾಲೆಯನ್ನಾಗಲಿ ಕೆರೆಯನ್ನಾಗಲಿ ಕಟ್ಟಕೂಡದೆಂದು ಒಂದು Agreement ಬರೆದುಕೊಟ್ಟುಬಿಟ್ಟಿದ್ದಾರೆ. ಹೀಗಾಗಿ ಒಂದು ತೊಟ್ಟು ನೀರನ್ನೂ ನಾವು ಉಪಯೋಗಿಸುವಹಾಗಿಲ್ಲ. ಏನಾದರೂ ನೀರು ಸ್ವಲ್ಪ ಹರಿಯುತ್ತಿದ್ದು ಆ ಹಳ್ಳದ ನೀರನ್ನು ನಾವು ಉಪಯೋಗಿಸಿಕೊಂಡರೂ ಮೂರು ನಾಲ್ಕು ಕೇಸುಗಳನ್ನು ಹಾಕಿರುವ ಸಂದರ್ಭಗಳು ಅನೇಕವಾಗಿವೆ.

ಹೀಗಿರುವಾಗ ಕ್ಷಾಮವಿಲ್ಲದೆ ಏನಾಗುತ್ತದೆ ? ಯಾವಾಗಲೂ ಅಲ್ಲಿ ಒಂದು ಕೆರೆಯನ್ನು ಕಟ್ಟಿಲ್ಲ. 1939ರಲ್ಲಿ ಮಿರ್ಜಾ ಸಾಹೇಬರಿದ್ದಾಗ ಅಲ್ಲಿ ಒಂದು ಜೈಲು ಕಟ್ಟಿಸಿದರು. ಅದರಲ್ಲಿ ಕಾಂಗ್ರೆಸ್ಸಿನವರನ್ನಿಟ್ಟು ಅವರ ಕೈಯಲ್ಲಿ ಮಣ್ಣು ಹೊರಿಸುವುದಕ್ಕಾಗಿ ಅಲ್ಲೊಂದು ಕಟ್ಟೆಯನ್ನು ಕಟ್ಟಿಸಿದರು. ಅದರಲ್ಲಿ ಅರ್ಧವನ್ನು ಕಾಂಗ್ರೆಸ್‌ನವರೇ ಮಣ್ಣುಹೊತ್ತು ಕಟ್ಟಿದ್ದಾರೆ. ಇದನ್ನು ಬಿಟ್ಟರೆ, ಕೋಲಾರ ಡಿಸ್ಟ್ರಿಕ್ಟಿನಲ್ಲಿ ಒಂದು ಕಟ್ಟೆಯನ್ನೂ ಕಟ್ಟಿಲ್ಲ. ಆದುದರಿಂದ ನಾನು ಹೇಳುತ್ತೇನೆ, ಸರ್ಕಾರದವರು ಬಡ್ಜೆಟ್ಟಿನಲ್ಲಿ ಎರಡು ಕೋಟಿ ರೂಪಾಯಿಗಳನ್ನಾದರೂ ಕೋಲಾರ ಜಿಲ್ಲೆಯಲ್ಲಿ ಕೆರೆ ಕಟ್ಟೆಗಳನ್ನು ಕಟ್ಟಿಸಲು ಇಟ್ಟಿದ್ದರೆ ನಾನು ಬಹಳ ಸಂತೋಷಪಡುತ್ತಿದ್ದೆ. ಈ ಸಾರಿ 101 ಲಕ್ಷ ರೂಪಾಯಿ ಡಿಫಿಸಿಟ್ ಎಂದು ಹೇಳಿದರು. ನನ್ನ ಕೈಲಿ

(ಶ್ರೀ ಎಚ್. ಸಿ. ನಾಗಯ್ಯರಡ್ಡಿಯವರು.)

ಬಡ್ಜೆಟ್ ಕೊಟ್ಟಿದ್ದಿದ್ದರೆ unproductive ಬಾಬುಗಳ ನ್ನೆಲ್ಲಾ ತೆಗೆದುಹಾಕಿ ಸರಿಮಾಡಿ ಕೊಡುತ್ತಿದ್ದೆ. ಈ ಹೊತ್ತು ಕೊಟ್ಟರೂ ಕೂಡ ನಾಳೆ ಬೆಳಿಗ್ಗೆ ಹೊತ್ತಿಗೆ ಸರಿಮಾಡಿ ಕೊಡುತ್ತೇನೆ. ಉದಾಹರಣೆಗೆ ನಮ್ಮ ಕೌನ್ಸಿಲ್ ಹಾಲ್‌ಗಾಗಿ 4 ಲಕ್ಷ ರೂಪಾಯಿ ಒದಗಿಸಿ ದ್ದಾರೆ, ಇದು ಖಂಡಿತ ಖರ್ಚಾಗುವುದಿಲ್ಲ. ಎಷ್ಟು ಕೆಲಸ ಮಾಡುತ್ತಾರೋ ಅಷ್ಟು ಮಾತ್ರ ಹಣವನ್ನೊದ ಗಿಸುವುದಕ್ಕೆ ಬದಲು ಹೆಚ್ಚು ಹೆಚ್ಚು ಹಣವನ್ನೊದಗಿಸಿ ದ್ದಾರೆ. ಇದನ್ನು ಮಾಡಿದರೆ ಈಗ ಖೋತಾ ಬಂದಿ ರುವ 101 ಲಕ್ಷ ರೂಪಾಯನ್ನು ಕೂಡ ಸರಿತೂಗಿಸ ಬಹುದು. ನಮ್ಮ ಕೋಲಾರ ಜಿಲ್ಲೆಗೆ ಎರಡು ಕೋಟಿ ರೂಪಾಯಿ ಕೊಡಬೇಕು. 1947ರಲ್ಲಿ ನಮ್ಮ ಗೌರಿ ಬಿದನೂರು ತಾಲ್ಲೂಕಿನಲ್ಲಿ 54 ವಿದ್ಯುಚ್ಛಕ್ತಿ ಪಂಪುಗಳಿ ದ್ದವು. ಈಗ ಅಲ್ಲಿ 750 ಪಂಪುಗಳಿವೆ. ಮೊನ್ನೆ ಶ್ರೀಮನ್ಮ ಹಾರಾಜರವರು ಅಲ್ಲಿಗೆ ಬಂದಾಗ ಅಲ್ಲಿನ ಜನರನ್ನು ನೋಡಿ ಅಲ್ಲಿಗೆ ಬಂದಿದ್ದವರು ಹೇಳುತ್ತಿದ್ದರು, 'ಈ ದಿವಸ ಕೂಡ ಶಿವಮೊಗ್ಗಕ್ಕಿಂತ ಗೌರಿಬಿದನೂರು ಜನ ಚೆನ್ನಾಗಿದ್ದಾರೆ' ಎಂದು. ನಮಗೆ ವಿದ್ಯುಚ್ಛಕ್ತಿ ಪಂಪು ಗಳಿಂದ ಕ್ಷಾಮವಿಲ್ಲದೆ ಇದ್ದೇವೆ. ಆದುದರಿಂದ, ವಿದ್ಯು ಚ್ಛಕ್ತಿ ಪಂಪುಗಳಿಗಾಗಿ ಒಂದು ಕೋಟಿ ರೂಪಾಯಿ ಕೊಡಿ, ಮೈಸೂರು ದೇಶಕ್ಕೇ ಆಹಾರ ಒದಗಿಸುತ್ತೇವೆ. ಮದ್ರಾಸ್‌ಸರ್ಕಾರಕ್ಕೂ ಈ ಸರ್ಕಾರಕ್ಕೂ ಇರುವ ಒಪ್ಪಂ ದದ ಪ್ರಕಾರ ಅವರು ಮಾತ್ರ ಹಿಂದೂಪುರದಹತ್ತಿರ 10 ಲಕ್ಷ ರೂಪಾಯಿ ಖರ್ಚುಮಾಡಿ 20 ಕೆರೆಗಳಿಗೆ ನೀರು ಒದಗಿಸಿಕೊಂಡರು; ಒಂದು ಕೋಟಿ ರೂಪಾಯಿಕೂಡ ಖರ್ಚುಮಾಡಿಲ್ಲ. ಚಿಂತಾಮಣಿ ತಾಲ್ಲೂಕು ಮಂಡಪಲ್ಲಿ ಎಂದು ಒಂದು ಹಳ್ಳಿ ಇದೆ, ಅದರ ಜೋಡಿದಾರರು ಸಣ್ಣ ಒಂದು ಕಟ್ಟೆ ಕಟ್ಟಿಕೊಂಡರು. ಕಲ್ಲುಕಟ್ಟಡ ಕಟ್ಟಿದರು, ಮದ್ರಾಸ್ ಪ್ರಾಂತದ ಎಗ್ಸಿಕ್ಯುಟಿವ್ ಇಂಜಿನಿಯರು ಬಂದು ಅದನ್ನು ಕಿತ್ತುಹಾಕಿದ್ದಾರೆ. ನಾನು ಬಹಳ ಸ್ವಾರಸ್ಯವಾಗಿ ಹೇಳುತ್ತಿದ್ದೇನೆ, ನನಗೆ ಒಂದೆರಡು ನಿಮಿಷ ಹೆಚ್ಚಾಗಿ ಕೊಡಬೇಕು (ನಗು!) ನಾಗರುಬಾವಿ ಕೆರೆ ಎಂದು ಒಂದು ಕೆರೆ ಇದೆ, ಅದು 70 ವರ್ಷಗಳ ಕೆಳಗೆ ಕಿತ್ತುಹೋಗಿದೆ. ಅದರ ನೀರು 800 ಎಕರೆಗೆ ಹರಿಯುತ್ತಿತ್ತು. ಈಗ ಇವರು 127 ಎಕರೆಗೆ ಮಾತ್ರ ಅಂದಾಜು ಹಾಕಿದ್ದಾರೆ. ಇದೇನನ್ಯಾಯ! ಅವರು ಒಪ್ಪಂದಕ್ಕೆ ರುಜು ಕೂಡ ಹಾಕಿಲ್ಲ, ಅಷ್ಟರಲ್ಲಿ 20 ಕೆರೆಗಳನ್ನು ಕಟ್ಟಿಸಿದರು. ನಮ್ಮವರು ಮಾತ್ರ ಒಂದಕ್ಕೆ ಕೂಡ ಅಂದಾಜು ಕೂಡ ಮಾಡಿಲ್ಲ. ಪೆನ್ನಾರ್, ಕುಮುದ್ವತಿ ಇವುಗಳ ನೀರು ಹಿಂದೂಪುರಕ್ಕೆ ಹೋಗುತ್ತದೆ. ನಾವು ಏಕೆ ಉಪಯೋ ಗಿಸಬಾರದು? ದೇವಸಮುದ್ರದ ಕೆರೆಗೆ ಮಾತ್ರ 4 ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಇದು ಏನೇನೂ ಸಾಲದು. ಕೋಲಾರದಲ್ಲಿ ಕ್ಷಾಮ ಹೋಗಬೇಕಾದರೆ ವಿದ್ಯುಚ್ಛಕ್ತಿ ಪಂಪುಗಳನ್ನು ಎಷ್ಟು ಕೇಳಿದರೂ ಅಷ್ಟನ್ನೂ ಕೊಡಬೇಕು. ಕಾಪರ್‌ವೈರ್ ಇಲ್ಲ ಎಂದು ಇಲಾಖೆಯವರು ನೆಪ ಹೇಳುತ್ತಾರೆ. ಅವರಿಗೆ ಎಲ್ಲಿಂದ ತೆಗೆದುಕೊಂಡರೆ ಅನುಕೂಲವೋ ಅವರಿಂದಲೇ ತೆಗೆದು ಕೊಳ್ಳುತ್ತಾರೆ. ಬೇರೆಯವರು ಇದನ್ನು ಕೊಡುವುದಕ್ಕೆ ಸಿದ್ಧವಾಗಿದ್ದರೂ ಅವರಿಂದ ತೆಗೆದುಕೊಳ್ಳುವುದಿಲ್ಲ. ಜಪಾನಿನಿಂದ ಬರಬೇಕು, ಇವರು ಆರ್ಡರ್ ಕಳುಹಿಸ ಬೇಕು. ಈಗತಿಯಾಗಿದೆ! ಇಂಥಾದ್ದನ್ನೆಲ್ಲಾ ಪರಿಶೀ ಲನೆಮಾಡಿ ಸರಿಪಡಿಸಿ, ಎಷ್ಟು ಪಂಪುಗಳನ್ನು ಕೇಳಿ ದರೂ ಅಷ್ಟನ್ನೂ ಕೊಡಬೇಕು. ಎಲ್ಲೆಲ್ಲಿ ಪೂರ್ವದಲ್ಲಿ, ಎಂದರೆ 1892ನೆಯ ಇಸವಿಗಿಂತ ಹಿಂದೆ ಕೆರೆಗಳಿದ್ದು ಈಗ ಕಿತ್ತುಹೋಗಿವೆಯೋ ಅವುಗಳನ್ನು ರಿಪೇರಿ ಮಾಡ ದಂತೆ ಒಂದು ಒಪ್ಪಂದ ಮಾಡಿಕೊಂಡಿದ್ದಾರೆ. ಇಂಥ ಒಪ್ಪಂದವನ್ನು ಮಾಡಿಕೊಟ್ಟವರು ದೇಶವನ್ನು ಮಾರಿ ದ್ದಾರೆಂದು ನನ್ನ ಭಾವನೆ. ಎರಡನೆಯದಾಗಿ, ಕಾಲು ವೆಯನ್ನು ಬೇಕಾದರೆ ತೆಗೆದುಕೊಳ್ಳಿ, ಅಣೆ ಕಟ್ಟಬೇಡಿ ಎಂದು ಹೇಳುತ್ತಾರೆ. ಅಣೆ ಕಟ್ಟದೆ ನೀರು ತೆಗೆದು ಕೊಳ್ಳಬೇಕಾದರೆ ಮರಳು ಚೀಲಗಳನ್ನು ಹಾಕಿ ನೀರು ನಿಲ್ಲಿಸಬೇಕಾಗುತ್ತದೆ. ಬಡವರಾದ ರೈತರು ಎಲ್ಲಿಂದ ಇಷ್ಟು ಚೀಲಗಳನ್ನು ತರಬೇಕು? ನಾವೇಕೆ ಅಣೆಕಟ್ಟು ಕಟ್ಟಬಾರದು? ಅವರು ಕಟ್ಟಿಸಿಲ್ಲವೆ? ಹೀಗೆ ಮಾಡಿಯೇ ಕೋಲಾರ ಜಿಲ್ಲೆಯಲ್ಲಿ ಕ್ಷಾಮ ಬಂದಿರುವುದು. ನಮಗೆ ನಾಚಿಕೆಯಾಗುತ್ತದೆ. ಆ ಜಿಲ್ಲೆಯವರು ಭಿಕ್ಷ ಕೇಳ ಬೇಕಾಗಿದೆ. ಕೋಲಾರ ಜಿಲ್ಲೆಯ ವಿಷಯ ಮಾತ್ರ ಹೇಳಿದ್ದೇನೆ, ಕ್ಷಮಿಸಬೇಕು.

*ಶ್ರೀ ಕೆ. ಹನುಮಂತಯ್ಯನವರು (ಮುಖ್ಯ ಮಂತ್ರಿ ಗಳು).—ಸ್ವಾಮಿ, ಈ ಬಡ್ಜೆಟ್ ಮೇಲಿನ ಚರ್ಚೆಗಳ ನ್ನೆಲ್ಲಾ ಸಾವಧಾನವಾಗಿ ಕೇಳಿದೆ. ಮಾಡಿದ ಬಹು ಭಾಗದ ಭಾಷಣಗಳು ಬಡ್ಜೆಟ್ಟನ್ನು ಸ್ವಾಗತಿಸಿವೆ, ಮತ್ತು ಅನೇಕ ಉಪಯುಕ್ತ ಸಲಹೆಗಳನ್ನು ಕೊಡು ವಂಥವುಗಳಾಗಿವೆ. ನಾನು ಆ ಮಹನೀಯರಿಗೆಲ್ಲ ವಂದನೆಗಳನ್ನು ಸಲ್ಲಿಸಿ, ಆಕ್ಷೇಪಣೆಗಳಿಗೆ ಮತ್ತು ಟೀಕೆ ಗಳಿಗೆ ಉತ್ತರ ಕೊಡುವುದಕ್ಕೆ ಪ್ರಾರಂಭಮಾಡುತ್ತೇನೆ.

ಮೊದಲನೆಯದಾಗಿ, ಎದುರು ಪಕ್ಷದ ನಾಯಕರಾದ ಶ್ರೀಮಾನ್ ಇಮಾಂ ಸಾಹೇಬರು ಅಂಕಿ ಅಂಶಗಳ ವಿಷ ಯವಾಗಿ ಪ್ರಸ್ತಾಪಮಾಡಿದ ಎರಡು ಮೂರು ವಿಷಯ ಗಳಿಗೆ ಉತ್ತರ ಕೊಡಬೇಕಾಗಿದೆ. ಶ್ರೀಮಾನ್ ಮರಿ ಯಪ್ಪನವರು ಹೇಳಿದ ಹಾಗೆ, ಇಮಾಂ ಸಾಹೇಬರು ಮತ್ತು ಅವರ ರಾಜಕೀಯ ಸಹಪಾಠಿಗಳೂ ಆಗಲೇ ಕೆಲವು ದಿವಸಗಳಿಂದಲೂ ಕಾಂಗ್ರೆಸ್ ಪಕ್ಷದ ಸರ್ಕಾರ ರಿಜರ್ವ್‌ಫಂಡ್ ಎಲ್ಲವನ್ನೂ ಖರ್ಚುಮಾಡಿದವು, ಪೋಲು ಮಾಡಿದವು ಎಂಬ ವಾದವನ್ನು ದೇಶದ ಮುಂದಿಟ್ಟಾಗ, ಕಾಂಗ್ರೆಸ್ ಅಧ್ಯಕ್ಷನಾಗಿ ಅದಕ್ಕೆ ನಾನು ಉತ್ತರ ಕೊಡಬೇಕಾದ ಸಂದರ್ಭವಿತ್ತು. ಇದು ಅಲ್ಲಿಗೇ, ಅವರು ಹೇಳಿದಹಾಗೆ, ಕೊನೆಗೊಂಡಿದ್ದರೆ ಚೆನ್ನಾಗಿತ್ತು. ಆದರೆ ಈ ಶಾಸನ ಸಭೆಯಲ್ಲಿ ಅವರು ಈರೀತಿ ರಿಜರ್ವ್ ಫಂಡು ಪೋಲಾಗಿದೆ ಎಂದು ಹೇಳಿದ ಮೇಲೆ, ಅವರಿಗೆ ಗೌರವಕೊಟ್ಟು ಅವರಿಗೆ ಉತ್ತರ ಕೊಡುವುದು ನ್ಯಾಯ; ಪುನರುಕ್ತಿಯಾದರೂ ಚಿಂತೆಯಿಲ್ಲ.

On 1st July 1947 the following were the liquid assets:

		Crores
Cash including fixed deposits	...	6·14
Securities and shares	...	27·38
Total	...	33·52

ಹೀಗೆ ಏನು ರಿಜರ್ವ್ ನಿಧಿ ಎಂದು ಹೇಳುತ್ತಾರೋ ಅದರ ಮೊತ್ತ 1947ನೆಯ ಇಸವಿಯ ಜುಲೈ ಒಂದ ನೆಯ ತಾರೀಖಿನ ದಿವಸ 33 ಕೋಟಿ 52 ಲಕ್ಷ ರೂಪಾಯಿ ಇತ್ತು. 1951ನೆಯ ಏಪ್ರಿಲ್ ಒಂದನೆಯ ತಾರೀಖು ಈ ಮೊತ್ತ 20 ಕೋಟಿ ರೂಪಾಯಿಗೆ ಇಳಿ ಯಿತು.

1952ನೇ ಇಸವಿಯಲ್ಲಿ ಇದುವರೆಗೆ ಇರುವಂಥ ಪರಿ ಸ್ಥಿತಿ ಹೇಗಿದೆಯೆಂಬುದನ್ನು ಹೇಳುವುದಕ್ಕೆ ಇನ್ನೂ ಎರಡು ತಿಂಗಳಕಾಲ ಬೇಕಾಗುತ್ತದೆ. ಈ ಲೆಕ್ಕಗಳೆಲ್ಲಾ

ಪೂರೈಸಬೇಕು. ಒಟ್ಟಿನಲ್ಲಿ, ಈಗ 20 ಕೋಟಿ ರೂಪಾಯಿಗಳಿಗಿಂತ ಇನ್ನೂ ಸ್ವಲ್ಪ ಜಾಸ್ತಿ ಇರಬಹುದೆಂದು ನಾವು ನಂಬಿಕೊಳ್ಳಬಹುದು.

ಇನ್ನು ಹದಿಮೂರುಕೋಟಿ ರೂಪಾಯಿಗಳು ಖರ್ಚಾಗಿವೆ ಎನ್ನುವ ಒಂದು ವಾದ ಕೇಳಿಬರುತ್ತಿದೆ. ಅದು ನಿಜ. ಖರ್ಚಾಗಿದೆ ಎಂದು ಹೇಳುವುದಕ್ಕೂ, ಪೋಲಾಗಿದೆ ಎಂದು ಹೇಳುವುದಕ್ಕೂ ಬಹಳ ವ್ಯತ್ಯಾಸವಿದೆ. ಹೌದು, ಹಣ ಖರ್ಚಾಗಿದೆ ಎಂದು ನಾನೂ ಹೇಳುತ್ತೇನೆ. ಆದರೆ ಹಾಗೆ ಖರ್ಚಾಗಿ ಹೋಗಿರತಕ್ಕ ಹಣ ಪೋಲಾಗಿ ಹೋಗಿಲ್ಲ. ಅದು ನ್ಯಾಯವಾಗಿಯೇ ಖರ್ಚಾಗಿದೆ ಎಂಬ ಅಂಶವನ್ನು ಮಾನ್ಯ ಸಭೆಯ ಅವಗಾಹನೆಗೆ ತರಲು, ನಾನು ಕೆಲವು ಅಂಕಿಗಳನ್ನು ತಮ್ಮ ಮುಂದೆ ಇಡುತ್ತೇನೆ. 1947ರಲ್ಲಿ ರೈಲ್ವೆ ಇನ್ನೂ ನಮ್ಮ ಕೈಯಲ್ಲೇ ಇತ್ತು. ಆ ರೈಲ್ವೆ ಸಂಬಂಧವಾದ ಕಟ್ಟಡಗಳನ್ನೂ ಮತ್ತು ಇತರ ಕೆಲವು ಸಾಮಗ್ರಿಗಳನ್ನೂ ಕೊಂಡುಕೊಳ್ಳುವುದಕ್ಕೆ 72·30 ಲಕ್ಷ ರೂಪಾಯಿಗಳು ಖರ್ಚಾಗಿವೆ. ಕೃಷ್ಣರಾಜಸಾಗರದ ಕೆಲಸ ಕಾರ್ಯಗಳಿಗಾಗಿ 71 ಲಕ್ಷ 95 ಸಾವಿರ ರೂಪಾಯಿಗಳು ಖರ್ಚಾಗಿವೆ. ದೊಡ್ಡದೊಡ್ಡ ನೀರಾವರಿ ಕಾಮಗಾರಿಗಳಿಗೆ, ಎಂದರೆ ಭದ್ರ, ತುಂಗ ಮತ್ತು ನುಗು, ಇವುಗಳಿಗೆ 128 ಲಕ್ಷ 36 ಸಾವಿರ ಖರ್ಚಾಗಿವೆ. ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚು ಮಾಡುವುದಕೋಸ್ಕರವಾಗಿ 676 ಲಕ್ಷ 25 ಸಾವಿರ ರೂಪಾಯಿಗಳ ಬಂಡವಾಳವನ್ನು ಅದರ ಮೇಲೆ ಹಾಕಿದ್ದೇವೆ. ಇಂಡಸ್ಟ್ರೀಸ್ ಮತ್ತು ವಾಟರ್‌ವರ್ಕ್ಸ್ ಇವುಗಳಿಗೆ 72 ಲಕ್ಷದ 7 ಸಾವಿರ ರೂಪಾಯಿಗಳ ಬಂಡವಾಳವನ್ನು ಹಾಕಿದ್ದೇವೆ. ಭದ್ರಾವತೀ ಕಬ್ಬಿಣದ ಕಾರ್ಖಾನೆಗೆ 274 ಲಕ್ಷದ 91 ಸಾವಿರವನ್ನು ಖರ್ಚುಮಾಡಿದ್ದೇವೆ. ಅನಂತರ 375·5 ಲಕ್ಷ ಆಹಾರದ ಇಲಾಖೆಗೆ ಖರ್ಚಾಗಿವೆ; ಎಂದರೆ—ಆಹಾರ ಇಲಾಖೆಯ ಸಿಬ್ಬಂದಿಯ ಖರ್ಚು, ಸಬ್‌ಸಿಡಿ, ಧಾನ್ಯ ಶೇಖರಣೆಯ ಗೋಡೌನ್‌ಗಳಲ್ಲಿ ಆದ ನಷ್ಟ, ಇವೆಲ್ಲವೂ ಸೇರಿ ಒಟ್ಟಿಗೆ 375½ ಲಕ್ಷಗಳ ಮೇಲೆ ಖರ್ಚಾಗಿವೆ. ಈ ವಿಚಾರದಲ್ಲಿ ಒಂದು ಮಾತನ್ನು ನಾನು ವೈಯಕ್ತಿಕವಾಗಿ ಹೇಳಬಹುದಾದರೆ, ಶ್ರೀಮಾನ್ ಶಂಕರಲಿಂಗೇಗೌಡರು ಹೇಳಿದ ಹಾಗೆ, 375—400 ಲಕ್ಷ ರೂಪಾಯಿಗಳನ್ನು—ಆದರೆ ನಮ್ಮ ಸೋಷಿಯಲಿಸ್ಟ್ ಪಾರ್ಟಿ ಸ್ನೇಹಿತರು ಫುಡ್ ಸಬ್‌ಸಿಡಿಯನ್ನು ಕೊಡಲೇಬೇಕೆಂದು ಆಕ್ಷೇಪಣೆ ಮಾಡುತ್ತಿದ್ದಾರೆ—ಆದರೆ ಈ ಆಕ್ಷೇಪಣೆಗಳನ್ನು ಮನಸ್ಸಿಗೆ ಹಾಕಿಕೊಳ್ಳದಂತೆ, ಹಾಗೆ ಕೊಡಲಾಗುತ್ತಿದ್ದ ಈ ಫುಡ್ ಸಬ್‌ಸಿಡಿಯನ್ನು ಶ್ರೀಮಾನ್ ಶಂಕರಲಿಂಗೇಗೌಡರು ಹೇಳಿರುವಂತೆ ನೀರಾವರಿ ಕಾಮಗಾರಿಗಳಿಗಾಗಿ ಉಪಯೋಗಿಸಿದ್ದರೆ, ಈ ಆಹಾರ ಪ್ರಶ್ನೆ ನಮ್ಮ ದೇಶದಲ್ಲಿ ಇಂದು ಇರುತ್ತಿರಲಿಲ್ಲ. ಇದರಿಂದ ಸುಮಾರು ನಾಲ್ಕು ಕೋಟಿ ರೂಪಾಯಿಗಳು ಖರ್ಚಾಗಿ ಹೋದವು. ತತ್ಪರಿಣಾಮವಾಗಿ ದೇಶದಲ್ಲಿ ಉಂಟಾಗಿರುವ ಈ ದಿವಸದ ಪರಿಸ್ಥಿತಿಯಾದರೋ, ನಮಗೆ ಬೇಕಾಗುವಷ್ಟು ಆಹಾರ ಧಾನ್ಯಗಳು—ಎಂದರೆ ಭತ್ತ, ರಾಗಿ ಮುಂತಾದ ಧಾನ್ಯಗಳು—ಇಲ್ಲದೇ ಇರುವಂಥ ಪರಿಸ್ಥಿತಿ ಉಂಟಾಗಿರುವುದರ ಜೊತೆಗೆ, ನಾನಾ ತೊಂದರೆಗಳೂ ಸತ್ಯಾಗ್ರಹ, ಜನರಲ್ಲಿ ಅಸಮಾಧಾನ ಮತ್ತು ಟೀಕೆಗಳು ಎದ್ದಿವೆ. ಆದರೆ ಶ್ರೀ ಎಂ. ಶಂಕರಲಿಂಗೇಗೌಡರು ಹೇಳಿದ ಹಾಗೆ, ಕೇಂದ್ರ ಸರ್ಕಾರವಾಗಲಿ, ನಮ್ಮ ಮೈಸೂರು ಸರ್ಕಾರವಾಗಲಿ, ಈ ಬೊಬ್ಬೆಗಳಿಗೆ ಮನಸೋಲದೆ, ದೇಶದ ಹಿತವನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು, ಈ ಜಿ.ಎಂ.ಎಫ್. ಯೋಜನೆ ಮುಂತಾದವುಗಳಿಗೆ ಅವಕಾಶ ಕೊಡದೆ, ಆ ಹಣವನ್ನೆಲ್ಲಾ ನೀರಾವರಿ ಕಾಮಗಾರಿಗಳಿಗೇ ವಿನಿಯೋಗಿಸಿದ್ದರೆ, ದೇಶದಲ್ಲಿ ಇಂದು ಸುಭಿಕ್ಷ ಪರಿಸ್ಥಿತಿ ಉಂಟಾಗುತ್ತಿತ್ತು. ಆದರೆ ಇದೆಲ್ಲವೂ ಹಿಂದೆ ನಡೆದುಹೋದ ಮಾತು; ಚಿಂತೆಪಟ್ಟರೆ ಪ್ರಯೋಜನವಿಲ್ಲ. ಇದರಿಂದ ನಾವು ಒಂದು ಪಾಠವನ್ನು ಕಲಿಯಬೇಕಾಗಿದೆ. ಆಹಾರ ಧಾನ್ಯಗಳ ಬೆಲೆಯನ್ನು ಹೆಚ್ಚಿಸುವುದು ದೇಶದ ಹಿತದೃಷ್ಟಿಯಿಂದ ನ್ಯಾಯವಾಗಿದೆ ಮತ್ತು ಅದು ಸಕಾರಣವೂ ಆಗಿದೆ ಎಂಬುದಕ್ಕೆ ಒಂದು ಅಂಶವನ್ನು ನಾನು ನಮ್ಮ ಸೋಷಿಯಲಿಸ್ಟ್ ಸ್ನೇಹಿತರ ಮುಂದೆ ಇಡುತ್ತೇನೆ. ಈ ಒಂದು ಮಾತನ್ನು ನಾನು ಅವರಿಗೆ ಸಾರಿ ಸಾರಿ ಹೇಳುತ್ತೇನೆ. ಈ ಕಾಂಗ್ರೆಸ್ ಪಕ್ಷಕ್ಕೇ ಆಗಲಿ ಅಥವಾ ತಾತ್ಕಾಲಿಕವಾಗಿರುವ ಈ ಪಕ್ಷದ ನಾಯಕನಾದ ನನಗೇ ಆಗಲಿ ಪ್ರಜಾನುರಾಗ ಮುಖ್ಯ ಗುರಿಯಲ್ಲ; ನಮ್ಮ ಮುಖ್ಯ ಗುರಿ, ದೇಶದ ಹಿತ. ಆದುದರಿಂದ ಯಾವುದು ದೇಶಕ್ಕೆ ಹಿತವೆಂದು ತೋರುತ್ತದೋ ಅದನ್ನು ಮಾಡಿಯೇ ಮಾಡುತ್ತೇವೆ. ಅದು ಕೆಲವರ ಅಭಿಪ್ರಾಯಕ್ಕೆ ಅನುಗುಣವಾಗಿರಲಿ ಅಥವಾ ವಿರುದ್ಧವಾಗಿರಲಿ, ಅದನ್ನು ಖಂಡಿತವಾಗಿ ನಾನು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ಸಾರಿಸಾರಿ ಹೇಳುತ್ತೇನೆ. ನಮಗೆ ಬೇಕಾಗಿರತಕ್ಕ ಜೀವನ ಧ್ಯೇಯ 'ಓಟ್' ಅಲ್ಲ. ಯಾವರೀತಿ ಸರ್ ಎಂ. ವಿಶ್ವೇಶ್ವರಯ್ಯನವರು, ಅಂಥಾ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನೂ ಮತ್ತು ಕೈಗಾರಿಕಾ ಕಾರ್ಖಾನೆಗಳನ್ನೂ ಮಾಡಿದ್ದಾರೆಂದು ದೇಶದಲ್ಲಿ ಜನರು ಇಂದು ಹೀಗೆ ಹೊಗಳುತ್ತಿದ್ದಾರೋ—ಅಂಥ ಹೊಗಳಿಕೆಯೂ ನನಗೆ ಬೇಕಾಗಿಲ್ಲ—ಅದರಂತೆಯೇ ಮುಂದಿನ ಜನಾಂಗ ಈ ಮಂತ್ರಿಮಂಡಲ ದೂರದೃಷ್ಟಿಯಿಂದ ಕೆಲಸಮಾಡಿದ್ದಾರೆಯೋ ಹೊರತು ಓಟಿನ ಬೇಟೆಗಾಗಿ ಕೆಲಸಗಳನ್ನು ಮಾಡುತ್ತಿಲ್ಲವೆಂಬ ಒಂದು ಮಾತನ್ನು ಹೇಳಿದರೆ ಸಾಕು; ಅದರಿಂದ ನನಗೆ ಸಂಪೂರ್ಣ ತೃಪ್ತಿಯುಂಟಾಗುತ್ತದೆ.

ಆದರೆ ಈ ದಿವಸ ಆಹಾರ ಧಾನ್ಯಗಳ ಬೆಲೆಯನ್ನು ಹೆಚ್ಚಿಸಿರುವ ಬಗ್ಗೆ ನಾನು ಸ್ವಲ್ಪವೂ ಪಶ್ಚಾತ್ತಾಪಪಡುವುದಿಲ್ಲ. ಹಾಗೆ ಹೆಚ್ಚಿಸಿರತಕ್ಕದ್ದು ನ್ಯಾಯವಾದದ್ದು ಮತ್ತು ನೀತಿಯುತವಾದ ಮಾರ್ಗ ಎಂದು ಒತ್ತಿ ಹೇಳುತ್ತೇನೆ.

ಮತ್ತೊಂದು ವಿಷಯವನ್ನು ನಾನೀಗ ತಮ್ಮೆಲ್ಲರ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಆಹಾರ ಧಾನ್ಯಗಳ ಮೇಲಿರತಕ್ಕ ಹತೋಟಿ ಆಜ್ಞೆಗಳನ್ನೆಲ್ಲಾ ತೆಗೆದುಹಾಕಿಬಿಡಿ ಎಂದು ತಾವೆಲ್ಲ ಹೇಳುತ್ತಿದ್ದೀರಿ. ಅದೂ ಒಳ್ಳೆಯ ಮಾತೆ. 'ಡೀ ಕಂಟ್ರೋಲ್' ಮಾಡಿ, ಅದು ಬಹಳ ಒಳ್ಳೆಯ ಮಾರ್ಗ ಎಂದು ಸಾರಿ ಹೇಳುತ್ತಿರುವ ನೀವುಗಳು ಈ ಡೀ ಕಂಟ್ರೋಲ್ ಮಾಡತಕ್ಕಂಥ ಪರಿಸ್ಥಿತಿ ಒದಗಿದ್ದರ ಮೂಲ ಕಾರಣ ಯಾವುದು ಎಂಬುದನ್ನು ತಿಳಿಯಬೇಕು. ಆ ಮೂಲಕಾರಣ, ಕೊಡುತ್ತಿದ್ದ ಫುಡ್ ಸಬ್‌ಸಿಡಿಯನ್ನು ಕೇಂದ್ರ ಸರ್ಕಾರದವರು ನಿಲ್ಲಿಸಿದ್ದು. ಯಾವಾಗ ಇಂಡಿಯಾ ಸರ್ಕಾರದವರು ಈ ಫುಡ್ ಸಬ್‌ಸಿಡಿಯನ್ನು ಕೊಡುತ್ತಾರೆಂಬ ಒಂದು ಭಾವನೆ ಜನರಲ್ಲಿ ಮೂಡಿತೋ, ಆಗ ಪ್ರತಿಯೊಂದು ಪ್ರಾಂತ ಸರ್ಕಾರಗಳವರೂ, "ನಮಗೆ ಫುಡ್ ಅಲಾಟ್‌ಮೆಂಟನ್ನು ಇನ್ನೂ ಜಾಸ್ತಿಮಾಡಿ, ಇನ್ನೂ ಹೆಚ್ಚು ಮಾಡಿ" ಎಂದು ಕೇಳುವುದಕ್ಕೆ ಪ್ರಾರಂಭಮಾಡಿದರು. ಇದರಿಂದ ಸುಮಾರು 300 ಕೋಟಿ ರೂಪಾಯಿಗಳ ಆಹಾರ ಸಾಮಗ್ರಿಗಳನ್ನು ಪರದೇಶದಿಂದ ತರಿಸಬೇಕಾಯಿತು. ಮುಂಚೆ ನಮ್ಮ ದೇಶದಿಂದ ಪ್ರತಿವರ್ಷವೂ ಪರದೇಶಗಳಿಗೆ ಮಿಲ್ ಬಟ್ಟೆಗಳಿಗಾಗಿ 60

(ಶ್ರೀ ಕೆ. ಹನುಮಂತಯ್ಯನವರು.)

ಕೋಟಿ ರೂಪಾಯಿಗಳು ಹೋಗುತ್ತಿದ್ದವು. ಅದಕ್ಕಾಗಿ ಮಹಾತ್ಮಾ ಗಾಂಧಿಯವರು ಆ ಹಣವನ್ನು ತಡೆಗಟ್ಟಲು ನಮ್ಮ ದೇಶದಲ್ಲಿ ಖಾದಿ ಕೈಗಾರಿಕೆಯನ್ನು ಪ್ರಚಾರಕ್ಕೆ ತಂದು ದೇಶಕ್ಕೇ ಒಂದು ಮಾರ್ಗದರ್ಶಕರಾದರು. ಆ 60 ಕೋಟಿ ರೂಪಾಯಿಗಳಿಗೇ ಅಷ್ಟೊಂದು ಚಳುವಳಿ ನಡೆಸಿದ ಮೇಲೆ, ಇನ್ನು ವರ್ಷಕ್ಕೆ 300 ಕೋಟಿ ರೂಪಾಯಿಗಳು ಹೊರಗಡೆ ಸಾಗಿಹೋಗುತ್ತಿರುವುದನ್ನು ನೋಡಿ ಸುಮ್ಮನೆ ಕಣ್ಣುಮುಚ್ಚಿ ಕುಳಿತುಕೊಳ್ಳಲು ಆಗಲಿಲ್ಲ. ನನ್ನ ಮೇಲೆ ಯಾರು ಕೋಪ ಮಾಡಿಕೊಂಡರೂ ಚಿಂತೆಯಿಲ್ಲ; ಹೀಗೆ ಇಂಡಿಯಾ ಸರ್ಕಾರದವರು ತಾವುಕೊಡುತ್ತಿದ್ದ ಸಬ್‌ಸಿಡಿಯನ್ನು ಧೈರ್ಯಮಾಡಿ ನಿಲ್ಲಿಸಿದ್ದರಿಂದ, ಆಹಾರದ ನೀತಿ ಇಷ್ಟು ಬೇಗ ವಾಪರ್ಾಡಾಗುವುದಕ್ಕೆ ಅವಕಾಶವಾಯಿತು. ಅಲ್ಲದೆ ಯಾವಾಗ ಸಬ್ಸಿಡಿ ನಿಂತು ಹೋಯಿತೊ, ಆ ಹೊರೆ ನಮ್ಮ ಮೇಲೆ ಬೀಳುತ್ತದೆ ಎಂಬುದು ನಮಗೆ ಗೊತ್ತಾದ ಮೇಲೆ, ನಾವು ಜವಾಬ್ದಾರಿಯಿಂದ ವರ್ತಿಸುವುದಕ್ಕೆ ಪ್ರಾರಂಭಮಾಡಬೇಕಾಯಿತು. ನಾವು ಫ್ರೀ ಮೂವ್‌ಮೆಂಟಿಗೆ ಅವಕಾಶಮಾಡಿದ ಕೂಡಲೆ ತನ್ಮೂಲಕ ಶೇಖರಣೆಯಾಗಿರುವ ಧಾನ್ಯ ಹೊರಕ್ಕೆ ಬಂದಿತು. ತಕ್ಷಣ ಡಿಪೋಗಳಲ್ಲಿ ಅಕ್ಕಿ, ರಾಗಿ ವಗೈರೆ ಖರ್ಚಾಗುವುದು ಕಡಮೆಯಾಯಿತು. ಆದ್ದರಿಂದ ಮೈಸೂರು ಸರ್ಕಾರ ಇಂಡಿಯಾ ದೇಶದಲ್ಲೇ ಮೊಟ್ಟಮೊದಲನೆಯದಾಗಿ 'ನಮಗೆ ನಿಗದಿಮಾಡಿದ ಧಾನ್ಯ ಕಳುಹಿಸಬೇಡಿ, ನಮ್ಮಲ್ಲಿಸಾಕಷ್ಟು ದಾಸ್ತಾನಿದೆ' ಎಂದು ಹೇಳಿದೆ. ಈ ರೀತಿ ನಮ್ಮ ಸರ್ಕಾರ ಮಾಡಿದ ಮೇಲೆ ಇನ್ನೂ ಕೆಲವು ಇದನ್ನು ಅನುಸರಿಸಿವೆ. ಹಾಗೆ ಮಾಡಿದ ಮೇಲೆ ಹೊರಗಿನಿಂದ ತರಿಸುವುದು ಕಡಮೆಯಾಯಿತು. ಧಾನ್ಯಕ್ಕೋಸ್ಕರ ಹೀಗೆ ಹೊರಗೆ ಹೋಗುತ್ತಿದ್ದ ಮುನ್ನೂರುಕೋಟಿ ರೂಪಾಯಿಗಳ ಹೊನ್ನು ಹೊಳೆಯ ರಭಸ ಕಡಮೆಯಾಗುತ್ತಾ ಬಂದಿತು, ಆದ್ದರಿಂದ ಆಹಾರದ ಸಬ್ಸಿಡಿ ನಿಲ್ಲಿಸಿರುವುದರಿಂದುಂಟಾಗಿರುವ ಹೊಸ ಆಹಾರ ನೀತಿಯಿಂದ ದೇಶದಲ್ಲಿ ಕಾಣುತ್ತಿರುವ ಬದಲಾವಣೆಗಳು ಬಡವರಿಗೂ ಜನತೆಗೂ ಎಷ್ಟು ಉಪಕಾರವಾಗಿವೆ ಎಂಬುದನ್ನು ತಾವುಗಳು ಸಾವಧಾನವಾಗಿ ಆಲೋಚಿಸಬೇಕೆಂದು ಪ್ರಾರ್ಥಿಸುತ್ತೇನೆ.

4–30 P.M.

ಜನಾಬ್ ಇಮಾಂರವರು ಹೇಳಿದ ಹಾಗೆ reduction is about 13 crores. To this we have to add Rs. 8 crores being increase under liabilities such as Deposit, Insurance, Savings Bank, Depreciation Funds, etc. This means in all we have to account for 21 crores. ಮೊದಲು 13 ಕೋಟಿಗಳನ್ನು ಹೇಳಿ ಆಮೇಲೆ ಮೇಲೆಹೇಳಿದ ಬಾಬುಗಳ 8ಕೋಟಿಗಳನ್ನು ಸೇರಿಸಿ ಒಟ್ಟು 21 ಕೋಟಿ ಚಿಲ್ಲರೆಗೆ ಸಮಾಧಾನ ನೀಡಬೇಕಾಗಿದೆ. ಈಗ ಸುಮಾರು 17ಕೋಟಿಗಳಿಗೆ ಸಮಾಧಾನ ಹೇಳಿದೆ. ಅನಂತರ ಮಿಕ್ಕಿರುವುದು increase on account grant of loans and advances such as loans to Co-operative Societies, Municipalities, Industrial Concerns, Takavi Loans, Advances for manure. Advances to Government servants, etc. It comes to $1\frac{1}{2}$ crores. ಅನಂತರ amount met from funds and reserves on account of development schemes, food subsidy, revision of scales of pay, etc., come to $3\frac{1}{2}$ crores. ಹೀಗೆ ಒಟ್ಟು 21 ಕೋಟಿ ರೂಪಾಯಿಗಳು ಈ ರೀತಿ ಹಂಚಿಕೆಯಾಗಿವೆ. ಆಹಾರದ ಸಬ್ಸಿಡಿ ರೂಪವಾಗಿ ಆಹಾರದ ಹಂಚಿಕೆ ವ್ಯವಸ್ಥೆಗೆ ಏನು 3–4 ಕೋಟಿ ಖರ್ಚಾಗಿದೆಯೋ ಅದು ಮಾತ್ರ ಹೋಗಿದೆ. ಮಿಕ್ಕ ಹಣವೆಲ್ಲಾ ಬಂಡವಾಳದ ರೂಪದಲ್ಲಿದೆ. ಆದ್ದರಿಂದ ಈ ಬಂಡವಾಳವು ಎಲ್ಲೂ ಹೋಗಿಲ್ಲವೆಂದು ಅನೇಕ ಸಾರಿ ಭಾಷಣಮಾಡುವಾಗ ಹೇಳಿದ್ದೇನೆ. ಈಗ ನಾವು ಬಂಡವಾಳ ಹಾಕಿರುವ ಸಮಸ್ತ ಕೈಗಾರಿಕೆಗಳನ್ನೂ ಈ ದಿವಸ ಇನ್ನಾರಿಗಾದರೂ ಮಾರಿದರೆ ಈಗ ಖರ್ಚುಮಾಡಿರುವುದಕ್ಕಿಂತ ಬಹಳ ಹೆಚ್ಚು ಮೊಬಲಗು ನಮಗೆ ಬರುತ್ತದೆ.

ಜನಾಬ್ ಜೆ. ಮಹಮದ್ ಇಮಾಂರವರು.—If I may ask for some information and if you have no objection—ನಾನು ಹೇಳಿರುವುದು 1947 ಮತ್ತು 1951ನೆಯ ಇಸವಿಗಳ ಅಸೆಟ್ಸ್ ಹೋಲಿಸಿದರೆ ಇಷ್ಟೆಲ್ಲಾ ಖರ್ಚುಮಾಡಿದರೂ ಹೆಚ್ಚಾಗಿರುವ ಅಸೆಟ್ಸ್ 8 ಕೋಟಿ. ರಿಸರ್ವ್ಸ್ ಎಷ್ಟು ಎಷ್ಟು ಖರ್ಚಾಗಿರುವುದೋ ಅಷ್ಟು ಅಸೆಟ್ಸ್ ನಮಗೆ ಬಂದಿವೆಯೆ?

ಶ್ರೀ ಕೆ. ಹನುಮಂತಯ್ಯನವರು.—ಅದನ್ನು ಆಗಲೇ ಹೇಳಿದೆ. ಸುಮಾರು 375 ಲಕ್ಷ ಅಲ್ಲದೆ, ಸಂಬಳಗಳನ್ನು ಹೆಚ್ಚಿಸಿದುದು ಮುಂತಾದುವಕ್ಕೆ ಸುಮಾರು $6\frac{1}{2}$ ಕೋಟಿಯಷ್ಟು ಖರ್ಚಾಗಿದೆ. ಅದರಲ್ಲಿ ಅನುಮಾನವೇನೂ ಇಲ್ಲ. ಆದರೆ ಸಂಬಳಗಳನ್ನು ಜಾಸ್ತಿ ಮಾಡಿರುವುದು ಹಿಂದಿನ ಸರ್ಕಾರ. ಅದು ನ್ಯಾಯವೇ ಅಥವಾ ನ್ಯಾಯವಲ್ಲವೇ ಎಂಬ ಅಂಶ ನೋಡಬೇಕು. ನಾನ್ ಗೆಜೆಟೆಡ್ ಆಫೀಸರುಗಳಿಗೆ ಕಡಮೆ ಸಂಬಳವಿದೆ, ಹೆಚ್ಚಾಗಿ ಕೊಡಬೇಕೆಂದು ಹೇಳುವವರೂ ನೀವೆ. ಕೊಟ್ಟರೆ ಆ ಬಾಬಿನ ಖರ್ಚು ಜಾಸ್ತಿಯಾಯಿತೆಂದು ಹೇಳುವವರೂ ನೀವೆ. ಈ ವಾದ ಒಂದಕ್ಕೊಂದು ಹೇಗೆ ಸಮಂಜಸ ಎಂಬುದನ್ನು ತಾವೇ ಯೋಚನೆ ಮಾಡಬೇಕು.

ಅನಂತರ ಖೋತ 101 ಲಕ್ಷವಲ್ಲ, $4\frac{1}{2}$ ಅಥವಾ 5 ಕೋಟಿ ಎಂದು ಇಮಾಂರವರು ಹೇಳಿದರು.

Janab J. MOHAMED IMAM.—The statement I made here is as follows: "In excess of the normal revenue the amount spent, including the deficit, is about $4\frac{1}{2}$ crores". I will read it from my speech. I have it here.

ಶ್ರೀ ಕೆ. ಹನುಮಂತಯ್ಯನವರು.—ಅನಂತರ ರಿಸರ್ವ್ ಫಂಡನ್ನು ಯಾವ ಉದ್ದೇಶಕ್ಕಾಗಿ ಇಡಲಾಗಿದೆಯೋ ಅದಕ್ಕಿಂತ ಬೇರೆ ಉದ್ದೇಶಕ್ಕೆ ಖರ್ಚುಮಾಡಬಾರದು, ಮಾಡುವ ಹಕ್ಕೂ ಕೂಡ ಸರ್ಕಾರಕ್ಕಿಲ್ಲ ಎಂದು ಹೇಳಿದರು. ಹಕ್ಕು ಇದೆಯೋ ಇಲ್ಲವೋ ಎಂಬುದು ಬೇರೆ ಪ್ರಶ್ನೆ. ಈಗ ಈ ರಿಸರ್ವ್ ಫಂಡನ್ನು ಬೇರೆ ಬಾಬುಗಳಿಗೆ ಖರ್ಚುಮಾಡುತ್ತಿಲ್ಲ. ಸಿಲ್ಕ್ ಡೆವಲಪ್‌ಮೆಂಟ್ ಫಂಡಿನಿಂದ 2ಲಕ್ಷ 81ಸಾವಿರ, ಷುಗರ್ ಕೇನ್ ಸೆಸ್ ಫಂಡಿನಿಂದ 15 ಲಕ್ಷ 73 ಸಾವಿರ, ಫ್ಯಾಮಿನ್ ಇನ್‌ಷ್ಯೂರೆನ್ಸ್‌ನಿಂದ ಸುಮಾರು 20 ಲಕ್ಷ, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಫಂಡಿನಿಂದ 10 ಲಕ್ಷ 50 ಸಾವಿರ, ಇವುಗಳನ್ನು ಈ ಬಡ್ಜೆಟ್ಟಿನಲ್ಲಿ ಖರ್ಚು ತೋರಿಸಿದೆ. ಈ ಫಂಡುಗಳು ಯಾವ ಯಾವ ಉದ್ದೇಶಗಳಿಗಾಗಿ ನಿರ್ಮಿತವಾಗಿವೆಯೋ

ಆ ಉದ್ದೇಶಗಳಿಗಾಗಿಯೇ ಖರ್ಚು ತೋರಿಸಿದೆಯೇ ಹೊರತು ಬೇರೆ ಉದ್ದೇಶಗಳಿಗೆ ತೋರಿಸಿಲ್ಲ. ಅದು 49 ಲಕ್ಷ ಆಗುತ್ತದೆ. ಹೀಗೆ ರಿಸರ್ವ್ ಫಂಡಿನಿಂದ ತೆಗೆದಿದ್ದರೂ ಕೂಡ ಬೇರೆ ಎಲ್ಲಿಂದಲೋ ತಂದು ಖೋತಾ ತೋರಿಸುವ ಹಾಗೆ 101 ಲಕ್ಷಕ್ಕೆ ಈ 49 ಲಕ್ಷ ಸೇರಿಸಿ 150 ಲಕ್ಷ ಖೋತಾ ಎಂದು ಜನಾಬ್ ಇಮಾಂರವರು ಲೆಕ್ಕಹಾಕಿದರು. ರಿಸರ್ವ್ ಫಂಡಿನ ಹಣವನ್ನು ಆ ರಿಸರ್ವ್ ಫಂಡು ಯಾವ ಉದ್ದೇಶಕ್ಕಾಗಿ ಸ್ಥಾಪನೆಯಾಗಿದೆಯೋ ಆ ಉದ್ದೇಶಕ್ಕೇ ಖರ್ಚುಮಾಡಬೇಕೆಂದು ಅವರು ಹೇಳುತ್ತಾರೆ. ಅನಂತರ ಆ ಉದ್ದೇಶಕ್ಕೇ ಹಣ ತೆಗೆದುಕೊಂಡರೆ ಅದು ಖೋತಾ ಆಯಿತು ಎಂದು ಅವರೇ ಹೇಳುತ್ತಾರೆ. ಈ ವಾದ ಸರಣಿ ನೋಡಿ ಒಂದು ಗಾದೆ ನೆನಪಿಗೆ ಬರುತ್ತದೆ. 'ಇಮಾಂ ಸಾಬರಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ' ಎಂದು ಹೇಳುವ ಹಾಗೆ ಇಮಾಂ ಸಾಹೇಬರಿಗೂ ಸಕಾರಣವಾದ ವಾದಕ್ಕೂ ಏನು ಸಂಬಂಧ ಎಂದು ನಾನು ಕೇಳಬೇಕಾಗಿದೆ.

Janab J. MOHAMED IMAM.—I think I must explain perhaps what a deficit means. The expenditure which exceeds the normal revenue is a deficit.

Mr. SPEAKER.—You have explained it already, I remember.

Janab J. MOHAMED IMAM.—I did so. Whenever extra expenditure exceeds normal revenue, it is a deficit. Forty-nine lakhs is not a revenue item.

Sri K. HANUMANTHAIYA.—Nor is it our case.

Sri M. RAJASEKHARA MURTHY.—The amounts drawn from the Reserve Funds cannot be considered as Revenue.

ಶ್ರೀ ಕೆ. ಹನುಮಂತಯ್ಯನವರು.—ರಿಸರ್ವ್ ಫಂಡಿನಿಂದ 49 ಲಕ್ಷ ಖರ್ಚು ಮಾಡುವುದು ಈ ಉದ್ದೇಶಕ್ಕೆ ಎಂದು ಹೇಳಿದ ಮೇಲೆಯೂ ಅದನ್ನು ಖೋತಾ ಬಾಬಿಗೆ ಸೇರಿಸಬೇಕೆಂದು ಇಮಾಂರವರು ಹೇಳಿದ್ದಕ್ಕೆ ಈ ಗಾದೆ ಹೇಳಬೇಕಾಯಿತು.

ಇನ್ನೂ ಈ ವಿಷಯದಲ್ಲಿ ನಾನು ಹೆಚ್ಚಾಗಿ ಉತ್ತರ ಕೊಡಬೇಕೆಂದು ಸಂಖ್ಯೆಗಳನ್ನು ಶೇಖರಿಸಿದ್ದೆ. ಈಗ ಇಮಾಂರವರು ಆ ರೀತಿ ಹೇಳಲಿಲ್ಲವೆಂದು ಹೇಳುವುದರಿಂದ ನಾನು ಮುಂದುವರಿಯುವುದು ಅನಾವಶ್ಯಕವೆಂದು ಕಾಣುತ್ತದೆ.

Janab J. MOHAMED IMAM.—Rs. $4\frac{1}{2}$ crores. As this amount exceeds the normal revenue, it must be taken as deficit.

Sri K. HANUMANTHAIYA.—I will further proceed on the same lines.

ಈಗ ಅವರು ಹೇಳಿರುವ 5 ಕೋಟಿ ಖೋತಾ ಆಗಿದೆಯೆಂಬ ವಾದವನ್ನು ವಿಮರ್ಶೆ ಮಾಡೋಣ. 491 ಲಕ್ಷ ಈ ರೀತಿ ಅದರಲ್ಲಿ ಖರ್ಚಾಗುತ್ತದೆ, ಅದು ಖೋತಾ ಅಲ್ಲ. ಫಂಡುಗಳಿಂದ ತೆಗೆದುಕೊಂಡಿರುವುದು 49 ಲಕ್ಷ ಎಂದೂ, ರೆವೆನ್ಯೂ ಖೋತಾ 101 ಲಕ್ಷ ಎಂದೂ ಹೇಳಿದೆ.

ಟ್ರೆಜರಿ ಬಿಲ್ಸ್ 100 ಲಕ್ಷ ಎಂದು ಇದೆ. ಟ್ರೆಜರಿ ಬಿಲ್ಸ್ ಎನ್ನುವುದಕ್ಕೆ ಇಮಾಂರವರಿಗೆ ಅರ್ಥ ಗೊತ್ತಾಗಲಿಲ್ಲವೆಂದು ಕಾಣುತ್ತದೆ. ಟ್ರೆಜರಿ ಬಿಲ್ಸ್ ಎಂದರೇನು? ಕೇಂದ್ರ ಸರ್ಕಾರದವರು ಏನು ಬಡ್ಜೆಟ್ ಹೆಡ್ಡಿಂಗ್ ಇರಬೇಕೆಂದು ಹೇಳಿ ನಿಯಮ ಮಾಡಿದ್ದಾರೋ ಆ ನಿಯಮವನ್ನು ಇಂಡಿಯಾದೇಶದಲ್ಲಿ ಎಲ್ಲಾ ಸರ್ಕಾರಗಳೂ ಅನುಸರಿಸಬೇಕಾಗಿದೆ; ಆದ್ದರಿಂದ ಟ್ರೆಜರಿಬಿಲ್ಸ್ ಎಂದು ಒಂದು ಹೆಡ್ಡಿಂಗ್ ಇದೆ. ಅಲ್ಲಿ ಕಾಣಿಸಿರುವುದು ಏನೆಂದರೆ: ನಾವು ಈ ವರ್ಷ ಇಂಡಿಯಾ ಸರ್ಕಾರದಿಂದ ಒಂದು ವೇಳೆ ಪ್ರಯತ್ನಪಟ್ಟು ಪಡೆಯಬಹುದಾದ ಸಾಲ 100 ಲಕ್ಷ ಎಂಬುದು. ಹಿಂದಿನ ಅಂದಾಜು ನೋಡಿದರೆ, ಸುಮಾರು 350 ಲಕ್ಷ ರೂಪಾಯಿ ಟ್ರೆಜರಿ ಬಿಲ್ಸ್ ಎಂದು ಹೇಳಿ ಹೋದವರ್ಷದ ಬಡ್ಜೆಟ್‌ನಲ್ಲಿ ಇದೆ. ಕ್ಯಾಪಿಟಲ್ ವರ್ಕ್ಸ್‌ಗೆ ಇಂಡಿಯಾ ಸರ್ಕಾರದಿಂದ ಇಷ್ಟು ಮೊಬಲಗನ್ನು ಸಾಲ ಪಡೆಯಬೇಕೆಂಬ ಉದ್ದೇಶದಿಂದ ಹಾಕಿದೆ. ರಿವೈಸ್ಡ್ ಎಸ್ಟಿಮೇಟ್‌ನಲ್ಲಿ ಏನೂ ಕಾಣಿಸಿಲ್ಲ; ಏಕೆಂದರೆ ಏನನ್ನು ನಿರೀಕ್ಷಿಸಿದ್ದೆವೋ ಆ ಸಾಲವನ್ನು ಕೊಡಲಿಲ್ಲ. ಈಗ 100 ಲಕ್ಷ ಅದೇ ರೀತಿ ಸೇರಿಸಿದ್ದೇವೆ. ಈ 100 ಲಕ್ಷ ಕೊಟ್ಟರೆ ಖರ್ಚು ಮಾಡುತ್ತೇವೆ. ಇಲ್ಲದೇ ಇದ್ದರೆ ಇಲ್ಲ.

Janab J. MOHAMED IMAM.—Anyhow you have taken it as an item of revenue.

Sri K. HANUMANTHAIYA.—It is a loan. You should not confuse between what is loan and what is revenue.

Sri L. SIDDAPPA.—It is an item of receipt.

Sri K. HANUMANTHAIYA.—Yes, an item of receipt. If we borrow 100 lakhs we are not going to spend that sum for ordinary administrative purposes but for capital works or for river projects. Whatever we spend for industries or reservoirs it remains there. You cannot consider it as a deficit or loss.

Unfunded debt	...	108 lakhs
Deposits and Advance		43 ,,
Remittances	...	14 ,,
Decrease in cash	...	76 ,,

All these figures added come to 491 lakhs.

So far as drawing from funds is concerned, it has already been explained. So far as revenue deficit is concerned, it has been made clear and there is no doubt in the minds of anybody.

Treasury Bills, I have explained.

ಶ್ರೀ ಎಲ್. ಸಿ. ನಾಗಯ್ಯ ರೆಡ್ಡಿಯವರು.—ಟ್ರೆಜರಿ ಬಿಲ್ಸ್ ವಿಚಾರದಲ್ಲಿ ಅನುಮಾನವಿದೆ. 100 ಲಕ್ಷ ರೂಪಾಯಿ ಇಂಡಿಯಾ ಸರ್ಕಾರದಿಂದ ಬಂದದ್ದನ್ನು ಎಕ್ಸ್‌ಪೆಂಡಿಚರ್ ಸೈಡ್‌ನಲ್ಲಿ ಸೇರಿಸಿಕೊಂಡು ಬಂದಿದ್ದೀರಿ.

Sri K. HANUMANTHAIYA.—Merely net incomings cannot be added and deficit worked out. The Budget has to be treated in two parts. One is Revenue and Expenditure met from ordinary Revenues. Second is ways and means comprising Borrowings, Loans and Advances made by Government. Deposits, Remittances and Capital Expenditure. As against the net incomings of Rs. 165 lakhs referred to above, we have provided for a net outgoing of 96 lakhs under Capital and 43 lakhs for Loans and Advances. This raises an important issue, whether we can utilise these deposits, etc., for capital and grant of loans and advances. I can quote several authorities that this is a well recognised procedure in all countries and which is in vogue not only since the Congress Ministry assumed power but for decades. Janab Imam should be aware that for decades, we have used our Insurance, Deposits, etc., on Capital Works. Government are not merely a Banker or a Share Broker just to receive moneys and invest them in Securities. So long as the prescribed percentages are invested and demands are met, these surplus funds have to be invested in National Assets for the welfare of the people.

Janab J. MOHAMED IMAM.—On a point of information. Is it not the policy in our Budget to contribute to the normal revenues?

Sri K. HANUMANTHAIYA.—To the extent we can do.

Janab J. MOHAMED IMAM.—I promised to read the definition of deficit. My own definition of deficit is this:

The extra amount of expenditure that we have to incur beyond the normal revenues represents the deficit portion of the Budget. Whatever amount we borrow from the funds or from the deposits or from the opening balance or from the Treasury Bills, all those amounts which cover up extra amount of experditure will come under deficit.

Sri Kadidal MANJAPPA.—It is not a recognised definition. It is his own definition

ಶ್ರೀ ಕೆ. ಹನುಮಂತಯ್ಯನವರು.—ಈಗ ಸಭೆಯ ಅವಗಾಹನೆಗೆ ಈ ಅಂಶವನ್ನು ತರಬೇಕಾಗಿದೆ. ನಾರ್ಮಲ್ ರೆವಿನ್ಯೂ ಇರುತ್ತದೆ. ಅದರಿಂದ ನಾರ್ಮಲ್ ಅಡ್ಮಿನಿಸ್ಟ್ರೇಷನ್ ನಡೆಸುತ್ತೇವೆ. ಕೃಷ್ಣರಾಜಸಾಗರ ಕಟ್ಟಬೇಕಾದರೆ ಅಥವಾ ಭದ್ರಾ ಅಣೆಕಟ್ಟು ಕಟ್ಟಬೇಕಾದರೆ, ಐರನ್ ವರ್ಕ್ಸ್ ನಡೆಸಬೇಕಾದರೆ ನಾರ್ಮಲ್ ರೆವಿನ್ಯೂ ಸಾಕಾಗುವುದಿಲ್ಲ. ಅದಕ್ಕೆ ದುಡ್ಡು ಬೇಕು. ಎಲ್ಲಿಂದ ಬರುತ್ತದೆ? ಸಾಲತೆಗೆದುಕೊಳ್ಳಬೇಕು, ಇಲ್ಲವೇ ಸರ್ಕಾರದಲ್ಲಿ ಇರತಕ್ಕ ಡಿಪಾಸಿಟ್ ಉಪಯೋಗಿಸಿಕೊಳ್ಳಬೇಕು. ಡಿಪಾಸಿಟ್ ಉಪಯೋಗಿಸಿ ಕೊಳ್ಳದೇ ರಿಸರ್ವ್ ಫಂಡ್ ಹಾಗೆಯೇ ಇದ್ದರೆ ಸರ್ಕಾರ ಕೆಲವು ಐಟಂಗಳ ಮೇಲೆ ಬಡ್ಡಿ ಕೊಡಬೇಕಾಗುತ್ತದೆ. ಹಣ ನಮ್ಮ ಹತ್ತಿರ ಇದ್ದು ಬಡ್ಡಿ ಕೊಟ್ಟಲ್ಲಿ ಸರ್ಕಾರಕ್ಕೆ ನಷ್ಟ. ಆದ್ದರಿಂದ ಕ್ಯಾಪಿಟಲ್ ವರ್ಕ್ಸ್‌ಗೆ, ಈ ಸಾಲದಿಂದಲೂ, ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್‌ನಿಂದಲೂ, ಇನ್‌ಷ್ಯೂರೆನ್ಸ್ ಫಂಡ್‌ನಿಂದಲೂ ಹಣವನ್ನು ಉಪಯೋಗಿಸಿಕೊಂಡು ಅದರ ಮೇಲೆ ಸರ್ಕಾರದವರು ಬಡ್ಡಿ ಕೊಡುತ್ತಾರೆ. ಆದರೆ ಅಕಸ್ಮಾತ್ತಾಗಿ ಆಯಾಯಾ ಡಿಪಾಸಿಟರುಗಳು ಹಣ ವಾಪಸು ಕೇಳಿದರೆ ಕೊಡಬೇಕಾಗುತ್ತದೆ. ಆದ್ದರಿಂದ ಇಷ್ಟು ಪರ್ಸೆಂಟೇಜು ಇಟ್ಟುಕೊಳ್ಳುತ್ತೇವೆ, ಎಂಬುದಾಗಿ ನಿಯಮ ಮಾಡಿಕೊಂಡು ಅಷ್ಟು ಪರ್ಸೆಂಟೇಜ್ ಇಟ್ಟುಕೊಂಡು, ಮಿಕ್ಕಿದ್ದನ್ನು ಕ್ಯಾಪಿಟಲ್ ವರ್ಕ್ಸ್‌ಗೆ ಖರ್ಚು ಮಾಡುವುದು ಬಹಳ ಹಿಂದಿನಿಂದ ಬಂದಿರತಕ್ಕ ಪದ್ಧತಿ. ಹೊಸದಾಗಿ ಕಾಂಗ್ರೆಸ್‌ನವರು ಮಾಡಿದ ಪದ್ಧತಿ ಅಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಪರ್ಸೆಂಟೇಜ್ ಇಡಬೇಕಾಗಿತ್ತೊ ಅಷ್ಟು ಪರ್ಸೆಂಟೇಜ್ ತೆಗೆದಿಡಲಾಗಿದೆಯೇ? ಆ ನಿಯಮವನ್ನು ಈ ವರ್ಷದ ಬಡ್ಜೆಟ್‌ನಲ್ಲಿ ಉಲ್ಲಂಘಿಸಿಲ್ಲವೇ?

Sri K. HANUMANTHAIYA.—I am making this responsible statement. So long as the prescribed percentages are invested and demands are met, these surplus funds have to be invested in National Assets for the welfare of the people.

ಈಗ ತಾವು ಒಂದು ಪರ್ಸೆಂಟೇಜ್ ಇಡಬೇಕೆಂದು ಏನು ಹೇಳಿದರೋ ಆ ಪರ್ಸೆಂಟೇಜು ಮೈಸೂರು ಸರ್ಕಾರ ಇಟ್ಟಿರತಕ್ಕದ್ದು ಇಂಡಿಯಾ ಸರ್ಕಾರ ಇಟ್ಟಿರತಕ್ಕ ಪರ್ಸೆಂಟೇಜ್‌ಗಿಂತಲೂ ಹೆಚ್ಚಾಗಿದೆ. ಆ ದೃಷ್ಟಿಯಿಂದ ಈ ಡಿಪಾಸಿಟ್‌ನಲ್ಲಿ ಒಂದು ಭಾಗವನ್ನು ಖರ್ಚು ಮಾಡದೆಯೇ ಹಾಗೆ ಇಟ್ಟುಕೊಂಡಿದ್ದೇವೆ. It is a conservative measure that we have taken. So far as that position is concerned it is safe and sound and I can assure you about that. ಅಷ್ಟು ಇಡಬೇಕಾಗಿಲ್ಲ. ಆದರೂ ಸೇಫ್ಟಿ ಗೋಸ್ಕರ ಇಟ್ಟಿದ್ದೇವೆ.

What is required is that we have to maintain a comfortable balance to meet our commitments and our cash balance is more than ample for the normal demands on Treasuries.

ಈ ಸಂದರ್ಭದಲ್ಲಿ ಒಂದು ಅಂಶವನ್ನು ಈ ಸಭೆಗೆ ಸವಿನಯವಾಗಿ ಹೇಳಬೇಕಾಗಿದೆ. ನಮಗೆ ಯಾರೂ ಸಾಲ ಕೊಡುವುದಿಲ್ಲ, ಎಲ್ಲೂ ಸಾಲ ಸಿಕ್ಕುವುದಿಲ್ಲ ಎಂಬ ಒಂದು ಕೂಗು ಇದೆ. ನಮ್ಮ ಡಿಪಾಸಿಟ್‌ಗಳು ಈ ರೀತಿ ಸಾಕಷ್ಟು ಇದ್ದರೂ ಕೂಡ ತಮ್ಮಂತಹ ಮಾನ್ಯ

ಸದಸ್ಯರು ಈ ತರಹ 'ರಿಸರ್ವ್‌ಫಂಡ' ಪೋಲಾಗಿದೆ. ಡಿಫಾಸಿಟ್ ಸಾಕಷ್ಟು ಇಲ್ಲ' ಎಂದು ಬೊಬ್ಬೆ ಎಬ್ಬಿಸಿದರೆ ಬರತಕ್ಕ ಸಾಲ ಸುಲಭವಾಗಿ ಸಿಕ್ಕುವುದಿಲ್ಲ ಎಂಬುದು ತಮಗೇ ತಿಳಿಯುತ್ತದೆ.

In your anxiety to harm the Congress Party if you do not admit................

Janab J. MOHAMED IMAM—I take exception to that. On the first day alone I said that we criticise in the interests of the State and it is a healthy criticism. As party men we may differ in our views. But that does not interfere with our friendship or dealings with each other. Let not the Chief Minister misunderstand us.

Mr. SPEAKER.—Why does the Leader of the Opposition not consider that the Chief Minister's reply is also in the interest of the State?

Janab J. MOHAMED IMAM.—Supposing by imputing personal motives they try to harm my party, that would be base on their part and if I try to harm their party, it would be base on my part.

Sri L. SIDDAPPA.—Further, with your permission I may say a few words.

ನಾವೇನೊ ಎದುರು ಪಕ್ಷದವರು, 'ಸರ್ಕಾರದವರು ಸಾಲ ಎತ್ತುವುದಕ್ಕೆ ಹೊರಟರೆ ಸಾಲ ಸಿಕ್ಕುವುದಿಲ್ಲ' ಎಂದು ಬೊಬ್ಬೆ ಎಬ್ಬಿಸಿದ್ದರಿಂದ ತಮಗೆ ಸಾಲ ಸಿಕ್ಕುವುದಿಲ್ಲವೆಂದು ಹೇಳುವ ವಾದ ಸರಿಯಲ್ಲ. ಏಕೆಂದರೆ ಸಾಲ ನಿಮಗೆ ಕೊಡುವವರಾದರೂ ಬೊಂಬಾಯಿ, ಮದ್ರಾಸ್ ಮುಂತಾದ ಕಡೆಗಳಲ್ಲಿನ ಲಕ್ಷಾಧೀಶರೇ ಹೊರತು ಇಲ್ಲಿನವರಲ್ಲ. ಅವರೇನೂ ನಾವಿಲ್ಲ ಮಾಡಿದ ಭಾಷಣಗಳನ್ನು ನೋಡಿ ಸಾಲ ಕೊಡುವುದಿಲ್ಲ. ತಾವು ಸರ್ಕಾರದವರು ಏನು ತಯಾರು ಮಾಡಿ ಬಡ್ಜೆಟ್ಟನ್ನು ಜನರ ಮುಂದಿಟ್ಟಿದ್ದೀರೋ. ಅದನ್ನೂ ಹಾಗೂ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಗಳನ್ನೂ, ನಿಮ್ಮ assets ಮತ್ತು liabilities ಏನಿವೆ, ನಿಮ್ಮ ರಿಸರ್ವ್ಸ್ ಎಷ್ಟಿವೆ ಇವುಗಳನ್ನೂ ನೋಡಿ ಕೊಡುತ್ತಾರೆ. ಆದ್ದರಿಂದ ನಾವು ಈ ಬಡ್ಜೆಟ್ಟಿನ ಮೇಲೆ ಮಾಡಿದ ಟೀಕೆ ನಿಮ್ಮ ಪ್ರೋಗ್ರಾಮಿಗೆ damage ಉಂಟು ಮಾಡುತ್ತಿದೆಂದಾಗಲಿ, ಕಾಂಗ್ರೆಸ್ ಪಾರ್ಟಿಗೆ ಧಕ್ಕೆತರುತ್ತದೆಯೆಂದಾಗಲಿ ಹೇಳುವುದು ನ್ಯಾಯವಲ್ಲ.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ)—ತಾವು ಹೇಳುವುದೆಲ್ಲಾ Principles of Public Finance ಮೇಲಿನ ಚರ್ಚೆ ಆಯಿತೇ ಹೊರತು ಇನ್ನೂ ಫೈನಾನ್ಸ್ ಸಚಿವರ ಭಾಷಣವೆಂಬುದು ಶುರುವೇ ಆಗಿಲ್ಲವಲ್ಲ!

ಶ್ರೀ ಕೆ. ಹನುಮಂತಯ್ಯನವರು.—ಆದ್ದರಿಂದ ನನ್ನ ಸವಿನಯ ಪ್ರಾರ್ಥನೆ ಇಷ್ಟೆ. ಸಭೆಯಲ್ಲಿ ಅದು ಇಂಥವರಿಗೇ ಅನ್ವಯಿಸುತ್ತದೆ, ಅಂಥವರಿಗೇ ಅನ್ವಯಿಸುತ್ತದೆ ಎಂದು ಹೇಳುವ ಗೊಡವೆಗೆ ಹೋಗದೆ, ಇಷ್ಟು ಮಾತ್ರ ಹೇಳುತ್ತೇನೆ—ಮೈಸೂರು ದೇಶದ ಆರ್ಥಿಕ ಪರಿಸ್ಥಿತಿಯನ್ನು ಟೀಕಿಸುವುದಕ್ಕೆ ಮೊದಲು, ಮೈಸೂರು ದೇಶದಲ್ಲಿ ತಯಾರಾಗತಕ್ಕ ಕೈಗಾರಿಕಾ ಸಾಮಾನುಗಳ ವಿಷಯವನ್ನು ಟೀಕಿಸುವುದಕ್ಕೆ ಮೊದಲು, ಅದರಿಂದ ಸಂಸ್ಥಾನಕ್ಕೂ, ಆ ಕೈಗಾರಿಕೆಗಳಿಗೂ ಅಪಾಯ ಬಂದೀತು ಎಂಬ ಭಾವನೆಯನ್ನು ಮೊಟ್ಟಮೊದಲು ಅವರು ಮನಸ್ಸಿನಲ್ಲಿ ತಂದುಕೊಂಡು ಅನಂತರ ಟೀಕೆಗಳನ್ನು ಮಾಡಲಿ ಎಂದು ಬಿನ್ನವಿಸಿಕೊಳ್ಳುತ್ತೇನೆ.

Janab J. MOHAMED IMAM.—We have also invested very heavily on the industrial concerns.

Sri A. BHEEMAPPA NAIK.—So, be more responsible.

Mr. SPEAKER.—Order, Order.

ಶ್ರೀ ಕೆ. ಹನುಮಂತಯ್ಯನವರು.—ಇನ್ನು ಈ ಚರ್ಚೆಯಲ್ಲಿ ಬಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಶ್ರೀಮಾನ್ ಶಂಕರಲಿಂಗೇಗೌಡರು ಒಂದು ಪುಸ್ತಕವನ್ನೇ ಬರೆದು ನನ್ನ ಕೈಯಲ್ಲಿಟ್ಟಿದ್ದಾರೆ. ಅನೇಕರು ಶಂಕರಲಿಂಗೇಗೌಡರು ಬರೆದ ಪುಸ್ತಕಗಳನ್ನು ಅಷ್ಟು ನಿಗಾ ಇಟ್ಟು ಓದಬೇಕಾಗಿಲ್ಲವೆಂದು ಭಾವಿಸಿದ್ದಾರೆ. ಆದರೆ ಸ್ವಲ್ಪ ನಿಗಾ ಇಟ್ಟು ಓದಿ ನೋಡಿ! ಎಷ್ಟು ಶ್ರಮಪಟ್ಟು ಅಂಕಿ ಅಂಶಗಳನ್ನು ಅವರು ಸಂಗ್ರಹಿಸಿದ್ದಾರೆಂಬುದನ್ನು ತಾವೇ ಕಾಣುತ್ತೀರಿ. ಅಷ್ಟು ಅಧ್ಯಯನ ಮಾಡಿ, ಅಂಕಿ ಅಂಶಗಳನ್ನು ಹುಡುಕಿ ತಮ್ಮ ಸ್ವಂತ ಖರ್ಚಿನಿಂದ ದೇಶಕ್ಕೇನಾದರೂ ಒಳ್ಳೆಯದಾಗಲಿ ಎಂಬ ಆಕಾಂಕ್ಷೆಯಿಂದ ಒಂದು ಪುಸ್ತಕವನ್ನು ಪ್ರಿಂಟ್ ಮಾಡಿಸತಕ್ಕ ಜನರು ನಮ್ಮಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಕೈಬೆರಳಿಟ್ಟು ತೋರಿಸಲಿ, ನೋಡೋಣ! ನಾನಾದರೋ ಸರ್ಕಾರದ ಪರವಾಗಿ ಹೇಳುತ್ತೇನೆ, ಅವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಅದರಿಂದ ಪಡೆಯಬಹುದಾದ ಸಹಾಯವನ್ನು ಪಡೆಯಬೇಕೆಂಬುದೇ ನನ್ನ ಆಸೆ...............

ಶ್ರೀ ಎಂ. ಶಂಕರಲಿಂಗೇಗೌಡರು.—ಆ ಪುಸ್ತಕದ ಹೆಸರನ್ನಾದರೂ ಹೇಳಿ.

ಶ್ರೀ ಕೆ. ಹನುಮಂತಯ್ಯನವರು.—ಆಗಬಹುದು. ಆ ಪುಸ್ತಕದ ಹೆಸರು 'A Note on the Village Administration in Mysore State.' ಅಲ್ಲಿರತಕ್ಕ ವಿಷಯ ಸಂಸ್ಥಾನವನ್ನು ರೆವಿನ್ಯೂ ಆಡಳಿತಕ್ಕಾಗಿ ಈಗೇನು ಹಂಚಿಕೆ ಮಾಡಿದೆಯೋ ಅದನ್ನು ಪುನರ್ವ್ಯವಸ್ಥೆ ಮಾಡಬೇಕು ಎಂಬುದು. ಆ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಪಟ್ಟಾಭಿರಾಮನ್‌ರವರೂ ಇದೇ ಅಭಿಪ್ರಾಯ ಪಟ್ಟಿದ್ದಾರೆ. ನನ್ನ ಮನಸ್ಸು ಇದುವರೆಗೂ ಆ ಸಲಹೆಯ ಕಡೆ ಅಷ್ಟಾಗಿ ಹೋಗಿರಲಿಲ್ಲ. ಏಕೆಂದರೆ, ಅನೇಕ ಮಾನ್ಯ ಸದಸ್ಯರು ಈ ರೀತಿ ಎರಡು ಮೂರು ಡಿಸ್ಟ್ರಿಕ್ಟ್‌ಗಳನ್ನು ಒಂದು ಮಾಡುವುದನ್ನು ಒಪ್ಪುವುದಿಲ್ಲ. "ನಮ್ಮ ಡಿಸ್ಟ್ರಿಕ್ಟನ್ನು ಇನ್ನೊಂದು ಡಿಸ್ಟ್ರಿಕ್ಟಿಗೆ ಸೇರಿಸಿಬಿಡುತ್ತೀರಲ್ಲಾ, ನಮ್ಮ ತಾಲ್ಲೂಕನ್ನು ಇನ್ನೊಂದು ತಾಲ್ಲೂಕಿಗೆ ಸೇರಿಸಿಬಿಡುತ್ತೀರಲ್ಲಾ" ಎಂದು ಆಕ್ಷೇಪಣೆ ಮಾಡುತ್ತಾರೆ. ಆರ್ಥಿಕ ಸಚಿವನಾಗಿಯೂ ಮುಖ್ಯ ಮಂತ್ರಿಯಾಗಿಯೂ ಇರುವ ನನಗೆ ಈಗ ಬರುತ್ತಿರತಕ್ಕ ಆಕ್ಷೇಪಣೆಗಳೇ ಸಾಕು; ಅವೇ ನನಗೆ ತಲೆ ನೋವು ಉಂಟು ಮಾಡುವಷ್ಟಿವೆ. ಇನ್ನು ಇದೂ ಒಂದು ಆಕ್ಷೇಪಣೆ ಹೊತ್ತುಕೊಂಡು ಏಕೆ ಯೋಚನೆ ಮಾಡಬೇಕೆಂದು ನಾನು ಅದಕ್ಕೆ ಗಮನ ಕೊಟ್ಟಿರಲಿಲ್ಲ. ಆದರೆ ಈಗ ಮಾನ್ಯ ಸದಸ್ಯರು ಇಷ್ಟು ಹೇಳಿದ ಮೇಲೆ, ಆ ಸೂಚನೆಯನ್ನು ಅವಗಾಹನೆಗೆ ತೆಗೆದುಕೊಂಡು ಏನು ಕಾರ್ಯಕ್ರಮ ಕೈಕೊಳ್ಳಬೇಕೆಂಬುದನ್ನು ಆಲೋಚನೆ ಮಾಡುತ್ತೇನೆ.

(ಶ್ರೀ ಕೆ. ಹನುಮಂತಯ್ಯನವರು)

ಆಮೇಲೆ, ಕೈಗಾರಿಕೆಗಳ ವಿಚಾರವಾಗಿ ಬಹಳ ಕಟುವಾಗಿ ಮಾನ್ಯ ಸದಸ್ಯರು ಟೀಕೆ ಮಾಡಿದರು. ಆದರೆ ಅನಾವಶ್ಯಕವಾಗಿತ್ತು. ಏಕೆಂದರೆ, ಈಗಿರತಕ್ಕ ಕೈಗಾರಿಕೋದ್ಯಮಗಳನ್ನು ಇನ್ನೂ ಹೆಚ್ಚಿನ ದಕ್ಷತೆಯಿಂದ, ಇನ್ನೂ ಹೆಚ್ಚಿಗೆ ಲಾಭ ಬರುವ ದೃಷ್ಟಿಯಿಂದ ಪುನರ್ವ್ಯವಸ್ಥೆ ಮಾಡಬೇಕೆಂಬ ನೀತಿಯನ್ನು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಆ ವ್ಯವಸ್ಥೆ ಯಾವ ರೂಪವನ್ನು ತಾಳುತ್ತದೆಯೆಂಬುದನ್ನು ಇನ್ನೂ ಸರ್ಕಾರದವರು ಯೋಚನೆ ಮಾಡಿಲ್ಲವೆಂದು ಮಾತ್ರ ಹೇಳುತ್ತೇನೆ. ಸರ್ಕಾರಿ ಕೈಗಾರಿಕೆಗಳಲ್ಲಿ ಒಂದು ದೊಡ್ಡ ಲೋಪವಿದೆ. ಒಂದು ಕೈಗಾರಿಕೋದ್ಯಮದಲ್ಲಿ ಲಾಭವಾಗಲಿ, ನಷ್ಟವಾಗಲಿ ಅಲ್ಲಿನ ಜನರಲ್ ಮ್ಯಾನೇಜರಿಂದ ಹಿಡಿದು ಒಬ್ಬ ಜವಾನನವರೆಗೂ ಈಗ ಯಾರೂ ಅದನ್ನು ಲೆಕ್ಕಕ್ಕೇ ತೆಗೆದುಕೊಳ್ಳುವಂತೆ ಕಂಡುಬಂದಿಲ್ಲ. ಕೈಗಾರಿಕೆ ಚೆನ್ನಾಗಿ ನಡೆಯದೆ ನಷ್ಟ ಹೊಂದಿದರೆ ತಮಗೂ ಕಷ್ಟ ಬರುತ್ತದೆ, ಕೈಗಾರಿಕೆ ಚೆನ್ನಾಗಿ ಕೆಲಸ ಮಾಡಿ ಲಾಭ ಹೊಂದಿವರೆ ತಮಗೂ ಸ್ವಲ್ಪ ಹೆಚ್ಚು ಲಾಭ ಬರುತ್ತದೆ ಎಂಬ ಯೋಚನೆಯೇ ಅವರಿಗಿಲ್ಲ. ಸರ್ಕಾರಿ ಅಧಿಕಾರಿಗಳಿಗೆ ಹೇಗೆ ಏನೇ ಆಗಲಿ ತಿಂಗಳು ಕೊನೆಗೆ ಅವರ ಸಂಬಳ ಅವರಿಗೆ ಬರುತ್ತದೆಯೋ ಹಾಗೆಯೇ ತಮಗೂ ಸಂಬಳ ಬರುತ್ತದೆಯೆಂಬ ಮನೋಭಾವ ಅವರಲ್ಲಿ ಬೆಳೆದಿದೆ. ಆದ್ದರಿಂದಲೇ ರಾಜಪ್ರಮುಖರ ಭಾಷಣದಲ್ಲೂ ಮತ್ತು ನನ್ನ ಭಾಷಣದಲ್ಲೂ ಈ ಕೈಗಾರಿಕೋದ್ಯಮಗಳನ್ನು Business lines ಮೇಲೆ ನಡೆಯುವಂತೆ ಮಾಡಬೇಕೆಂದು ಹೇಳಿದ್ದೇವೆ. ಇನ್ನು ಮುಂದೆ ಕೆಲಸಗಾರರಲ್ಲೇ ಆಗಲಿ ಮ್ಯಾನೇಜ್‌ಮೆಂಟಿನವರಲ್ಲೇ ಆಗಲಿ ತಮ್ಮ ತಮ್ಮ ಕೈಗಾರಿಕೆಯ ವಿಷಯದಲ್ಲಿ ಅಭಿಮಾನ ಮತ್ತು ಭಯಗಳು ಹುಟ್ಟಬೇಕು. ಹೆಚ್ಚಿನ ಲಾಭ ಬಂದರೆ ಪ್ರಯೋಜನ ಪಡೆಯುವವನೂ ತಾನೇ ಎಂಬ ಅಭಿಮಾನವೂ, ಕೈಗಾರಿಕೆಗೆ ನಷ್ಟ ಸಂಭವಿಸಿದರೆ ಕಷ್ಟ ಅನುಭವಿಸುವವನೂ ತಾನೇ ಎಂಬ ಭಯವೂ ಆತನಲ್ಲಿ ಉಂಟಾಗಬೇಕು. ಕೇಂದ್ರ ಸರ್ಕಾರದವರೂ ಈ ಹೊಸ ನೀತಿಯನ್ನು ಅನೇಕ ಸಮಿತಿಗಳಲ್ಲಿ ಆಲೋಚನೆ ಮಾಡಿದ್ದಾರೆ. ಈ ರೀತಿಯಾಗಿ ಅಭಿಮಾನ, ಭಯ— ಎರಡೂ ಇರತಕ್ಕ ಒಂದು ವ್ಯವಸ್ಥೆ ಮಾಡಬೇಕೆಂಬುದೇ ಸರ್ಕಾರದವರ ಉದ್ದೇಶ.

ಪಾನ ನಿರೋಧ ನೀತಿಯನ್ನು ಅನೇಕರು ಪ್ರಸ್ತಾಪ ಮಾಡಿದರು. ಜನಾಬ್ ಇಮಾಂರವರೂ ಕೂಡ ಈ ಪಾನ ನಿರೋಧ ನೀತಿಯನ್ನು ರದ್ದುಮಾಡಿ ಎಂದು ವಾದವನ್ನು ಹೂಡಿದರು. ಸೋಷಿಯಲಿಸ್ಟ್ ಪಾರ್ಟಿಯವರೂ ಪಾನನಿರೋಧವನ್ನು ರದ್ದು ಮಾಡಬೇಕೆಂದು ಹೇಳಿದರು. ನಾನು ಅವರು ಹೇಳಿದ್ದನ್ನು ಟೀಕಿಸಲು ಹೋಗುವುದಿಲ್ಲ; ಅವರು ಸ್ವಲ್ಪ ವಿಷಯವನ್ನು ಮಥನ ಮಾಡಬೇಕೆಂದು ಮಾತ್ರ ಪ್ರಾರ್ಥನೆ ಮಾಡುತ್ತೇನೆ. ತಪ್ಪೋ! ಸರಿಯೋ, ಪಾನನಿರೋಧದಿಂದ ಬಡವರಿಗೆ ಉಪಯೋಗವಾಗುತ್ತದೆಂಬ ನಂಬಿಕೆಯಿಂದ ಇದನ್ನು ಜಾರಿಗೆ ತಂದಿದೆ. ಕೆಲವರಿಗೆ ಬಹುಶಃ ಜ್ಞಾಪಕವಿರಬಹುದು. 1938ನೆಯ ಇಸವಿಯಲ್ಲಿ ನಾನು ಒಂದು-ಒಂದೂವರೆ ತಿಂಗಳ ಕಾಲ ಕ್ಲೋಸ್‌ಪೇಟೆ ತಾಲ್ಲೂಕಿನಲ್ಲಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿ ಹೋದಾಗ್ಗೆ ಒಂದು ದೊಡ್ಡ ಅಧ್ಯಾಯವೇ ಆಯಿತು. ಆಗ ನನಗೆ ಕಂಡುಬಂದುದು, ಪಾನದ ದೆಸೆಯಿಂದ ಬಹಳ ಕಷ್ಟಕ್ಕೆ ತುತ್ತಾಗಿರುವವರು ಹರಿಜನರು ಎಂಬುದು. ಮೈಸೂರು ದೇಶದಲ್ಲಿ ಹರಿಜನರ ಸಂಖ್ಯೆ ಬಹಳ ಜಾಸ್ತಿಯಾಗಿದೆ; ಅವರೆಲ್ಲರೂ ಬಹುಮಟ್ಟಿಗೆ ಬಡವರು ಎಂದರೆ ಉತ್ಪ್ರೇಕ್ಷೆಯಲ್ಲ; ಅಂಥಾದ್ದರಲ್ಲಿ ಈ ಬಡವರನ್ನು ಇನ್ನೂ ಹೆಚ್ಚಿನ ಬಡತನಕ್ಕೆ ಇಳಿಸಿ ಅದರಿಂದ ದುಡ್ಡು ಗಳಿಸುವುದು ನ್ಯಾಯಸಮ್ಮತವಾದದ್ದಲ್ಲವೆಂದು ನಾನು ತಿಳಿಯುತ್ತೇನೆ.

ಎರಡನೆಯದಾಗಿ, ಸಾಮಾಜಿಕ ದೃಷ್ಟಿಯಿಂದಲೂ ಕೂಡ ಕುಡಿತ ಕುಡಿಕನನ್ನು ಅವಹೇಳನಕ್ಕೆ ಗುರಿಮಾಡುವ ವಸ್ತು. ಇದರ ದೆಸೆಯಿಂದ ಹರಿಜನರು ಮತ್ತಷ್ಟು ಅವನತಿಗೆ ಇಳಿಯುತ್ತಿರುವುದು ನಮಗೆಲ್ಲ ಗೊತ್ತಿದೆ.

ಶ್ರೀ ಎ. ಶಂಕರಲಿಂಗೇಗೌಡರು.—ಹರಿಜನರು ಬರುವುದರೊಳಗೆ ಮುಗಿದುಹೋಗಿರುತ್ತದೆ. ಮೂರು ಗಂಟೆಗೇ ಸಿಕ್ಕುವುದಿಲ್ಲ! (ನಗು!)

ಶ್ರೀ ಕೆ. ಹನುಮಂತಯ್ಯನವರು.—ಷೆಡ್ಯೂಲ್ಡ್ ಕ್ಯಾಸ್ಟ್ ಜನರು ಎಂದರೆ ಒಡ್ಡರು, ಹರಿಜನರು, ಲಂಬಾಣಿಗಳು ಅಲ್ಲದೆ ಸ್ವಲ್ಪ ಸಂಖ್ಯೆಯಲ್ಲಿ ಸವರ್ಣದವರು, ಇವರು ಕುಡಿದು ಆರ್ಥಿಕ ಮತ್ತು ಸಾಮಾಜಿಕ ಅವನತಿಗೆ ಈಡಾಗಿ ಇಳಿದು ಹೋಗುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಪಾನ ನಿರೋಧವನ್ನು ಜಾರಿಗೆ ತಂದೆವು. ಇದರಲ್ಲಿ ನಮಗೆ ಯಶಸ್ಸು ದೊರಕಲಿಲ್ಲವೆಂದು ಹೇಳಿದರು. ಈ ಸಂದರ್ಭದಲ್ಲಿ ಕೈಗಾರಿಕೆಗಳ ವಿಷಯದಲ್ಲಿ ಯಾವ ರೀತಿ ಹೇಳಿದೆನೋ ಹಾಗೆಯೇ ಹೇಳಬೇಕಾಗಿದೆ. ಇಲ್ಲಿರುವ ಮಹನೀಯರು ಪಾನ ನಿರೋಧ ಯಶಸ್ವಿಯಾಗಲಿಲ್ಲ ಎಂದು ಹೇಳುವುದಕ್ಕೆ ಪ್ರಾರಂಭ ಮಾಡಿದರೆ ಯಶಸ್ವಿಯಾಗುವುದೇ ಇಲ್ಲ. ಏಕೆಂದರೆ, ಇದು ಪ್ರಜಾಪ್ರಭುತ್ವಯುಗ. ಅಂತ್ಯಜರೆಂದು ಯಾರನ್ನು ಹೇಳುತ್ತಾರೋ ಅವರನ್ನು ಮುಂದೆ ತರಬೇಕೆಂದು ಮಾಡಿದ ಈ ನಿರೋಧ ನೀತಿಯಿಂದ ಯಶಸ್ಸು ದೊರಕಿದರೆ ಇದರಿಂದ ಕಾಂಗ್ರೆಸ್ ಒಂದಕ್ಕೇ ಅಲ್ಲ, ಎಲ್ಲರಿಗೂ ಕೀರ್ತಿ ದೊರಕುತ್ತದೆ. ಕಾಂಗ್ರೆಸ್ಸಿನವರು ಮಾತ್ರ ಕೈಕೊಂಡಿರತಕ್ಕ ಈ ನೀತಿಯನ್ನು ಟೀಕಿಸಿ ಸಂತೋಷಪಟ್ಟು ಸುಮ್ಮನಾದರೂ ದೇಶಕ್ಕೆ ಒಳ್ಳೆಯದಾದಂತಾಗುವುದಿಲ್ಲ. ತಾವು ಇನ್ನೂ ಕೊಂಚ ಮುಂದೆ ಹೋಗಿ ಎಲ್ಲೆಲ್ಲಿ ಕಳ್ಳಭಟ್ಟಿ ಸಾರಾಯಿ ಮಾಡುತ್ತಾರೋ, ಎಲ್ಲಿ ಪಾನ ನಿರೋಧಕ್ಕೆ ಆತಂಕವಿದೆಯೋ ಅದನ್ನು ನಿವಾರಣೆಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಸ್. ಗೋಪಾಲಗೌಡರು.—ಉದ್ದೇಶವನ್ನು ಯಾರೂ ಪ್ರಶ್ನೆ ಮಾಡುವುದಿಲ್ಲ. ಆದರೆ ಈ ರೀತಿ ಕೈಗೆ ಕೋಳ ಹಾಕಿ ಹಿಡಿತಕ್ಕೆ ತರುವುದು ಸಾಧ್ಯವೆ ಎಂಬುದು ಪ್ರಶ್ನೆ.

ಶ್ರೀ ಕೆ. ಹನುಮಂತಯ್ಯನವರು.—ನಾನು ಮೊದಲೇ ಹೇಳಿದಹಾಗೆ ತಪ್ಪಿತಸ್ಥರನ್ನು ಶಿಕ್ಷೆಮಾಡುವುದು ಸರ್ಕಾರದ ಕರ್ತವ್ಯ. ಈ ಕೆಲಸದಲ್ಲೇನೂ ಹಿಂಜರಿಯುವುದಿಲ್ಲ.

ಪಾನ ನಿರೋಧ ವಿಚಾರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರಸ್ತಾಪಮಾಡಬೇಕೆಂದು ತಮ್ಮ ಅನುಮತಿ ಬೇಡುತ್ತೇನೆ. ನಾನು ಡೆಲ್ಲಿಯಲ್ಲಿ ಉನ್ನತ ಅಧಿಕಾರಿಗಳೆಂದು ಯಾರನ್ನು ಹೇಳುತ್ತಾರೋ ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಕಮ್ಯಾಂಡರ್ ಇನ್‌ಚೀಫನಿಂದ ಹಿಡಿದು ಬ್ರಿಗೇಡಿಯರ್‌ವರೆಗೂ ಮತ್ತು ಐ. ಸಿ. ಎಸ್. ಸೆಕ್ರೆಟೆರಿಗಳು ಉನ್ನತ ಅಧಿಕಾರಿಗಳು, ದೊಡ್ಡ ದೊಡ್ಡ ವ್ಯಕ್ತಿಗಳು ಇವರನ್ನೆಲ್ಲಾ ನೋಡಿದ್ದೇನೆ. ಮೈಸೂರು ದೇಶದಲ್ಲಿರುವ ಅಧಿಕಾರವರ್ಗ ಅದಕ್ಕೆ ಸೇರುವುದಿಲ್ಲ, ಇಲ್ಲೇ ಬೇರೆ ಪರಿಸ್ಥಿತಿಯಿದೆ. ಎಲ್ಲವನ್ನೂ ನೋಡಿದರೆ, ಪಾನನಿರೋಧ ರದ್ದಾಗಬೇಕೆಂದು ಬೊಬ್ಬೆ ಎಬ್ಬಿಸಿರುವವರು upper classes. ಬ್ರಾಂದಿ, ವಿಸ್ಕಿ

ಮುಂತಾದ foreign liquors ಮುಂತಾದುವನ್ನು ಕುಡಿಯುವ ಅಭ್ಯಾಸ ಮಾಡಿಕೊಂಡಿದ್ದಾರೆ ಕೆಲವರು. ಅಂಥವರು ಇದರಿಂದ ಒಳ್ಳೆಯದಾಗಬಹುದೆಂದು ತಿಳಿದುಕೊಂಡಿರಬಹದು. ಈ ವಿಷಯದಲ್ಲಿ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಅಂತೂ This upper strata of society is vociferous against prohibition. The poorer strata of society thinks that it is a boon conferred on them. ಆದುದರಿಂದ ಇದು ನಾನಾಗಿ ನಾನೇ ನಿರ್ಧಾರ ಮಾಡತಕ್ಕ ವಿಷಯವಲ್ಲ. ಕಾಂಗ್ರೆಸ್ ಸಂಸ್ಥೆ, ಸರ್ಕಾರಗಳು ಎಲ್ಲರೂ ಯೋಚನೆಮಾಡಿ ತೀರ್ಮಾನ ಮಾಡಬೇಕಾದ ವಿಷಯ. ನನಗೆ ಅನ್ನಿಸುತ್ತದೆ: This upper strata of society who want to drink, let them drink to death, if they want. But merely because they are vociferous we should not make this lower strata of society suffer on account of their demand. ಆದುದರಿಂದ ಮುಂದೆ ಪಾನನಿರೋಧ ನೀತಿಯನ್ನು ಮಾರ್ಪಾಡು ಮಾಡಬೇಕಾದರೆ ಈ foreign liquors ಉಪಯೋಗಿಸುವ upper strata of societyಯ ಮೇಲೆ ಹೆಚ್ಚು ತೆರಿಗೆ ಹಾಕಿ ನೀವು ಏನಾದರೂ ಮಾಡಿಕೊಳ್ಳಿ, ಎಂದು ಹೇಳಿ ಬಡವರೂ ಹರಿಜನರೂ ಇರುವ ಕಡೆ, ಹಳ್ಳಿಗಳಲ್ಲಿ ಪಾನ ನಿರೋಧವನ್ನು ಜಾರಿಗೆ ತಂದರೆ ಒಳ್ಳೆಯದೆಂದು ಕಾಣುತ್ತದೆ. We can open licensed shops for fashionable people.

ಹೀಗೆ ಪಾನ ನಿರೋಧ ನೀತಿಯನ್ನು ಯಾರೂ ತೀವ್ರವಾಗಿ ಟೀಕಿಸಿ, ಕುಡಿಯುವುದಕ್ಕೆ ಬೇಕೇ ಬೇಕು ಎಂದು ಹೇಳುತ್ತಾರೋ ಅವರಿಗೆ ಲೈಸೆನ್ಸ್ ಮೇಲೆ ಅವಕಾಶ ಕಲ್ಪಿಸಿಕೊಟ್ಟು ಬಡವರನ್ನು ದೂರವಾಗಿರುವ ಹಾಗೆ ಮಾಡಿ ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯವಾಗಲೆಂದು ನನ್ನ ಹಾರೈಕೆ.

ಅನಂತರ ಕೆ. ಜಿ. ಎಫ್. ವಿಚಾರವಾಗಿ ಕೆಲವು ಸದಸ್ಯರು ಮಾತನಾಡಿದ್ದಾರೆ ಮತ್ತು ಪ್ರಶ್ನೆಗಳನ್ನು ಹಾಕಿದ್ದಾರೆ. ಕೋಲಾರದ ಚಿನ್ನದಗಣಿ ವಿಚಾರವಲ್ಲಿ ಹೊಸದಾಗಿ ಒಪ್ಪಂದವಾಗಿದೆ. ಈ ಒಪ್ಪಂದ ದೇಶಕ್ಕೆ ಅಷ್ಟು ಅನುಕೂಲವಾದದ್ದಲ್ಲ ಎಂಬ ಅಭಿಪ್ರಾಯವನ್ನು ಜನಾಬ್ ಇಮಾಂರವರು ವ್ಯಕ್ತಪಡಿಸಿದ್ದಾರೆ. ನಾನು ಯಾವಾಗಲೂ ಸ್ಪಷ್ಟವಾಗಿ ನಿಷ್ಕಳಂಕವಾಗಿ ಮಾತನಾಡುವ ಮನುಷ್ಯ. ನನ್ನದೂ ಸ್ವಲ್ಪ ಹೆಚ್ಚು ಕಡಮೆ ಇದೇ ಅಭಿಪ್ರಾಯವಾಗಿದೆ. ಈ ಒಪ್ಪಂದ ಮಾಡಿದಾಗಿನಿಂದಲೂ ಕೂಡ ನನ್ನ ಮನಸ್ಸಿಗೆ ಏನೋ ಕಿರುಕುಳವಾಗುತ್ತಿದೆ. ಆದರೆ ಇದನ್ನು ಪರಿಶೀಲನೆ ಮಾಡಿ ನೋಡುವುದಕ್ಕೆ ನನಗೆ ಅವಕಾಶ ಸಿಕ್ಕಿರಲಿಲ್ಲ. ಈಗ ಒಪ್ಪಂದದ ಪ್ರಕಾರ ಕೆಲಸ ಕಾರ್ಯಗಳು ನಡೆಯುತ್ತಿವೆ ಎಂಬುದನ್ನು ನಿನ್ನೆ ಮೊನ್ನೆಯಿಂದ ಜನಾಬ್ ಇಮಾಂರವರು ಭಾಷಣ ಮಾಡಿದಮೇಲೆ ಅವಕಾಶ ಮಾಡಿಕೊಂಡು ನೋಡಿದೆ. ಆ ಕಂಪೆನಿಯವರು ತಮಗೆ ಹೆಚ್ಚು ಲಾಭ ಬರುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡಿರುತ್ತಾರೆ. ಇದು ಸ್ವಾಭಾವಿಕ. ಆದರೆ ಕಾಂಗ್ರೆಸ್ ಪಕ್ಷ ಅಥವಾ ಇತರ ಪಕ್ಷಗಳ ಯಾವ ಸದಸ್ಯರೇ ಆಗಲಿ, ದೇಶದ ಮತ್ತು ಸರ್ಕಾರದ ಹಿತವನ್ನು ರಕ್ಷಣೆ ಮಾಡಬೇಕಾದುದು ಪವಿತ್ರ ಕರ್ತವ್ಯ. ಈ ಕರ್ತವ್ಯವನ್ನು ನಾನು ಕೈಲಾದಮಟ್ಟಿಗೂ ಮಾಡುತ್ತೇನೆಂದು ಭರವಸೆಯನ್ನು ನೀಡುತ್ತೇನೆ.

ಶ್ರೀಮಾನ್ ಶಂಕರಲಿಂಗೇಗೌಡರು ಅನೇಕ ಸಾರಿ ಈ ಸಭೆಯಲ್ಲಿಯೂ ಬೇರೆ ಕಡೆಯೂ ಹೇಳುತ್ತಿರುತ್ತಾರೆ, ಬಾಕಿ ಎಲ್ಲಕ್ಕಿಂತ ಹೆಚ್ಚಾಗಿ ನೀರಾವರಿ, ಎಂದರೆ ಜಲಾಶಯಗಳನ್ನು ಕಟ್ಟುವ ಕೆಲಸಗಳನ್ನು ಸರ್ಕಾರ ಕೈಕೊಳ್ಳಬೇಕೆಂದು; ಇದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಂಬಿದ್ದೇನೆ. ನಮ್ಮ ಹಿಂದಿನ ಸರ್ಕಾರ ಪ್ರಾರಂಭಮಾಡಿರುವ ಮೂರು ಜಲಾಶಯಗಳ ಕೆಲಸವನ್ನು ಮುಗಿಸಬೇಕಾಗಿದೆ. ಇದಕ್ಕೋಸ್ಕರವಾಗಿಯೇ ಖೋತಾ ಬಡ್ಜೆಟ್ ಆದರೂ ಸುಮಾರು 15 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ತುಂಗ, ನುಗು ಈ ಅಣೆಕಟ್ಟುಗಳಿಗಾಗಿ ಇನ್ನು ಎರಡು ಮೂರ ಕೋಟಿ ರೂಪಾಯಿ ಆದರೆ ಸಾಕು. ಮುಖ್ಯವಾದ ಭದ್ರಾ ಜಲಾಶಯಕ್ಕೆ 20 ಕೋಟಿ ರೂಪಾಯಿಬೇಕು. ಈಗಿನಂತೆಯೇ ಖರ್ಚು ಮಾಡುವುದಾದರೆ, ಇವು ಮುಗಿಯುವುದಕ್ಕೆ ಅನೇಕ ವರ್ಷಗಳಾಗುತ್ತವೆ. ಇವು ಪೂರ್ತಿಯಾಗಿರುವುದನ್ನು ನಾವು ನೋಡುತ್ತೇವೋ ಇಲ್ಲವೋ ಗೊತ್ತಿಲ್ಲ. ತಾವೆಲ್ಲರೂ ಒಮ್ಮನಸ್ಸಿನಿಂದ, ಒಂದೇ ಧ್ವನಿಯಿಂದ ಜಾಗ್ರತೆ ಆಗಬೇಕು, ಇಂಡಿಯಾ ಸರ್ಕಾರದ ನೆರವು ಬೇಕೆಂದು ಕೇಳುತ್ತಿದ್ದೀರಿ. ಇದೇ ಸಕಾರದ ಅಭಿಪ್ರಾಯವೂ ಆಗಿದೆಯೆಂದು ವಂದನಾಪೂರ್ವಕವಾಗಿ ಹೇಳಬೇಕಾಗಿದೆ. ನನ್ನ ಬಡ್ಜೆಟ್ ಭಾಷಣದಲ್ಲಿ ಕೇಂದ್ರ ಸರ್ಕಾರ ಸಹಾಯ ಮಾಡಬೇಕೆಂದು ನಾನು ಏನು ಪ್ರಾರ್ಥಿಸಿ ಭಾಷಣ ಮಾಡಿದೆನೋ ಅದನ್ನು ಮದ್ರಾಸಿನ ಪ್ರಮುಖ ಪತ್ರಿಕೆಗಳಾದ ಹಿಂದೂ, ಮೇಲ್, ಎಕ್ಸ್‌ಪ್ರೆಸ್ ಇಂಥ ದೊಡ್ಡ ಪತ್ರಿಕೆಗಳು ಪುಷ್ಟೀಕರಿಸಿ ಸಂಪಾದಕೀಯವನ್ನು ಬರೆದಿವೆ. I must acknowledge my gratitude to them. ಆ ಪತ್ರಿಕೆಗಳು ಮೈಸೂರು ದೇಶದ ಹಿತಸಾಧನೆ ದೃಷ್ಟಿಯಿಂದ ಈ ಮೂರು ಯೋಜನೆಗಳು ಪೂರ್ಣವಾಗುವುದಕ್ಕೆ ಒತ್ತಾಸೆ ಕೊಡುವುದನ್ನು ಮುಂದುವರಿಸಿದರೆ, ಇದು ಸಫಲವಾಗುತ್ತದೆಂಬ ಭರವಸೆ ನನಗಿದೆ. ಇಷ್ಟೇ ಅಲ್ಲದೆ ದೊಡ್ಡ ದೊಡ್ಡ ಯೋಜನೆಗಳೆಲ್ಲವೂ ಉತ್ತರ ಇಂಡಿಯಾದಲ್ಲಿದ್ದು ಎಲ್ಲಿ ಆಹಾರ ಅಭಾವವಿದೆಯೋ, ಎಂದರೆ ದಕ್ಷಿಣ ಇಂಡಿಯಾದಲ್ಲಿ, ಅಂಥ ದೊಡ್ಡ ಯೋಜನೆಯನ್ನು ಹೆಚ್ಚಾಗಿ ಕೈಕೊಂಡಿಲ್ಲವೆಂದು ನಾನು ಹೇಳಿದೆ. ನಾನು ಕಾಂಗ್ರೆಸ್‌ನವನಾದರೂ ಕೇಂದ್ರ ಸರ್ಕಾರವನ್ನು ಟೀಕಿಸುವುದನ್ನು ಬಿಟ್ಟಿಲ್ಲ. ಅಲ್ಲದೆ ಕೃಷ್ಣರಾಜನಗರದಲ್ಲಿ ಈಚೆಗೆ ನಡೆದ ಎಂ. ಪಿ. ಸಿ. ಸಿ. ಅಧಿವೇಶನದಲ್ಲಿಯೂ ಕೂಡ ಒಂದು ನಿರ್ಣಯ ಮಾಡಿದ್ದಾರೆ. ಯಾವ ಪಕ್ಷದವರೇ ಆಗಲಿ, ಸೋಷಿಯಲಿಸ್ಟ್ ಅಥವ ಕಮ್ಯುನಿಸ್ಟರು ಯಾರೇ ಆಗಲಿ ಇದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲವೆಂದು ನನ್ನ ಭಾವನೆ.

This question is a non-party question. It is a general question which affects the welfare of the State. Let us work together in order to make the Government of India pay for the completion of these projects.

Sri Mulka GOVINDA REDDY.—We are all one with you.

Sri K. HANUMANTHAIYA.—Thank you very much.

ಈ ರೀತಿ ತಮ್ಮ ಒಮ್ಮತದ ಅಭಿಪ್ರಾಯವನ್ನು ಸಮರ್ಥಿಸಿದ ಸ್ಥಳೀಯ ಪತ್ರಿಕೆಗಳು ಮತ್ತು ಹೊರಗಡೆಯ ಪತ್ರಿಕೆಗಳ ಸಹಾಯದಿಂದ ನಾನು ಈ ವಿಷಯವನ್ನು ಡೆಲ್ಲಿಯಲ್ಲಿ ಪ್ರಸ್ತಾಪ ಮಾಡಿದರೆ ತಮ್ಮ ಮತ್ತು

(SRI K. HANUMANTHAIYA.)

ಪತ್ರಿಕೆಗಳ ಸಹಾಯದಿಂದ ಕೃತಕೃತ್ಯನಾಗುತ್ತೇನೆಂಬ ನಂಬಿಕೆ ಇದೆ. ಈ ದಿವಸ ಪ್ರಧಾನಿ ಪಂಡಿತ ಜವಹರಲಾಲರ ಹತ್ತಿರ ಒಂದು ಮಾತುಹೇಳಬೇಕೆಂದಿದ್ದೇನೆ. ಯಾವ ಸ್ಥಾನದಿಂದ ನಾನು ಭಾಷಣ ಮಾಡುತ್ತಿದ್ದೇನೋ ಅದು ಅವರ ಕೃಪೆಯಿಂದ ದೊರಕಿತೆಂದು ಹೇಳಿದರೆ ಉತ್‌ಪ್ರೇಕ್ಷೆಯಾಗಲಾರದು. ಅವರು ಕೊಟ್ಟ ಕೆಲಸ ಸಫಲವಾಗಬೇಕಾದರೆ ಈ ಸಹಾಯ ಅಗತ್ಯ ಎನ್ನುವ ಒಂದು ಮಾತನ್ನು ಒತ್ತಿ ಹೇಳಿ ಮುಂದೆ ಏನು ಮಾಡುತ್ತೇನೆ ಎಂಬುದನ್ನು ಈಗ ಹೇಳುವುದಿಲ್ಲ. ಅವರ ಸಹಾಯದಿಂದಲೇ ಈ ಕೆಲಸಗಳೆಲ್ಲಾ ನಡೆಯುತ್ತವೆಯೆಂಬ ಆಸೆಯು ನನಗಿದೆ. ಈ ಮಹಾ ಪ್ರಶ್ನೆಯಲ್ಲಿ ತಾವೆಲ್ಲರೂ ಒಮ್ಮನಸ್ಸಿನಿಂದಿರುವುದು, ತಮ್ಮೆಲ್ಲರ ಸೌಹಾರ್ದ ತೋರಿಸುತ್ತಿರುವುದು ಒಂದು ಶುಭ ಸೂಚನೆ. ಈ ಒಂದು ಧ್ಯೇಯದಿಂದ ನಾವು ಕೆಲಸ ಮಾಡಿದರೆ ಇದರಿಂದ ಬರತಕ್ಕ ಕೀರ್ತಿ, ಒಂದು ಪಾರ್ಟಿಗೆ ಸೇರಿದ್ದಲ್ಲ, ಅಥವಾ ನನಗೊಬ್ಬನಿಗೆ ಸೇರಿದ್ದಲ್ಲ. ಆ ಕೀರ್ತಿಗೆ ತಾವೆಲ್ಲರೂ ಸಮಭಾಗಿಗಳಾಗಬೇಕಾಗುತ್ತದೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ಅಗ್ರಿಕಲ್‌ಚರಲ್ ಪಾಲಿಸಿಯ ವಿಚಾರವಾಗಿ ಪ್ರಸ್ತಾಪಮಾಡಿದ್ದಾರೆ. ಶ್ರೀಮಾನ್ ಕೆ. ಪಟ್ಟಾಭಿರಾಮನ್‌ರವರು ಲ್ಯಾಂಡ್ ಪಾಲಿಸಿ ವಿಚಾರವಾಗಿ ಪ್ರಸ್ತಾಪಮಾಡಿದ್ದಾರೆ. ಈ ವಿಚಾರ ಸರ್ಕಾರದವರ ಅವಗಾಹನೆಯಲ್ಲೂ ಇದೆ. ಮುಂದೆ ನಾವು ಸೇರತಕ್ಕ ಅಧಿವೇಶನದಲ್ಲಿ ಇದನ್ನು ಪರಿಷ್ಕಾರ ಮಾಡೋಣ. ಈ ವಿಷಯದಲ್ಲಿ ಒಂದು ಪಾರ್ಟಿಗೂ, ಇನ್ನೊಂದು ಪಾರ್ಟಿಗೂ ಯಾವ ಬಿನ್ನಾಭಿಪ್ರಾಯಗಳೂ ಇಲ್ಲ. ಯಾವ ರೈತ ಸ್ವತಃ ಹೊಲವನ್ನು ಉಳುತ್ತಾನೋ ಅಥವಾ ಅದರಲ್ಲಿ ಕೆಲಸ ಮಾಡುತ್ತಾನೋ ಅಂತಹ ಮನುಷ್ಯನಿಗೆ ಹೆಚ್ಚಿಗೆ ಉತ್ತೇಜನ ಕೊಡಬೇಕೆಂಬ ತತ್ವವನ್ನು ಒಪ್ಪಿಕೊಂಡರೂ ಮಾಲೀಕನಾಗಿರತಕ್ಕವನಿಗೆ ಅದರ ಬೆಲೆಯನ್ನು ಕೊಡಬೇಕಾದದ್ದು ನಮ್ಮ ಕರ್ತವ್ಯ. ಈ ವಿಷಯದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಇದರಲ್ಲಿ ಒಂದು ವಿಷಯ. ಜಮೀನನ್ನು ನಾವು ತೆಗೆದುಕೊಂಡರೆ ಜಮೀನ್ ಮಾಲೀಕನಾದವನಿಗೆ ಪರಿಹಾರ ಕೊಡಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆ ಬರುತ್ತದೆ. ಕೊಡಬೇಕು ಎನ್ನುವುದು ನಮ್ಮ ಅಭಿಪ್ರಾಯ. ಇನ್ನು ಕೆಲವರ ಅಭಿಪ್ರಾಯ ಅದನ್ನು ಕೊಡಬಾರದು ಎಂದು. ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ನಾವು ಯಾವ ಕಾನ್‌ಸ್ಟಿಟ್ಯೂಷನ್ ಪ್ರಕಾರ ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದೇವೋ, ಅದರಲ್ಲಿ ಪರಿಹಾರವನ್ನು ಕೊಡದೆ ಯಾರ ಸ್ವತ್ತನ್ನೂ ತೆಗೆದುಕೊಳ್ಳಕೂಡದು ಎಂಬ ನಿಯಮವಿದೆ. ಆದರೆ ಎಷ್ಟೆಷ್ಟು ಕೊಡಬೇಕು ಎಂಬ ಪ್ರಶ್ನೆಯನ್ನು ಆಯಾಯ ಶಾಸನ ಸಭೆಗಳ ವಿವೇಚನೆಗೇ ಬಿಟ್ಟಿದ್ದಾರೆ. ಆದರೆ ಹಾಗೆ ಏನೂ ಪರಿಹಾರಕೊಡದೆ ದೋಚುವುದನ್ನು ಈಗಿರತಕ್ಕ ರಾಜ್ಯಾಂಗ ಒಪ್ಪುವುದಿಲ್ಲ.

ಇನ್ನು ಎರಡನೇ ಪ್ರಶ್ನೆ—ಕೆಲವು ಮಾನ್ಯ ಸದಸ್ಯರು ಹೇಳಿದರು—ರಾಜಪ್ರಮುಖರ ಭಾಷಣದ ಬಗ್ಗೆ ಪ್ರಸ್ತಾಪಮಾಡುವಾಗಲೂ ಇದು ಬಂದಿತ್ತು—ಉತ್ಪನ್ನ ಮಾಡತಕ್ಕ ಅಥವಾ ರೈತನು ಬೆಳೆಯತಕ್ಕ ಧಾನ್ಯಗಳಿಗೆ ಸರಿಯಾದ ಬೆಲೆಯನ್ನು ನಿಗದಿಮಾಡಿ, ಅದು ಅತನಿಗೆ ದೊರಕುವಂತೆ ಮಾಡಬೇಕು ಎಂದು. ಈ ಸಂಬಂಧವಾಗಿ ಎತ್ತಿರತಕ್ಕ ಒಂದು ವಾದವೇನೆಂದರೆ—ರೈತನ ಧಾನ್ಯಗಳಿಗೆ ಹೆಚ್ಚು ಬೆಲೆ ಬರುವಂಥ ಕಾಲದಲ್ಲಿ ನೀವು ಕಂಟ್ರೋಲ್ ಹಾಕಿ, ಅತನು ಬೆಳೆದ ಧಾನ್ಯಗಳ ಬೆಲೆಯು ಬಿದ್ದುಹೋದಾಗ ಸುಮ್ಮನಾಗುವುದು ಸರಿಯಲ್ಲ ಎಂಬುದು ಒಂದು. ಆದರೆ ತಾವು ಈ ವಿಚಾರವನ್ನು ಸ್ವಲ್ಪ ಸಾವಧಾನವಾಗಿ ಆಲೋಚನೆ ಮಾಡಬೇಕಾಗಿದೆ. ಶಾಸನ ಸಭೆಯೆಂಬುದು ಒಂದು ಪಕ್ಷಕ್ಕೆ ಸೇರಿದ್ದಲ್ಲ. ಒಂದು ವರ್ಗದವರಿಗಾಗಿ ಮಾಡಿರತಕ್ಕುದ್ದಲ್ಲ. ಇದು ಪಕ್ಷಾತೀತವಾದುದು, ವರ್ಗಾತೀತವಾದದು. ಈ ಒಂದು ಸಮನ್ವಯ ದೃಷ್ಟಿಯಿಂದ ತಾವೆಲ್ಲರೂ ಈ ಪ್ರಶ್ನೆಯನ್ನು ನೋಡಬೇಕಾಗಿದೆ, ಶ್ರೀಮಾನ್ ವಿ. ವೆಂಕಟಪ್ಪನವರು ಹೇಳಿದರು, ಹೆಚ್ಚಾಗಿ ಬೆಲೆ ಬರುವುದಾದರೆ ಅದಕ್ಕೆ ಎಲ್ಲಾ ನಿರ್ಬಂಧಗಳನ್ನೂ ಮಾಡುತ್ತಿದ್ದೀರಿ, ಆದರೆ ಧಾನ್ಯಗಳ ಬೆಲೆ ಕಡಮೆಯಾಗಿ, ಆತನಿಗೆ ನಷ್ಟವಾಗುವಂತಾದರೆ ಯಾರೂ ಕೇಳತಕ್ಕವರಿಲ್ಲ, ಎಂದು.

ಆದರೆ ಈ ವಾದ ಇದಕ್ಕೆ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಇದೇರೀತಿ ಪ್ರತಿಯೊಂದು ಕೈಗಾರಿಕೆಗಳವರೂ ಒಂದು ವಾದ ಹೂಡಬಹುದು. ರೈತನಿಂದ ನಾವು ಕಂದಾಯ ಒಂದನ್ನು ತೆಗೆದುಕೊಳ್ಳುತ್ತಿದ್ದರೆ, ಈ ಕೈಗಾರಿಕೆಗಳವರಿಂದ 3–4 ರೀತಿಯಲ್ಲಿ ತೆರಿಗೆಗಳನ್ನು ಎಂದರೆ, ಸೂಪರ್ ಟ್ಯಾಕ್ಸ್, ಇನ್‌ಕಂಟ್ಯಾಕ್ಸ್ ಇತ್ಯಾದಿ ತೆರಿಗೆಗಳನ್ನು ಅವರಿಂದ ತೆಗೆದುಕೊಳ್ಳುತ್ತೇವೆ. ಇಂಥ ಒಂದು ವಾದ ಬರೀ ಒಬ್ಬರೈತನಿಗೆ ಅನ್ವಯಿಸುವುದಿಲ್ಲ. ಎಲ್ಲ ಕೈಗಾರಿಕೆಗಳವರಿಗೂ ಇದನ್ನು ಅನ್ವಯಿಸಬೇಕಾಗುತ್ತದೆ. ನಾವು ಇದನ್ನು ಒಂದು ಪಾರ್ಟಿ ದೃಷ್ಟಿಯಿಂದ ಶಾಸನ ಮಾಡಿದರೆ ಅಷ್ಟು ಸಮಂಜಸವಾಗಿರುವುದಿಲ್ಲ. ಆದರೆ ರೈತನನ್ನು ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಕೈಬಿಡಬೇಕೆಂಬುದು ನನ್ನ ವಾದವಲ್ಲ. ಈ ರೀತಿ ಮಾಡಿದ್ದೇ ಆದರೆ ನಮ್ಮ ಆರ್ಥಿಕ ಪರಿಸ್ಥಿತಿ ಬಲು ಬೇಗ ತಲೆಕೆಳಗಾಗುತ್ತದೆ. ಈ ದೃಷ್ಟಿಯಿಂದ ನಾವು ಇದನ್ನು ಪರಿಶೀಲನೆ ಮಾಡಬೇಕು. ರೈತನಿಗೊಬ್ಬನಿಗೆ ಈ ದಿವಸ ನಾವು ಅಭಿಮಾನ ತೋರಿಸಿದರೆ ಮಿಕ್ಕವರೆಲ್ಲರಿಗೂ ಇದೇ ಅಭಿಮಾನವನ್ನು ತೋರಿಸಬೇಕಾಗುತ್ತದೆ.

In the language of planning, first priority must be given to food production and the agriculturist guaranteed a minimum profitable price.

ಈ ರೀತಿಯಾಗಿ ಅಮೇರಿಕಾ, ಇಂಗ್ಲೆಂಡ್ ಮುಂತಾದ ಕಡೆಗಳಲ್ಲೆಲ್ಲಾ ಮಾಡಿದ್ದಾರೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಂಸ್ಥೆಯವರೂ ಸಹ ಶ್ರೀ ಕುಮಾರಪ್ಪ ಸಮಿತಿ ಎಂಬುದಾಗಿ ಒಂದನ್ನು ಮಾಡಿದ್ದರು. ಆ ಸಮಿತಿಯವರೂ ಕೂಡ Minimum profitable price for agricultural produce must be guaranteed to the agriculturists, ಎಂಬದಾಗಿ ಶಿಫಾರಸು ಮಾಡಿದ್ದಾರೆ. ಈ ವಿಷಯವು ನಾನು ಭಾಗವಹಿಸಿದ ಕೆಲವು ವರ್ಕಿಂಗ್ ಕಮಿಟಿ ಮೀಟಿಂಗುಗಳಲ್ಲಿ ಚರ್ಚೆಗೆ ಬಂದಿತ್ತು. ಅದೃಷ್ಟವಶಾತ್ ಶ್ರೀ ವಿ. ಟಿ. ಕೃಷ್ಣಮಾಚಾರಿಯವರು ಇದೇ ರೀತಿ ಸಲಹೆ ಮಾಡಿರುವ ಹಾಗೆ ಕಾಣುತ್ತದೆ. ಕಷ್ಟಪರಿಸ್ಥಿತಿಯಲ್ಲಿದ್ದಾಗ ರೈತನಾದವನಿಗೆ ತನ್ನನ್ನು ಕೈಹಿಡಿದು ಎತ್ತತಕ್ಕವರಿದ್ದಾರೆ ಎಂಬ ಒಂದು ಭರವಸೆಯನ್ನು ಉಂಟುಮಾಡಿ ತನ್ಮೂಲಕ ಅವನು ಹೆಚ್ಚು ಆಹಾರವನ್ನು ಬೆಳೆಯುವಂತೆ ಮಾಡಬೇಕೆಂದೇ ನಮ್ಮ ಎಲ್ಲರ ಆಸೆ. ಆದರೆ ನಮ್ಮ ಮೈಸೂರು ಶಾಸನ ಸಭೆ ಕೇಂದ್ರದವರ ಅಧೀನದಲ್ಲಿರತಕ್ಕ ಇಂಥ ಒಂದು ವಿಚಾರದಲ್ಲಿ ಕೈ ಹಾಕಿ ಒಂದು ಶಾಸನವನ್ನು ಮಾಡುವುದಕ್ಕೆ ಸಾಧ್ಯವಿದೆಯೆ ಎಂಬುದನ್ನು ತಾವೆಲ್ಲರೂ ಪರಿಗಣಿಸಬೇಕಾಗಿದೆ. ನಾನಾಗಲೇ ಹೇಳಿರುವ ಹಾಗೆ ರೈತನಿಗೆ ಒಂದು ರಕ್ಷಣೆ ಕೊಡತಕ್ಕದ್ದು ನಮ್ಮ ಕರ್ತವ್ಯ. ನಮ್ಮ ಕೈಲಾದುದ

ನ್ನೆಲ್ಲಾ ಮಾಡೋಣ. ಅದೂ ಸಾಧ್ಯವಾಗದಿದ್ದರೆ ಬೇರೆಯವರಿಗಾದರೂ ಶಿಫಾರಸ್ಸು ಮಾಡೋಣ.

ಇನ್ನು ಪ್ರಿವಿಪರ್ಸಿನ ವಿಚಾರವಾಗಿ ಶ್ರೀ ಹಾರ್ಕ ಗೋಪಾಲ ಗೌಡರು ಒಂದು ಪ್ರಶ್ನೆಯನ್ನೆತ್ತಿದ್ದಾರೆ. ಅದಕ್ಕೆ ಆಗಲೇ ಶ್ರೀ ಮಾರ್ಕ ಎಂ. ಶಂಕರಲಿಂಗೇಗೌಡರು ಉತ್ತರವನ್ನೂ ಹೇಳಿಬಿಟ್ಟಿದ್ದಾರೆ. ಇದನ್ನು ಮೈಸೂರು ಸರ್ಕಾರದವರು ಕೊಡುವುದಿಲ್ಲ, ಇಂಡಿಯಾ ಸರ್ಕಾರದವರು ಕೊಡುತ್ತಿದ್ದಾರೆ. ಇದನ್ನು ಏನೋ ಒಂದು ಚಾರಿತ್ರಿಕ ಕಾರಣದಮೇಲೆ ಒಪ್ಪಂದ ಮಾಡಿಕೊಂಡಿದ್ದೇವೆ. ಇಂಡಿಯಾ ದೇಶದಲ್ಲಿ ಈ ದಿವಸ ಎಷ್ಟುರಾಜ ಮನೆತನದವರಿದ್ದಾರೆಯೋ, ಎಂದರೆ ಸುಮಾರು ನಾಲ್ಕುನೂರು ರಾಜ ಮಹಾರಾಜರುಗಳಿಗೆಲ್ಲಾ ಈ ರೀತಿ ಒಂದು ಒಪ್ಪಂದ ಆಗಿ ಈ ಅನುಕೂಲವಾಗಿದೆಯೇ ವಿನಾ ಮೈಸೂರಿನ ರಾಜರೊಬ್ಬರಿಗೆ ಮಾತ್ರ ಈ ಒಂದು ದಾಕ್ಷಿಣ್ಯ ಅಥವಾ ರಿಯಾಯಿತಿಯನ್ನು ತೋರಿಸಿರುವುದಿಲ್ಲ. ಆದ್ದರಿಂದ ಎಲ್ಲರಿಗೂ ಏನು ಅನ್ವಯಿಸುತ್ತದೆಯೋ ಆ ಕಾನೂನು ಅವರಿಗೂ ಕೂಡ ಅನ್ವಯಿಸುತ್ತದೆ. ನಾವು ಯಾರೂ ಕೂಡ ಶ್ರೀಮನ್ಮಹಾರಾಜರೊಬ್ಬರಮೇಲೆ ಮಾತ್ರ ನಮ್ಮ ಕಟುವಾದ ದೃಷ್ಟಿಯನ್ನು ಬೀರಬೇಕಾಗಿಲ್ಲ.

Sri Mulka GOVINDA REDDY.—It applies to all the princes in India.

ಶ್ರೀ ಕೆ. ಹನುಮಂತಯ್ಯನವರು.—ಅದೊಂದು ವಾದವಿದೆ. I must take the Members into my confidence. ಶ್ರೀಮನ್ಮಹಾರಾಜರು ಈ ದಿವಸ 26 ಲಕ್ಷ ಮತ್ತು ರಾಜಪ್ರಮುಖರ ಅಲೋಯನ್ಸ್ ಎಂದಿರುವ 3 ಲಕ್ಷ ರೂಪಾಯಿಗಳು ಇಷ್ಟನ್ನು ಖರ್ಚು ಮಾಡಿದರೆ ನಾವೇನೂ ಚಿಂತೆ ಮಾಡಬೇಕಾಗಿಲ್ಲ. ಅದಕ್ಕಿಂತ ಹೆಚ್ಚಾದ ಮೊಬಲಗು ನಾನಾ ರೂಪದಲ್ಲಿ ಈ ದಿವಸ ಖರ್ಚಾಗುತ್ತಿದೆ. ನಾನು ಶ್ರೀಮನ್ಮಹಾರಾಜರೊಡನೆ ಈ ವಿಷಯಗಳಲ್ಲಿ ಅರಿಕೆಮಾಡಿಕೊಳ್ಳುತ್ತಿದ್ದೇನೆ. 'ನೀವು ಒಪ್ಪಂದದ ಪ್ರಕಾರ ಯಾವ 26 ಲಕ್ಷವಿದೆಯೋ ಅದನ್ನು ತೆಗೆದುಕೊಳ್ಳಿ; ರಾಜಪ್ರಮುಖರ ಅಲೋಯನ್ಸ್ ಎಂದು ಇಂಡಿಯಾ ಸರ್ಕಾರದವರು ಏನೊಂದು ನಿಗದಿಮಾಡಿದ್ದಾರೋ ಅದನ್ನೂ ತೆಗೆದುಕೊಳ್ಳಿ; ಅದಕ್ಕೆ ಮೇಲ್ಪಟ್ಟು ಒಂದು ಕಾಸೂ ಕೂಡ ನೀವು ತೆಗೆದುಕೊಳ್ಳದೆ ಈ ಸರ್ಕಾರಕ್ಕೆ ಸಹಾಯ ಮಾಡಿ, ಪ್ರಜೆಗಳಿಗೆ ಸಹಾಯಮಾಡಿ' ಎಂದು ನಾನು ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಅವರು ಆ ರೀತಿ ದೊಡ್ಡ ಮನಸ್ಸು ಮಾಡುತ್ತಾರೆಂಬ ನಂಬಿಕೆ ನನಗಿದೆ. ಇನ್ನು ನಾನು ಈ ವಿಷಯದಲ್ಲಿ ಹೆಚ್ಚಾಗಿ ಪ್ರಸ್ತಾಪ ಮಾಡಬೇಕಾಗಿಲ್ಲ.

ಕೊನೆಯದಾಗಿ ಶ್ರೀ ಹಾರ್ಕ ಗೋಪಾಲಗೌಡರು ಒಂದು ತಾತ್ವಿಕವಾದ ಪ್ರಶ್ನೆಯನ್ನು ಎತ್ತಿದರು. ಅದಕ್ಕೆ ಉತ್ತರ ಕೊಡುವುದು ಸೂಕ್ತ ಎಂದು ಎನಿಸುತ್ತಿದೆ. ಆಹಾರ ಮಂತ್ರಿಗಳು ಅವರ ಜೀವಮಾನದಲ್ಲೇ ಸತ್ಯಾಗ್ರಹ ಮಾಡಲಿಲ್ಲ ಎಂದು ಹೇಳಿದರು; ಹಾಗೆ ಮಾಡಿದ್ದರೆ ಅವರಿಗೆ ಅದರ ಅರ್ಥ ಗೊತ್ತಾಗುತ್ತಿತ್ತು ಎಂದು ಹೇಳಿದರು. ಆದರೆ ನಾನು ಸತ್ಯಾಗ್ರಹ ಮಾಡಿದ್ದೇನೆಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಆ ಅನುಭವ ನನಗೆ ಸ್ವಲ್ಪ ಇದೆ ಎಂಬುದನ್ನು ಅವರಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ನನಗೆ ಸೋಷಿಯಲಿಸ್ಟ್ ಪಕ್ಷವನ್ನು ಕಂಡರೆ ಕೋಪವೇನೂ ಇಲ್ಲ. ನಾನು ಮನಸ್ಸನ್ನು ಬಿಚ್ಚಿ ಹೇಳುವುದಾದರೆ ಸೋಷಿಯಲಿಸ್ಟ್ ಪಕ್ಷದಲ್ಲಿರುವ ಅನೇಕರು ನಮ್ಮ ಕಾಂಗ್ರೆಸ್ ಸಂಸ್ಥೆಯಲ್ಲಿದ್ದ ಹಿರಿಯಾಳುಗಳೇ ಆಗಿದ್ದಾರೆ. ದೇಶದ ಸ್ವಾತಂತ್ರ್ಯವನ್ನು ಸಂಪಾದಿಸುವುದರಲ್ಲಿ ಸೋಷಿಯಲಿಸ್ಟ್ ಪಕ್ಷದವರು ಹಿಂದೆ ಬಹಳ ಸಹಾಯ ಮಾಡಿದ್ದಾರೆ. ಆದ್ದರಿಂದ ಒಂದು ಸಹೋದರ ಭಾವನೆಯಿಂದ ಹಾಗೆ ಸಹಾಯಮಾಡಿದರು ಎನ್ನಿಸುತ್ತದೆ. ಸತ್ಯಾಗ್ರಹ ಎಂಬುದನ್ನು ಮಹಾತ್ಮ ಗಾಂಧಿಯವರು ವಿಶದೀಕರಿಸಿ ಯಾವಾಗ ಮಾಡಬೇಕೆಂಬುದನ್ನು ಹೇಳಿದ್ದಾರೆ. ಯಾವಾಗ ಕಾನ್‌ಸ್ಟಿಟ್ಯೂಷನಲ್ ಮೆಥಡ್ಸ್‌ಗೆ ಅವಕಾಶವಿಲ್ಲವೋ ಆಗ ಸತ್ಯಾಗ್ರಹ ಮಾಡಬೇಕಾಗುತ್ತದೆ. ಹಿಂದಿದ್ದ ಸರ್ಕಾರದಲ್ಲಿ ವಯಸ್ಕರ ಮತದಾನ ಪದ್ಧತಿಯಂತೆ ಓಟುಮಾಡುವ ಅಧಿಕಾರವನ್ನು ಕೊಟ್ಟು ಅದರಿಂದ ಜವಾಬ್ದಾರಿ ಸರ್ಕಾರ ಸ್ಥಾಪಿಸಿ ಅಥವಾ ಸ್ವಾತಂತ್ರ್ಯವಾಗಿ ಕೊಡಿ ಎಂದು ಹೇಳಿ ಅದನ್ನು ಕಾನ್‌ಸ್ಟಿಟ್ಯೂಷನಲ್ ಮೆಥಡ್ಸ್‌ನಲ್ಲಿ ಸಾಧಿಸುವುದಕ್ಕೆ ಸಾಧ್ಯವಿರಲಿಲ್ಲ. ಈಗ ನಾವು ಹೊಸ ರಾಜ್ಯಾಂಗವನ್ನು ಸ್ಥಾಪಿಸಿರುವುದರಿಂದ ಅದಕ್ಕೆ ಅವಕಾಶವಿದೆ. ಹಿಂದೆ ಇಂಡಿಯಾದೇಶದ ಜನರೆಲ್ಲಾ ಓಟುಕೊಟ್ಟರೂ ವೈಸರಾಯರ ಆಜ್ಞೆಯಂತೆ ನಡೆಯಬೇಕೆಂದು ವಿಧಿಯಿತ್ತು. ಆಗಿದ್ದ ಕೇಂದ್ರ ಶಾಸನ ಸಭೆಗೆ ಮತ್ತು ಪ್ರಾಂತಗಳ ಮತ್ತು ಸಂಸ್ಥಾನಗಳ ಶಾಸನ ಸಭೆಗಳಿಗೆ ಈಗಿನಂತೆ ಸರ್ಕಾರದಲ್ಲಿ ಪೂರ್ಣ ಅಧಿಕಾರವಿರಲಿಲ್ಲ. ಮಂತ್ರಿಮಂಡಲ ರಚಿಸಿ ಶಾಸನವನ್ನು ಅಂಗೀಕಾರಮಾಡುವ ಸರ್ವಾಧಿಕಾರ ಹಿಂದಿರಲಿಲ್ಲ. ಈಗ ರಾಜ್ಯಾಂಗದ ಪ್ರಕಾರ ಸರ್ವಾಧಿಕಾರಬಂದಿದೆ. ಅಕಸ್ಮಾತ್ತಾಗಿ ಈಮಹಾಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಓಟು ಬಾರದೇಹೋಗಿದ್ದರೆ ಬೇರೆ ಪಕ್ಷಕ್ಕೆ ಓಟು ಬಂದಿದ್ದರೆ ಅವರೇ ಮಂತ್ರಿ ಮಂಡಲವನ್ನು ರಚಿಸುವ ಅವಕಾಶ, ಅವರಿಗೆ ಇದ್ದೇಇತ್ತು. ಆಗ ಅವರ ನೀತಿಯೇನಿದೆಯೋ ಅದನ್ನೆಲ್ಲಾ ಕಾರ್ಯರೂಪಕ್ಕೆ ತರಲು ಯಾರೂ ಅಡ್ಡಿ ಬರುತ್ತಿರಲಿಲ್ಲ. ಆದ್ದರಿಂದ ಜನರ ಸಮ್ಮತಿಯನ್ನು ಪಡೆದು ಸೋಷಿಯಲಿಸ್ಟ್ ಪಕ್ಷವಲ್ಲದೆ ಇಂಡಿಯಾದೇಶದಲ್ಲಿರುವ ವಿಶಿಷ್ಟ ಕಮ್ಯುನಿಸ್ಟ್ ಮೊದಲಾದ ಪಕ್ಷಗಳು ಬೇಕಾದರೂ ಸರ್ಕಾರ ಸ್ಥಾಪಿಸಲು ಅವಕಾಶವಿದೆ. Therefore constitutional means is guaranteed under the constitution to every party. ಆದ್ದರಿಂದತಾವು ಜನರ ಮುಂದೆ ಪ್ರಚಾರ ಮಾಡಿ ತಮ್ಮ ತತ್ವವನ್ನು ತಿಳಿಸಿ ಜನರನ್ನೊಪ್ಪಿಸಿ ಓಟುಪಡೆಯಿರಿ, ಸರ್ಕಾರರಚಿಸಿ, ಅನಂತರ ಏನು ಶಾಸನ ಬೇಕಾದರೂ ಮಾಡಿ. ಆ ರೀತಿ ಮಾಡದೆ ಆ ಸಮಯ ಕಾಯದೆ ಸತ್ಯಾಗ್ರಹ ಮಾಡಿದರೆ ಪ್ರಜಾಪ್ರಭುತ್ವದ ತಲೆಗೆ ಕೊಡಲಿ ಏಟು ಹಾಕಿದ ಹಾಗಾಗುತ್ತದೆ. ನೀವು ಈ ದಿವಸ ಸತ್ಯಾಗ್ರಹ ಮಾಡುತ್ತೇವೆಂದು ಹೇಳಬಹುದು. ನಾಳೆ ನಾನು ಪ್ರತಿಪಕ್ಷಕ್ಕೆ ಬಂದರೆ ಸತ್ಯಾಗ್ರಹ ಇನ್ನೂ ಹೆಚ್ಚಾಗಿ ಮಾಡಲು ದೇವರು ನನಗ ಶಕ್ತಿಕೊಟ್ಟಿದ್ದಾನೆ. ಆದ್ದರಿಂದ ಆ ರೀತಿ ಪಾರ್ಟಿ ಸರ್ಕಾರವನ್ನು ಈ ಪ್ರಜಾಪ್ರಭುತ್ವ ಯುಗದಲ್ಲಿ ಪ್ರತಿಭಟಿಸುವುದಕ್ಕೆ ನೀವುಗಳು ಸತ್ಯಾಗ್ರಹವನ್ನು ಪ್ರಾರಂಭಿಸಿದರೆ ಅದೇ ಚಾಳಿಯಾಗಿ ಪರಿಣಮಿಸುತ್ತದೆ. ಕೆ. ಎಂ. ಪಿ. ಪಕ್ಷದವರು ಕಾಂಗ್ರೆಸ್ ಅಧಿಕಾರಕ್ಕೆ ಬರಲಿ, ಸತ್ಯಾಗ್ರಹ ಪ್ರಾರಂಭಿಸುತ್ತೇವೆ ಎಂದು ಹೇಳುತ್ತಿದ್ದರು.

Democratic structure itself will collapse. I appeal to him to see that the working of the democracy is safeguarded.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—On a point of explanation. ಇಲ್ಲಿ ಸರ್ಕಾರ ಉರುಳಿಸಬೇಕೆಂದು ಸತ್ಯಾಗ್ರಹ ಮಾಡಲಿಲ್ಲ. ಸರ್ಕಾರಕ್ಕೆ ಕಷ್ಟ ತಿಳಿಯಲಿ, ಅದರಿಂದ ಸಹಾಯ ದೊರೆಯಲಿ ಎಂಬ ಉದ್ದೇಶದಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಕಾನ್‌ಸ್ಟಿಟ್ಯೂಷನಲ್ ಮೆಥಡ್‌ನಲ್ಲಿ ನಮಗೆ ನಂಬಿಕೆಯಿದೆ.

ಶ್ರೀ ಕೆ. ಹನುಮಂತಯ್ಯನವರು.—ಸ್ವಾಮಿ, ಮುಲ್ಕ ಗೋವಿಂದರೆಡ್ಡಿಯವರು ತಿಳಿಸಬೇಕಾದ ವಿಚಾರವಿದ್ದರೆ ನಮ್ಮ ಮನೆಗೆ ಬಂದು ಸೌಮನಸ್ಯದಿಂದ ತಿಳಿಸಿದರೆ ಮನಸ್ಸಿಗೆ ಚೆನ್ನಾಗಿ ಅಂಟುತ್ತದೆಯೇ ಹೊರತು ಬೀದಿಯಲ್ಲಿ ಕೂಗಿದರೆ ಚೆನ್ನಾಗಿ ಕೇಳುವುದಿಲ್ಲ. ಆದ್ದರಿಂದ ಈ ಸತ್ಯಾಗ್ರಹವೆಂಬುದು ಪ್ರಜಾಪ್ರಭುತ್ವ ಸಂಪೂರ್ಣವಾಗಿ ಸ್ಥಾಪನೆಯಾಗಿರುವ ಯಾವ ದೇಶದಲ್ಲೂ ಕೂಡ ಮಾಡುವುದಕ್ಕೆ ಅವಕಾಶವಿಲ್ಲ. ನಾವು ಹಿಂದಿನ ಚರಿತ್ರೆ ನೋಡಿದರೆ ಪಾಶ್ಚಾತ್ಯದೇಶಗಳಲ್ಲಿ ಪ್ರಜಾಪ್ರಭುತ್ವವಿರುವ ಕಡೆ ಎಲ್ಲೂ ಕೂಡ ಕಾನೂನನ್ನು ಬದಲಾಯಿಸಬೇಕೆಂದು ಸತ್ಯಾಗ್ರಹ ಮಾಡುವ ತಂಟೆಗೆ ಪ್ರಜೆಗಳು ಹೋಗುವದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ಇಂಗ್ಲೆಂಡಿನಲ್ಲಿ ಯಾವುದೋ ಒಂದು ಪಕ್ಷ ಮಾಡಿದೆ. ಈ ದಿವಸ ಅನೇಕ ದೇಶಗಳಲ್ಲಿ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಿರುವ ಕಮ್ಯೂನಿಸ್ಟ್ ಪಕ್ಷ ಮಾಡಿದೆ.

ಶ್ರೀ ಕೆ. ಹನುಮಂತಯ್ಯನವರು.—ಇಂಗ್ಲೆಂಡಿನಲ್ಲಿ ಲೇಬರ್‌ಪಕ್ಷ ಮಾಡಿಲ್ಲ. ಕಮ್ಯೂನಿಸ್ಟ್ ಪಕ್ಷದ ಉದಾಹರಣೆಯನ್ನು ತಾವು ತೆಗೆದುಕೊಳ್ಳಬಾರದು. ಏಕೆಂದರೆ ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ.

They want to establish what is called proletarian dictatorship. They have no faith in democracy. Therefore you should not follow their idealogy and policies.

Sri Mulka GOVINDA REDDY.—That is not so in India.

ಶ್ರೀ ಕೆ. ಹನುಮಂತಯ್ಯನವರು.—ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಅದರ ತತ್ವಗಳಲ್ಲಿ ಮತ್ತು ಸಂಪ್ರದಾಯದಲ್ಲಿ ನಂಬಿಕೆಯಿರುವವರು ಸತ್ಯಾಗ್ರಹಕ್ಕೆ ಕೈ ಹಾಕಬಾರದು ಎಂಬುದು ನನ್ನ ಪ್ರಾರ್ಥನೆ. ಈಗಾಗಲೇ ಸುಮಾರು ಒಂದು ಗಂಟೆ ಕಾಲವಾಯಿತು. ಮುಖ್ಯವಾದ ವಿಷಯವನ್ನು ನಾನು ಪ್ರಸ್ತಾಪಮಾಡದೆ ಹಾಗೇ ಬಿಟ್ಟಿದ್ದೆ; ಅದಾವುದೆಂಬುದು ತಮಗೆ ಗೊತ್ತು. ಆಹಾರದ ಹತೋಟಿ ಹೋಗಬೇಕೆ, ಅಥವಾ ಯಾವರೀತಿ ಮಾಡಬೇಕೆಂಬುದೇ ಆ ವಿಚಾರ. ಅದನ್ನು ಪ್ರತ್ಯೇಕವಾಗಿ ಚರ್ಚೆಮಾಡೋಣ. ಚರ್ಚೆಯಾದನಂತರ ಸರ್ಕಾರದ ಅಖೈರು ನಿರ್ಧಾರವನ್ನು ನಾನು ಸಭೆಯ ಅವಗಾಹನೆಗೆ ತರುತ್ತೇನೆ. ಆದರೆ ಕಾಲದ ದೃಷ್ಟಿಯಿಂದ ಸಭೆಯಲ್ಲಿ ಒಂದು ಪ್ರಾರ್ಥನೆ. ಈ ವಿಷಯವೇನೂ ಹೊಸದಲ್ಲ. ಚರ್ವಿತ ಚರ್ವಣವಾಗಿ ಬಹಳ ಕಾಲದಿಂದ ಚರ್ಚೆಯಾಗಿದೆ. ಆದ್ದರಿಂದ ಅದಕ್ಕೇ ಒಂದು ಧಿವಸ ತೆಗೆದುಕೊಳ್ಳದೆ ಅರ್ಧದಿವಸವಾದರೆ ಸಾಕು; ನನಗಾಗಲಿ ಅಥವಾ ಆಹಾರ ಮಂತ್ರಿಗಳಿಗಾಗಲಿ 15 ನಿಮಿಷಕಾಲ ಕೊಟ್ಟರೆ ಸಾಕು.

ಜನಾಬ್ ಜೆ. ಮಹಮದ್ ಇಮಾಂರವರು.—ಒಂದು ದಿವಸ ಅವಕಾಶ ಕೊಟ್ಟರೆ ಉತ್ತಮ.

Let us err on the safe side.

Sri K. HANUMANTHAIYA.—My point s, let us not err at all.

Janab J. MOHAMED IMAM.—To err is human even though he is a Minister.

ಶ್ರೀ ಕೆ. ಹನುಮಂತಯ್ಯನವರು.—ಆದ್ದರಿಂದ ನಾನು ಸರ್ಕಾರದ ಪರವಾಗಿ ಮತ್ತು ಸಭಾನಾಯಕನಾಗಿ ಹೇಳುವುದು ಏನೆಂದರೆ, ಈ ಕಾರ್ಯಕಲಾಪಕ್ಕೆ ಅರ್ಧ ದಿವಸ ವಿನಾಸಲಾಗಿಡೋಣ; ಆ ದಿವಸ ಈ ವಿಷಯವನ್ನು ಚರ್ಚೆಮಾಡಿ ತೀರ್ಮಾನವನ್ನು ತೆಗೆದುಕೊಳ್ಳೋಣ.

Sri Kadidal MANJAPPA.—Last year an agreement was arrived at in regard to cut motions.

Mr. SPEAKER.—I see from the list that numerous cut motions are tabled under each head. I need hardly suggest that it would be very desirable for Members to come to some understanding among themselves so that only important cut-motions covering almsot all departments may be selected for discussion.

The House will now rise and meet to-morrow at 12 NOON.

The Assembly adjourned at Thirty-two Minutes past Five of the Clock to meet again at Twelve of the Clock on Tuesday, 1st July 1952.